ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

‘ನಿಮಗೂ ಶುಜಾತ್ ಗತಿಯಾದೀತು’

ಪತ್ರಕರ್ತರನ್ನು ಬೆದರಿಸಿದ ಜಮ್ಮು-ಕಾಶ್ಮೀರ ಬಿಜೆಪಿ ಶಾಸಕ

ಚೌಧರಿಲಾಲ್ ಸಿಂಗ್



ಸಂಪುಟ 12 | ಸಂಚಿಕೆ 27 | ಜುಲೈ 02–08, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com





ದಲಿತ, ಆದಿವಾಸಿ, ಮಹಿಳೆಯರಿಗೆ ವಿಶ್ವಾಸಘಾತ

ಫುಟ್‌ಬಾಲ್ ವಿಶ್ವಕಪ್-2018





ಬಿಜೆಪಿಯ ತುರ್ತು ಪರಿಸ್ಥಿತಿ



ಗೋನಾಳ ದಲಿತ ದೌರ್ಜನ್ಯ : ವಿಧಾನಸೌಧ ಚಲೋ

ಬಂಗಾಳ, ತ್ರಿಪುರಾಗಳಲ್ಲಿ ಪ್ರಜಾಪ್ರಭುತ್ವ ಕಗ್ಗೊಲೆ : ದೇಶವ್ಯಾಪಿ ಪ್ರತಿಭಟನೆ

ICDS ಉಳಿಸಿ: ಅಂಗನವಾಡಿ ಬೇಡಿಕೆ ದಿನಾಚರಣೆ - ಜುಲೈ 10



ಹಾಸ್ಟೆಲ್ ನೌಕರರ ಅನಿರ್ದಿಷ್ಟ ಧರಣಿ

ಸಿಪಿಐ(ಎಂ) ಕೇಂದ್ರಸಮಿತಿ ಕರೆ: 4 ವರ್ಷಗಳ ದುರಾಡಳಿತದ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆ

ಚುನಾವಣಾ ಸುಧಾರಣೆಗಳಿಗಾಗಿ ದೇಶವ್ಯಾಪಿ ಪ್ರಚಾರಾಂದೋಲನ

ಪಶ್ಚಿಮ ಬಂಗಾಲ, ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ

ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿಗಾಗಿ ಜನಪರ ಮಧ್ಯಪ್ರವೇಶಕ್ಕೆ ರಾಷ್ಟ್ರೀಯ ಸಮಾವೇಶ

ಜೂನ್ 22 ರಿಂದ 24 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಮೋದಿ ಸರಕಾರದ ನಾಲ್ಕು ವರ್ಷಗಳ ಆಡಳಿತವನ್ನು ಪರಾಮರ್ಶಿಸಿ ಅದರ ಜನ–ವಿರೋಧಿ ಕ್ರಮಗಳು ಮತ್ತು ಧೋರಣೆಗಳು, ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಮುರಿದು ಬಿದ್ದಿರುವುದು ಹಾಗೂ ಜನತೆಯ ಸಂವಿಧಾನಿಕ ಹಕ್ಕುಗಳ ಉಲ್ಲಂಘನೆಗಳು ಮುಂತಾದ ಎಲ್ಲ ಪ್ರಶ್ನೆಗಳ ಮೇಲೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಅಲ್ಲದೆ

* ಸಪ್ಟಂಬರ್ 5ರಂದು 'ಸಂಸದ್ ಚಲೋ'ಗೆ ಕಾರ್ಮಿಕ ವರ್ಗ ಮತ್ತು ರೈತ–ಕೃಷಿ ಕೂಲಿಕಾರ ಸಂಘಟನೆಗಳು ಕೊಟ್ಟಿರುವ ಜಂಟಿ ಕರೆಗೆ ಕೇಂದ್ರ ಸಮಿತಿ ಬೆಂಬಲ ವ್ಯಕ್ತಪಡಿಸಿದೆ. ಸಹಿಸಂಗ್ರಹ ಚಳುವಳಿ ಮತ್ತು ಆಗಸ್ಟ್ 9ರಂದು ರೈತ–ಕಾರ್ಮಿಕರ ಜೈಲ್ ಭರೋ ಕಾರ್ಯಾಚರಣೆಗೂ ಕೇಂದ್ರ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.
* ತುರ್ತು ಚುನಾವಣಾ ಸುಧಾರಣೆಗಳಿಗೆ ಪ್ರಚಾರಾಂದೋಲನ: ಚುನಾವಣಾ ಸುಧಾರಣೆಗಳು ತುರ್ತಾಗಿ ನಡೆಯಬೇಕು ಎಂದು ಆಗ್ರಹಿಸಿ ಒಂದು ರಾಷ್ಟ್ರವ್ಯಾಪಿ ಪ್ರಚಾರಾಂದೋಲನ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ವಿಚಾರ ಸಂಕಿರಣಗಳು, ಸಮಾವೇಶಗಳು, ಸಾರ್ವಜನಿಕ ಸಭೆಗಳ ಮೂಲಕ ಇದನ್ನು ನಡೆಸಲಾಗುವುದು. ಇದರಲ್ಲಿ ಚುನಾವಣೆಗಳಲ್ಲಿ ಭಾಗಶಃ ಪಟ್ಟಿಯೊಂದಿಗೆ ಆನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ, ಹೆಚ್ಚುತ್ತಿರುವ ಹಣಶಕ್ತಿಯ ಪ್ರಭಾವ ಮತ್ತು ವಿವಿಧ ಜನವಿಭಾಗಗಳ ನಡುವೆ ವೈರತ್ವವನ್ನು ಸೃಷ್ಟಿಸಿ ದ್ವೇಷದ ವಾತಾವರಣವನ್ನು ಆಳಗೊಳಿಸುತ್ತಿರುವುದನ್ನು ತಡೆಯುವುದು, ಇದಕ್ಕಾಗಿ ಈಗಿರುವ ಚುನಾವಣಾ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವ ಕುರಿತ ಸಿಪಿಐ(ಎಂ) ನಿಲುವಿನ ಪ್ರತಿಪಾದನೆಯೂ ಸೇರಿದೆ. ರಾಜಕೀಯ ಪಕ್ಷಗಳಿಗೆ ನಿಧಿನೀಡಿಕೆಯನ್ನು ಪಾರದರ್ಶಕಗೊಳಿಸಬೇಕು, ಮೋದಿ ಸರಕಾರ ತಂದಿರುವ ಚುನಾವಣಾ ಬಾಂಡ್‌ಗಳನ್ನು ಮತ್ತು ಎಫ್‌ಸಿಆರ್‌ಎ(ವಿದೇಶಿ ವಂತಿಗೆಗಳ ನಿಯಂತ್ರಣ ಕಾಯ್ದೆ) ತಿದ್ದುಪಡಿಯನ್ನು, ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕಾದ ಅಗತ್ಯವನ್ನು ಕೂಡ ಪ್ರಚಾರಾಂದೋಲನ ಎತ್ತಿ ತೋರಿಸಲಿದೆ. ಮುಂದಿನ ಮೂರು ತಿಂಗಳಲ್ಲಿ ದೇಶಾದ್ಯಂತ ಈ ಪ್ರಚಾರಾದೋಲನವನ್ನು ನಡೆಸಲಾಗುವುದು ಎಂದು ಕೇಂದ್ರ ಸಮಿತಿ ಹೇಳಿದೆ.
* ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ಜುಲೈ ತಿಂಗಳಲ್ಲಿ ಒಂದು ರಾಷ್ಟ್ರೀಯ ಮಟ್ಟದ ಪ್ರತಿಭಟನೆ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.
* ಜಮ್ಮು ಮತ್ತು ಕಾಶ್ಮೀರದಲ್ಲಿ ಉಂಟಾಗುತ್ತಿರುವ ಗಂಭೀರ ಪರಿಸ್ಥಿತಿಯನ್ನು ಕುರಿತಂತೆ, ಆ ರಾಜ್ಯದಲ್ಲಿ ಶಾಂತಿ ಮತ್ತು ಸಾಮಾನ್ಯ ಪರಿಸ್ಥಿತಿಯನ್ನು ನೆಲೆಗೊಳಿಸಲು ಜನಪರ ಮಧ್ಯಪ್ರವೇಶಕ್ಕಾಗಿ ಒಂದು ರಾಷ್ಟ್ರೀಯ ಮಟ್ಟದ ಸಮಾವೇಶವನ್ನು ನಡೆಸಲು ಅದು ನಿರ್ಧರಿಸಿದೆ.

ಸಭೆಯ ನಂತರ ಹೊರಡಿಸಿರುವ ಕೇಂದ್ರ ಸಮಿತಿಯ ಹೇಳಿಕೆಯ ಇತರ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ:

ಕೇರಳ ಎಲ್‌ಡಿಎಫ್ ಗೆ ಪ್ರಶಂಸೆ

ಸಿಪಿಐ(ಎಂ) ಕೇಂದ್ರ ಸಮಿತಿ ಕೇರಳದ ಎಲ್‌ಡಿಎಫ್ ಸರಕಾರ ರಾಜ್ಯದಲ್ಲಿ ಗಾಬರಿ ಉಂಟುಮಾಡಿದ ನಿಪಾಹ್ ವೈರಸ್ ಹರಡದಂತೆ ತಡೆದಿರುವ ರೀತಿಗೆ ಅದನ್ನು ಅಭಿನಂದಿಸಿದೆ. ರಾಜ್ಯ ಸರಕಾರದ ಪ್ರಯತ್ನಗಳು ವಿಶ್ವ ಆರೋಗ್ಯ ಸಂಘಟನೆ ಸೇರಿದಂತೆ ಅಂತರ್ರಾಷ್ಟ್ರೀಯ ಸಂಸ್ಥೆಗಳ ಪ್ರಶಂಸೆಗೆ ಪಾತ್ರವಾಗಿವೆ.

ಮೋದಿ ಸರಕಾರದ ನಾಲ್ಕು ವರ್ಷಗಳು

ಮೋದಿ ಸರಕಾರದ ನಾಲ್ಕು ವರ್ಷಗಳ ಪರಾಮರ್ಶೆಯನ್ನು ಕೈಗೊಂಡ ಕೇಂದ್ರ ಸಮಿತಿ ನಾಲ್ಕು ವರ್ಷಗಳು ಜನಗಳ ಜೀವನಾಧಾರಗಳ ಮೇಲೆ ಅಭೂತಪೂರ್ವ ದಾಳಿಗಳನ್ನು, ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಳ್ಳುವುದರೊಂದಿಗೆ ಮುಸ್ಲಿಮರು ಮತ್ತು ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ಕಂಡಿವೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳು ಹಾಗೂ ಸ್ವತಂತ್ರ ಸಂವಿಧಾನಿಕ ಪ್ರಾಧಿಕಾರಗಳನ್ನು ಶಿಥಿಲಗೊಳಿಸುತ್ತಿರುವುದನ್ನು ಕಂಡಿವೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಅವ್ಯಾಹತ ಏರಿಕೆಗಳು ಕೋಟ್ಯಂತರ ಬಳಕೆದಾರರ ಮೇಲಿನ ಹೊರೆಗಳನ್ನು ಹೆಚ್ಚಿಸುವುದಲ್ಲದೆ, ಅದರಿಂದಾಗಿ ಹಣದುಬ್ಬರದ ಸುರುಳಿ ಸುತ್ತಿಕೊಳ್ಳಲು ಕಾರಣವಾಗಿದೆ, ನೋಟುರದ್ದತಿ ಮತ್ತು ಜಿಎಸ್‌ಟಿ ಯ ಕಾರಣಗಳಿಂದ ಆರ್ಥಿಕ ಚಟುವಟಿಕೆಗಳು ದುರ್ಬಲಗೊಂಡಿರುವ ಸನ್ನಿವೇಶದಲ್ಲೂ ಹಣದುಬ್ಬರ ದರ ಏರುವಂತಾಗಿದೆ. ಈ ನಾಲ್ಕು ವರ್ಷಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳನ್ನು ಈ ಸರಕಾರ ಹನ್ನೊಂದು ಬಾರಿ ಹೆಚ್ಚಿಸಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಕೇಂದ್ರ ಸಮಿತಿ ಗಮನ ಸೆಳೆದಿದೆ.

ಕೃಷಿ ಸಂಕಟ ಏರುತ್ತಲೇ ಇದೆ, ರೈತರ ಹತಾಶ ಆತ್ಮಹತ್ಯೆಗಳು ಬಿಡುವಿಲ್ಲದಂತೆ ನಡೆಯುತ್ತಲೇ ಇವೆ. ರೈತಾಪಿ ಜನಗಳ ದೊಡ್ಡ ಮತ್ತು ಸಮರಧೀರ ಹೋರಾಟಗಳಿಂದಾಗಿ ವಿವಿಧ ರಾಜ್ಯಗಳ ಬಿಜೆಪಿ ಸರಕಾರಗಳು ಹಲವಾರು ಆಶ್ವಾಸನೆಗಳನ್ನು ಕೊಟ್ಟವು, ಆದರೆ ಇವುಗಳಲ್ಲಿ ಯಾವುದನ್ನೂ ಜಾರಿಗೆ ತಂದಿಲ್ಲ. ಇನ್ನೊಂದು ಸುತ್ತಿನ ಸಮರಧೀರ ಕಾರ್ಯಾಚರಣೆಗಳು, ಹೋರಾಟಗಳು ಬರಲಿವೆ ಎಂದು ಕೇಂದ್ರ ಸಮಿತಿ ಹೇಳಿದೆ.

ದೇಶಾದ್ಯಂತ, ವಿಶೇಷವಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಒಟ್ಟಾರೆ ವಾತಾವರಣ ಹಿಂಸಾಚಾರವನ್ನು ಹುಟ್ಟಿಸುತ್ತಿದೆ. 'ಗೋರಕ್ಷಣೆ' ಮತ್ತು 'ನೈತಿಕ ಪೋಲೀಸ್‌ಗಿರಿ'ಯ ಹೆಸರಲ್ಲಿ ಖಾಸಗಿ ಸೇನೆಗಳು ನಡೆಸುತ್ತಿರುವ ಹಿಂಸಾಚಾರವಲ್ಲದೆ, ಜನಜಂಗುಳಿಗಳು ಹೊಡೆದು ಸಾಯಿಸುವುದು, ಭೀಕರ ಸಾಮೂಹಿಕ ಬಲಾತ್ಕಾರಗಳು ಮತ್ತು ಅಪ್ರಾಪ್ತವಯಸ್ಕರ ಕೊಲೆಗಳು ಹೆಚ್ಚುತ್ತಿವೆ. ಇವುಗಳಲ್ಲಿ ಇತ್ತೀಚಿನದ್ದು ಝಾರ್ಖಂಡಿನಲ್ಲಿ ಐವರು ಮಹಿಳೆಯರ ಭೀಕರ ಸಾಮೂಹಿಕ ಬಲಾತ್ಕಾರ. ಬಿಜೆಪಿ ಸರಕಾರ ಎಫ್‌ಐಆರ್ ದಾಖಲಿಸಲು, ತಪ್ಪಿತಸ್ಥರನ್ನು ಶಿಕ್ಷಿಸಲು ನಿರಾಕರಿಸಿದೆ. ಇದು ಇಂತಹ ಖಾಸಗಿ ಸೇನೆಗಳಿಗೆ ನೀಡುವ ಕೃಪಾಪೋಷಣೆ, ಈ ಮೂಲಕ ನಮ್ಮ ಸಮಾಜವನ್ನು ಅಮಾನವೀಯಗೊಳಿಸಲಾಗುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಬಿಜೆಪಿ ಸರಕಾರದ ಅಡಿಯಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣವಾಗಿ ಮುರಿದು ಬಿದ್ದಿದೆ. ಜನತೆಯ ಸಂವಿಧಾನಿಕ ಹಕ್ಕುಗಳನ್ನು ಸಾರಾಸಗಟು ಉಲ್ಲಂಘಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಈ ಎಲ್ಲ ಪ್ರಶ್ನೆಗಳ ಮೇಲೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಸಾರ್ವಜನಿಕ ಹಣದ ಬೃಹತ್ ಲೂಟಿ –ಸರಕಾರ ಮೂಕಪ್ರೇಕ್ಷಕ

ಕೆಲವು ಕಾರ್ಪೊರೇಟ್ ಗುಂಪುಗಳು ಬೃಹತ್‌ಪ್ರಮಾಣದಲ್ಲಿ ಸಾರ್ವನಿಕ ಹಣದ ಲೂಟಿ ಮಾಡುತ್ತಿವೆ ಎಂದು ಗಮನಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ, ಮೋದಿ ಸರಕಾರದ ಮೊದಲ ಮೂರು ವರ್ಷಗಳಲ್ಲಿ 2.5ಲಕ್ಷ ಕೋಟಿ ರೂ.ಗಳಷ್ಟು ಕಾರ್ಪೊರೇಟ್‌ಗಳ ಸುಸ್ತಿ ಸಾಲಗಳನ್ನು ಮಾಫಿ ಮಾಡಿದ್ದಲ್ಲದೆ, ಮತ್ತೆ 1,44,993 ಕೋಟಿ ರೂ.ಗಳನ್ನು ಕೂಡ ಮಾಫಿ ಮಾಡಿದೆ ಎಂದು ವರದಿಯಾಗಿದೆ. ಭಾರತೀಯ ರಿಝರ್ವ್ ಬ್ಯಾಂಕ್(ಆರ್ ಬಿ ಐ) ದೇಶದಲ್ಲಿರುವ ಬ್ಯಾಂಕುಗಳ 1.65 ಲಕ್ಷ ಶಾಖೆಗಳ

ಪುಟ 14 ನೋಡಿ



ಕೇಂದ್ರ ಸಮಿತಿಗೆ ಸೇರ್ಪಡೆ

22ನೇ ಮಹಾಧಿವೇಶನ ಕೇಂದ್ರ ಸಮಿತಿಯಲ್ಲಿ ಖಾಲಿ ಬಿಟ್ಟಿರುವ ಒಂದು ಸ್ಥಾನಕ್ಕೆ ಅಲ್ಲಿ ಹೊಸದಾಗಿ ಆಯ್ಕೆಯಾದ ಕೇಂದ್ರಸಮಿತಿ ಒಬ್ಬ ಮಹಿಳಾ ಸಂಗಾತಿಯನ್ನು ಸೇರಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿತ್ತು. ಕೇಂದ್ರ ಸಮಿತಿ ಆ ಸ್ಥಾನಕ್ಕೆ ಎ.ಆರ್. ಸಿಂಧು ಅವರನ್ನು ಸೇರ್ಪಡೆ ಮಾಡಲು ನಿರ್ಧರಿಸಿದೆ. ಇವರು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾಗಿದ್ದಾರೆ.

ಎಪ್ರಿಲ್ 2ರ ನಂತರ ಬಿಜೆಪಿ ದಲಿತರ ಮೇಲೆ ಭಯೋತ್ಪಾದನೆ ಮುಂದುವರಿಕೆ ನ್ಯಾಯ ಒದಗಿಸಲು ರಾಷ್ಟ್ರಪತಿಗಳಿಗೆ ಡಿಎಸ್‌ಎಂಎಂ ಮನವಿ

ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ನಿಯೋಗವೊಂದು ಜೂನ್ 27ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಮನವಿಪತ್ರವೊಂದನ್ನು ಸಲ್ಲಿಸಿದೆ. ಎಪ್ರಿಲ್2ರ ನಂತರ ಉತ್ತರಪ್ರದೇಶ, ಮಧ್ಯಪ್ರದೇಶ, ಹರ್ಯಾಣ ಮತ್ತು ರಾಜಸ್ಥಾನದಲ್ಲಿ ದಲಿತರ ಮೇಲೆ ಹರಿಯಬಿಟ್ಟಿರುವ ಭಯೋತ್ಪಾದನೆಯ ವಿವರಗಳು ಈ ಮನವಿ ಪತ್ರದಲ್ಲಿವೆ.

ಎಪ್ರಿಲ್ 2ರ ನಂತರ ಇಲ್ಲಿನ ಸರಕಾರಗಳೂ ಹಗೆಸಾಧಕ ರೀತಿಯಲ್ಲಿ ವರ್ತಿಸುತ್ತಿವೆ. 10 ದಲಿತರು ಈ ಘಟನೆಗಳಲ್ಲಿ ಕೊಲೆಯಾದರು. ಆದಿನ ಬಹಿರಂಗವಾಗಿಯೇ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಿದವರ ಫೋಟೋಗಳು ಇದ್ದರೂ ಇವರಲ್ಲಿ ಯಾರನ್ನೂ ಬಂಧಿಸಿಲ್ಲ. ಕೊಲೆಯಾದವರ ಕುಟುಂಬಗಳಿಗೆ ಯಾವುದೇ ಪರಿಹಾರ ನೀಡಿಲ್ಲ. ನಿಜ ಹೇಳಬೇಕೆಂದರೆ ಸಹಾನುಭೂತಿಯನ್ನೂ ಈ ಸರಕಾರಗಳು ವ್ಯಪಡಿಸಿಲ್ಲ. ಮತ್ತೊಂದೆಡೆಯಲ್ಲಿ ಸಾವಿರಾರು ದಲಿತರನ್ನು ಬಂಧಿಸಲಾಗಿದೆ, ಜಾಮೀನು ಕೊಡದೆ ಜೈಲಿಗೆ ಹಾಕಲಾಗಿದೆ. ಕರಾಳ ಶಾಸನಗಳ ಅಡಿಯಲ್ಲಿ ಇನ್ನೂ ಸಾರಾರು ಜನರಿಗೆ ಬಂಧನದ ಬೆದರಿಕೆ ಹಾಕಲಾಗಿದೆ. ಉತ್ತರಪ್ರದೇಶದಲ್ಲಿ ಅಪ್ರಾಪ್ತ ವಯಸ್ಸಿನವರನ್ನೂ ಬಂಧಿಸಿ ವಯಸ್ಕ ಕ್ರಿಮಿನಲ್‌ಗಳ ಜತೆಗೇ ಇಡಲಾಗಿದೆ. ಮನವಿ ಪತ್ರದ ಮೂಲಕ ಇದನ್ನು ರಾಷ್ಟ್ರಪತಿಗಳ ಗಮನಕ್ಕೆ ತರಲಾಯಿತು.

ಮಹಾರಾಷ್ಟ್ರದ ಭೀಮಾ–ಕೋರೆಗಾಂವ್‌ನಲ್ಲಿ ಹಿಂಸಾಚಾರ ನಡೆಸಿದವರು ಆರಾಮವಾಗಿ ತಿರುಗಾಡಿಕೊಂಡಿದ್ದಾರೆ, ಆದರೆ ಮೇಲ್ಜಾತಿ ಜನಜಂಗುಳಿಯಿಂದ ಹಲ್ಲೆ. ಲೂಟಿಗಳಲ್ಲಿ ಗಾಯಗೊಂಡವರ ನೆರವಿಗೆ ಹೋದವರನ್ನು ಬಂಧಿಸಲಾಗಿದೆ. ಅವರ ಮೇಲೆ ರಾಜದ್ರೋಹದಂತಹ ಆಪಾದನೆಗಳನ್ನೂ ಹೊರಿಸಲಾಗಿದೆ ಎಂದು ರಾಷ್ಟ್ರಪತಿಗಳ ಗಮನಕ್ಕೆ ತಂದ ನಿಯೋಗ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಸುಳ್ಳು ಕೇಸಿನ ಮೇಲೆ ಜೈಲುಗಳಲ್ಲಿ ನರಳುತ್ತಿರುವ ಮುಗ್ಧರಿಗೆ ನ್ಯಾಯ ಒದಗಿಸಬೇಕು ಎಂದು ವಿನಂತಿಸಿಕೊಂಡಿತು.

ನಿಯೋಗ ಮುಂದಿಟ್ಟ ವಿಷಯಗಳನ್ನು ರಾಷ್ಟ್ರಪತಿಗಳು ಸಹಾನುಭೂತಿಯಿಂದ ಆಲಿಸಿದರು ಮತ್ತು ಮನವಿ ಪತ್ರವನ್ನು ಗಮನವಿಟ್ಟು ಓದಿ, ತಾನು ಖಂಡಿತವಾಗಿ ಈ ಬಗ್ಗೆ ವರದಿಗಳನ್ನು ತರಿಸಿಕೊಳ್ಳುತ್ತೇನೆ, ಸಾಧ್ಯವಿರುವುದನ್ನು ಮಾಡುತ್ತೇನೆ ಎಂದು ಎರಡೆರಡು ಬಾರಿ ಹೇಳಿದರು ಎಂದು ನಿಯೋಗ ತಿಳಿಸಿದೆ.

ಡಿಎಸ್‌ಎಂಎಂನ ಉಪಾಧ್ಯಕ್ಷರಾದ ಸುಭಾಷಿಣಿ ಅಲಿ ಮತ್ತು ಜಂಟಿ ಕಾರ್ಯದರ್ಶಿ ನಾಥು ಪ್ರಸಾದ್ ಈ ನಿಯೋಗದಲ್ಲಿದ್ದರು.

ಝಾರ್ಖಂಡ್‌ನಲ್ಲಿ ಐವರು ಕಾರ್ಯಕರ್ತೆಯರನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ: ಎಐಡಿಡಬ್ಲ್ಯುಎ ಖಂಡನೆ

ಝಾರ್ಖಂಡ್ ರಾಜ್ಯದ ಖುಂತಿ ಜಿಲ್ಲೆಯ ಕೊಚಾಂಗ್ ಗ್ರಾಮದಲ್ಲಿ ಜೂನ್ 19ರಂದು ವಲಸೆ ಮತ್ತು ಮಾನವ ಸಾಗಣೆಯಂತಹ ಮಹತ್ವದ ಸಾಮಾಜಿಕ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನದಲ್ಲಿ ತೊಡಗಿದ್ದ ಎನ್‌ಜಿಒ ವೊಂದರ ಐವರು ಮಹಿಳೆಯರನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಬಂದೂಕಿಟ್ಟು ಈ ಹೀನ ಕೃತ್ಯ ಎಸಗಿದ್ದಲ್ಲದೆ ಇದರ ವಿರುದ್ಧ ದೂರು ನೀಡಬಾರದು ಎಂದು ಆದೇಶಿಸಿರುವುದು ಈ ಬಿಜೆಪಿ ಆಳ್ವಿಕೆಯ ರಾಜ್ಯದಲ್ಲಿ ಸಂಪೂರ್ಣ ಕಾನೂನುಹೀನತೆ ಮತ್ತು ಭಯೋತ್ಪಾದನೆಯ ವಾತಾವರಣ ವ್ಯಾಪಿಸಿದೆ ಎನ್ನುವುದನ್ನು ಬಿಂಬಿಸುತ್ತದೆ ಎಂದು ಅದು ಹೇಳಿದೆ. ಸ್ಥಳೀಯ ಆಡಳಿತ ಮಹಿಳೆಯರಿಗೆ ರಕ್ಷಣೆ ಮತ್ತು ಭದ್ರತೆ ನೀಡುವಲ್ಲಿ ವಿಫಲವಾಗಿರುವುದನ್ನೂ ಇದು ತೋರಿಸುತ್ತದೆ ಎಂದು ಹೇಳಿದೆ.

ಇದೇನೂ ಅಪರೂಪದ ಘಟನೆಯಲ್ಲ. ಇದನ್ನು, ಸಂವಿಧಾನಬಾಹಿರ ಮತ್ತು ಸ್ವಯಂನೇಮಿತ ಕಾವಲುಕೋರ ಗುಂಪುಗಳಿಗೆ ಜನಗಳನ್ನು ಬಡಿದು ಸಾಯಿಸಲು, ಅತ್ಯಾಚಾರ, ಕೊಲೆ, ಲೂಟಿ ನಡೆಸಲು ಮುಕ್ತ ಅವಕಾಶ ನೀಡಿರುವ ಪ್ರಸಕ್ತ ವಾತಾವರನದಲ್ಲಿ ನೋಡಬೇಕಾಗಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ಅವರಿಗೆ ಕಾನೂನಿನ ಭಯವಿಲ್ಲ, ಏಕೆಂದರೆ ಇವೆಲ್ಲದಕ್ಕೆ ಅವರಿಗೆ ತಮ್ಮ ರಾಜಕೀಯ ಯಜಮಾನರುಗಳ ಒಪ್ಪಿಗೆ ಇದೆ. ಇದು ಮಹಿಳೆಯರನ್ನು ಬೆದರಿಸಿ, ಅಡಿಯಾಳಾಗಿಸುವ, ಸಾಮಾಜಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳಿಂದ ಹೊರಹಾಕುವ ಒಂದು ಹಿಂಸಾತ್ಮಕ ಪ್ರಯತ್ನ ಎಂದು ಅದು ವರ್ಣಿಸಿದೆ.

ಇತ್ತೀಚೆಗೆ ಜಮ್ಮುವಿನ ಕಠುವಾದಲ್ಲಿ ಅತ್ಯಾಚಾರದ ಆಪಾದನೆಗೊಳಗಾಗಿರುವವವರಿಗೆ ಬೆಂಬಲವಾಗಿ ಬಿಜೆಪಿ–ಆರೆಸ್ಸೆಸ್ ಶಾಸಕರು, ಮುಖಂಡರೇ ನಿಂತಿರುವುದು ಮೋದಿ ಆಡಳಿತದ 'ಬೇಟಿ ಬಚಾವೊ ಘೋಷಣೆಯ ಟೊಳ್ಳನ್ನು ಬಯಲಿಗೆಳೆಯುತ್ತದೆ ಎಂದು ಎಐಡಿಡಬ್ಲ್ಯುಎ ಟೀಕಿಸಿದೆ. ರಾಜ್ಯದ ರಾಜಧಾನಿಯಿಂದ ಕೇವಲ 80ಕಿ.ಮೀ. ದೂರದಲ್ಲಿ ಈ ಕರಾಳ ಘಟನೆ ನಡೆದಿರುವುದು ದೇಶಾದ್ಯಂತ ಈಗ 'ಬಿಜೆಪಿಯಿಂದ ಬೇಟಿ ಬಚಾವೊ' ಘೋಷಣೆಯನ್ನು ಎತ್ತುವ ಕಾಲ ಬಂದೇ ಬಿಟ್ಟಿದೆ ಎಂಬುದನ್ನು ತೋರಿಸುತ್ತದೆ. ನಿಜವಾದ ಅಪರಾಧಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು, ಈ ಸಂತ್ರಸ್ತ ಮಹಿಳೆಯರು ಮತ್ತು ಸಾಕ್ಷಿಗಳಿಗೆ ರಕ್ಷಣೆಯನ್ನು ಲಭ್ಯಗೊಳಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸುವಂತೆ ತನ್ನ ಘಟಕಗಳಿಗೆ ಅದು ಕರೆ ನೀಡಿದೆ.

ಸಂಪಾದಕೀಯ

ಕಾಂಗ್ರೆಸಿನೊಳಗೆ ಅಪಾಯಕಾರಿ ಭಿನ್ನಮತ

ಮೈತ್ರಿ ಸರಕಾರ ಇನ್ನೂ ಟೇಕ್ ಆಫ್ ಆಗಿಲ್ಲ ಎಂಬ ರಾಜ್ಯದ ಜನತೆ ಆತಂಕ ಪಡುತ್ತಿದ್ದರೆ, ಸರಕಾರ ನಿಂತಲ್ಲೇ ಕುಸಿಯುತ್ತಿರುವಂತೆ ಕಾಣುತ್ತಿದೆ. ಕಾಂಗ್ರೆಸಿನಲ್ಲಿ ಭಿನ್ನಮತೀಯ ಚಟುವಟಿಕೆ ಜೋರಾಗುತ್ತಿರುವ ಲಕ್ಷಣಗಳು ಕಾಣುತ್ತಿವೆ. ಈ ಭಿನ್ನಮತೀಯ ಚಟುವಟಿಕೆಗಳಿಗೆ ಸಿದ್ಧರಾಮಯ್ಯ ಅವರೇ ಕೇಂದ್ರವಾಗಿರುವಂತೆ ಕಾಣುತ್ತಿದೆ. ಧರ್ಮಸ್ಥಳದ ಶಾಂತಿವನದಲ್ಲಿ ಚಿಕಿತ್ಸೆಗೆಂದು ತಂಗಿದ್ದ ಸಿದ್ಧರಾಮಯ್ಯ ಅವರು ಆಪ್ತರೊಂದಿಗೆ ನಡೆಸಿದ ಸಂಭಾಷಣೆಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಲೀಕ್ ಆದ ಅಡಿಯೋ ತುಣುಕುಗಳು ವಿರೋಧ ಪಕ್ಷ ಬಿಜೆಪಿಗೂ ಅದರ ಬಾಲಬಡುಕ ಮಾಧ್ಯಮಗಳಿಗೂ ಬಹಳ ಹರುಷ ತಂದಿವೆ. ಮೈತ್ರಿ ಸರಕಾರದ ಆಯುಷ್ಯ 1 ವರ್ಷ, ಪೂರಕ ಬಜೆಟ್ ಮಂಡಿಸಿದರೆ ಸಾಕು, ಮತ್ತು ಜೆಡಿ–ಎಸ್ ಸಾಲಮನ್ನಾ ಆಶ್ವಾಸನೆಗಳು ಸಾಧ್ಯವಿಲ್ಲ – ಎಂಬಿತ್ಯಾದಿ ಹೇಳಿಕೆಗಳು, ಹೈ ಕಮಾಂಡ್ ಈ ಬಗ್ಗೆ ತನ್ನ ಧೋರಣೆ ಪ್ರಕಟಿಸಿದ ಮೇಲೂ ಬಂದಿರುವುದು ಗಂಭೀರ ಪರಿಸ್ಥಿತಿ ಉಂಟು ಮಾಡುವ ಸಾಧ್ಯತೆಯಿದೆ.



ಬಜೆಟ್ ಮತ್ತು ಸಾಲಮನ್ನಾದ ಬಗ್ಗೆ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಅಂತಿಮಗೊಳಿಸುವವರೆಗೂ ಮುಂದುವರೆಯುವುದು ಬೇಡ. ಪ್ರಮುಖ ನಿರ್ಣಯಗಳನ್ನು ಸಮನ್ವಯ ಸಮಿತಿ ತೆಗೆದುಕೊಳ್ಳಬೇಕು ಎಂಬುದು ಸಿದ್ಧರಾಮಯ್ಯನವರ ಧೋರಣೆ ಎಂದು ಹೇಳಲಾಗಿದೆ. ಇದರಲ್ಲಿ ಹುರುಳಿದೆ ಎಂಬುದು ನಿಜ. ಮೈತ್ರಿ ಸರಕಾರಗಳು ನಡೆಯಬೇಕಾದ ಸರಿಯಾದ ವಿಧಾನ ಅದು. ಮೊದಲು ಕನಿಷ್ಟ ಸಾಮಾನ್ಯ ಕಾರ್ಯಕ್ರಮ, ಆ ಮೇಲೆ ಬಜೆಟ್. ಸರಕಾರದ ಪ್ರಮುಖ ನಿರ್ಣಯಗಳು ಹಾಗೂ ಎರಡು ಪಕ್ಷಗಳ ನಡುವೆ ಬರುವ ಸಮಸ್ಯೆಗಳು ಸಮನ್ವಯ ಸಮಿತಿಯಲ್ಲಿ ಚರ್ಚೆಯಾಗಬೇಕು. ಈ ಬಗ್ಗೆ ಎರಡೂ ಪಕ್ಷಗಳ ಹೈಕಮಾಂಡ್ ಕಾಳಜಿ ವಹಿಸದಿರುವುದು ಸಿದ್ಧರಾಮಯ್ಯನವರ ಆತಂಕಕ್ಕೆ ಕಾರಣವಾಗಿದೆ. ಅದು ಮಾತ್ರವಲ್ಲ ಬಹುಮತ ಬರದಿದ್ದದ್ದರಿಂದ ತನ್ನನ್ನು ಹೈ ಕಮಾಂಡ್ ನಿರ್ಲಕ್ಷಿಸುತ್ತಿದೆ. ಜೆಡಿ–ಎಸ್ ನಾಯಕತ್ವ ರಾಹುಲ್ ಗಾಂದಿ ಜತೆ ನೇರ ಚಾನೆಲ್ ಹೊಂದಿದ್ದು ಎಲ್ಲಾ ಪ್ರಮುಖ ನಿರ್ಣಯಗಳು ಸಮನ್ವಯ ಸಮಿತಿ ಬದಲು ಅಲ್ಲಿಯೇ ನಿರ್ಧಾರವಾಗುತ್ತಿದೆ. ತನ್ನ ಆಪ್ತ ಶಾಸಕರನ್ನು ಮತ್ತು ಅಧಿಕಾರಿಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂಬುದು ಸಿದ್ಧರಾಮಯ್ಯ ಅವರ ಆಕ್ರೋಶಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಒಳಗೂ ಸಚಿವ ಸ್ಥಾನ ಸಿಕ್ಕವರು ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಕ್ರಮಗಳನ್ನು ಸಮರ್ಥಿಸುತ್ತಿದ್ದು, ಉಳಿದ ಕೆಲವು ಸಚಿವ ಸ್ಥಾನ ಸಿಗದವರೂ ಸಿದ್ಧರಾಮಯ್ಯವರ ನಿಲುವನ್ನು ಬೆಂಬಲಿಸುತ್ತಿಲ್ಲ. ಹಿಂದೆ ಅವರ ಬೆಂಬಲಿಗರಾಗಿದ್ದವರೂ ತಮಗಾಗಿ ಅವರು ಏನೂ ಮಾಡಿಲ್ಲವೆಂದು ಅವರ ಬಳಿ ಸುಳಿಯುತ್ತಿಲ್ಲ. ಆದರೆ ಇತರ ಹಲವು ಅತೃಪ್ತ ಶಾಸಕರು ಅವರ ಸುತ್ತ ಅಣಿ ನೆರೆಯುತ್ತಿದ್ದು ಈಗ ಕಾಂಗ್ರೆಸ್ ಒಳಗೆ ಎರಡು ಬಣಗಳು ಆಗಿರುವ ಸೂಚನೆಗಳಿವೆ.

ಆದರೆ ಮುಖ್ಯಮಂತ್ರಿ ಜುಲೈ 2 ರಿಂದ 10 ದಿನಗಳ ವಿಧಾನ ಮಂಡಲ ಅಧಿವೇಶನ ಕರೆದಿದ್ದು ಜುಲೈ 5ರಂದು ಬಜೆಟ್ ಮಂಡಿಸಲಾಗುವುದು ಎಂದು ಘೋಷಿಸಿದ್ದಾರೆ. ಪರಮೇಶ್ವರ್, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಗಳ ನಿಲುವನ್ನು ಬೆಂಬಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯ ಅವರ ನಡೆ ಏನಿರುತ್ತದೆ ಎಂಬುದು ಮೈತ್ರಿ ಸರಕಾರದ ಭವಿಷ್ಯವನ್ನು ನಿರ್ಧರಿಸಲಿದೆ.

ಈ ನಡುವೆ ಒಂದು ಕಡೆ ಒಕ್ಕಲಿಗರ ಸ್ವಾಮಿಗಳು ಇನ್ನೊಂದು ಕಡೆ ಕುರುಬರ ಸ್ವಾಮಿಗಳು ನೇರವಾಗಿ ಈ ಪಕ್ಷ–ಜಾತಿ ರಾಜಕಾರಣದಲ್ಲಿ ನೇರ ಪ್ರವೇಶ ಮಾಡಿ ಪರಸ್ಪರ ಬೆದರಿಕೆಗಳನ್ನು ಹಾಕುತ್ತಿರುವುದು ರಾಜ್ಯದ ರಾಜಕಾರಣವನ್ನು ಇನ್ನಷ್ಟು ಕೆಳಮಟ್ಟಕ್ಕೆ ಒಯ್ದಿದೆ.

ಇವೆಲ್ಲದರ ಹಿನ್ನೆಲೆಯಲ್ಲಿ ಸರಕಾರ ಪೂರ್ಣವಾಗಿ ಕೆಲಸ ಆರಂಭಿಸಲು ಬೇಕಾದ ಪೂರ್ಣಪ್ರಮಾಣದ ಬಜೆಟ್, ಸಾಲಮನ್ನಾ ಮುಂತಾದ ತುರ್ತು ವಿಷಯಗಳ ಬಗ್ಗೆ ಸರಕಾರ ಗಮನ ಹರಿಸುವ ಭರವಸೆಯನ್ನು ಜನತೆಯಲ್ಲಿ ತರಬೇಕಾಗಿದೆ. ಇದಕ್ಕೆ ಆದಷ್ಟು ಬೇಗನೇ ಕನಿಷ್ಟ ಕಾರ್ಯಕ್ರಮ ಸಿದ್ಧವಾಗಬೇಕಾಗಿದೆ. ಸಮನ್ವಯ ಸಮಿತಿ ಸಕ್ರಿಯವಾಗಿ ಕೆಲಸ ಮಾಡಬೇಕಾಗಿದೆ. ಇಲ್ಲದಿದ್ದರೆ ಮೈತ್ರಿ ಸರಕಾರದಲ್ಲೂ ಅದರ ಎರಡು ಪಕ್ಷಗಳಲ್ಲೂ ಜನ ವಿಶ್ವಾಸ ಕಳೆದುಕೊಳ್ಳಲಿದ್ದಾರೆ ಎಂದು ಅವರು ಅರ್ಥ ಮಾಡಿಕೊಳ್ಳಬೇಕು.

"DBT ನಿಲ್ಲಿಸಿ, ICDS ಉಳಿಸಿ": ಜುಲೈ 10 ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ಅಂಗನವಾಡಿ ಯೂನಿಯನ್ ಕಾರ್ಯದರ್ಶಿ **ಎಚ್.ಎಸ್. ಸುನಂದ** ಅವರೊಂದಿಗೆ ರಾಜ್ಯ ಕೌನ್ಸಿಲ್ ಸಭೆಯ ಸಂದರ್ಭದಲ್ಲಿ ಜೂನ್ 23ರಂದು 'ಜನಶಕ್ತಿ'ಯ **ಪ್ರಶಾಂತ್ ಹಟ್ಟಿ** ನಡೆಸಿದ ಸಂದರ್ಶನ



ಪ್ರ: ಅಂಗನವಾಡಿ ನೌಕರರ ಯೂನಿಯನ್ ನಡೆಸಿರುವ ಕೌನ್ಸಿಲ್ ಸಭೆಯ ಉದ್ದೇಶವೇನು?

ಉ: ಸಾಮಾನ್ಯವಾಗಿ ವರ್ಷದಲ್ಲಿ ಮೂರು ಭಾರಿ ಕೌನ್ಸಿಲ್ ಸಭೆಯನ್ನ ಕರೆಯುತ್ತೇವೆ. ಜುಲೈ 10? ನೇ ತಾರೀಖು ಅಂಗನವಾಡಿ ನೌಕರರ 'ಬೇಡಿಕಾ ದಿನ'ವಾಗಿದೆ. ಈ ದಿನವನ್ನು ಹೇಗೆ ಆಚರಿಸಬೇಕು ಮತ್ತು ಸೆ.5 ರವರೆಗೆ ನಿರಂತವಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನುವುದನ್ನು ಮತ್ತು ಅಖಿಲ ಭಾರತ ಮಟ್ಟದಲ್ಲಿ ಹಲವು ಕರೆಗಳನ್ನು ಕೊಟ್ಟಿದೆ. ಆ ಕರೆಗಳನ್ನು ಜಾರಿ ಮಾಡಲಿಕ್ಕಾಗಿ ಇಲ್ಲಿ ಚರ್ಚೆಮಾಡಲಾಗುತ್ತಿದೆ. ಇದರಿಂದ ವ್ಯವಸ್ಥಿತವಾಗಿ ಜಾರಿಮಾಡುವಲ್ಲಿ ಸಂಘಟನೆ ಯಶಸ್ವಿಯಾಗಲಿದೆ. ಬಹುಮುಖ್ಯವಾಗಿ "Save ICDS" (ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಉಳಿಸಿ) ಎನ್ನುವಂತಹ ಬೇಡಿಕೆಯಾಗಿದೆ. 1975ರಲ್ಲಿ ಈ ಕಾರ್ಯಕ್ರಮವನ್ನು ಮಕ್ಕಳ ಅಪೌಷ್ಟಿಕತೆಯನ್ನು ತಡೆಗಟ್ಟಬೇಕು ಮತ್ತು ಮಕ್ಕಳ ಸಾವುಗಳನ್ನು ತಡೆಗಟ್ಟಲು ಸ್ಥಾಪಿಸಲಾಗಿತ್ತು. ಕೇಂದ್ರ ಸರ್ಕಾರ ಅವುಗಳನ್ನು ನಾಶಮಾಡುವತ್ತ ಧಾವಿಸುತ್ತಾ ಇದೆ. ಈ ಯೋಜನೆ ಅಡಿಯಲ್ಲಿ ಎಲ್ಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಪೂರೈಕೆ ಮಾಡಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿತ್ತು. ಈಗ ಕೇಂದ್ರ ಸರ್ಕಾರ ಈ ಯೋಜನೆಯನ್ನು ತೆಗೆದುಹಾಕಿ ನೇರ ನಗದು ವಿಧಾನ (ಡೈರೆಕ್ಟ್ ಬೆನೆಫಿಟ್ ಟ್ರಾನ್ಸ್ ಫರ್ – ಡಿಬಿಟಿ) ವನ್ನು ಜಾರಿಗೆ ತರುವುದಕ್ಕೆ ಆದೇಶ ಹೋರಡಿಸಿದೆ. ಮೋದಿ ಸರ್ಕಾರದ ಆಡಳಿತದ ಅವಧಿಯಲ್ಲಿ, ICDS ಕಾರ್ಯಕ್ರಮದ ವೆಚ್ಚದಲ್ಲಿ 60% ರಷ್ಟಿದ್ದ ಕೇಂದ್ರದ ಅನುದಾನದ ಭಾಗವನ್ನು 25% ರಷ್ಟಕ್ಕೆ ಇಳಿಸಿದೆ. ಅಂಗನವಾಡಿ ನೌಕರರು ಸಂಕಷ್ಟ ಅನುಭವಿಸುತ್ತಿರುವುದು ಮಾತ್ರವಲ್ಲದೆ, ಯೋಜನೆಯನ್ನೂ ಮುಚ್ಚಲು ಮುಂದಾಗಿದೆ. ಇವತ್ತು ಆ ಯೋಜನೆಯನ್ನು ಉಳಿಸಿಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ಕೌನ್ಸಿಲ್ ಸಭೆಯನ್ನು ಕರೆಯಲಾಗಿದೆ.

ಪ್ರ: ಜುಲೈ 10 ರಂದು ಯಾವ ರೀತಿ ಅಂಗನವಾಡಿಯ 'ಬೇಡಿಕಾ ದಿನ'ವನ್ನು ಆಚರಿಸುತ್ತೀರಿ? ಯಾವ ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸುತ್ತಿದ್ದೀರಿ?

ಉ: ರಾಜ್ಯಾದ್ಯಂತ ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸರ್ಕಾರದ ಮಂತ್ರಿ ಅಥವಾ ಪ್ರತಿನಿಧಿಗಳ ಮನೆಮುಂದೆ ಧರಣಿಯನ್ನು ಮಾಡುವುದು ಮತ್ತು ಅವರಿಗೆ ಮನವಿಯನ್ನು ಸಲ್ಲಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಮೂಲಕ ಕೇಂದ್ರ ಸರ್ಕಾರಕ್ಕೆ ನಗದು ರೂಪದ ವಿಧಾನವನ್ನು (ಡಿಬಿಟಿ) ಜಾರಿಮಾಡುವುದನ್ನು ವಾಪಾಸ್ ತೆಗೆದುಕೊಳ್ಳಬೇಕು, ಮತ್ತು ಕಡಿತ ಮಾಡಿರುವ ಅನುದಾನವನ್ನು ಏರಿಕೆ ಮಾಡಬೇಕು ಎಂದು ಆಗ್ರಹಮಾಡುತ್ತೇವೆ. 2012 ರಲ್ಲಿ ನೆಡೆದ 40 ನೇ ಐ.ಎಲ್.ಸಿ (ಭಾರತೀಯ ಕಾರ್ಮಿಕರ ಸಮ್ಮೇಳನ) ಶಿಫಾರಸಿನಲ್ಲಿ ಸ್ಕೀಮ್ ಕಾರ್ಮಿಕರಿಗೆ ಕನಿಷ್ಟ ಕೂಲಿ ಒದಗಿಸಬೇಕು ಮತ್ತು ಅವರಿಗೆ ಸಾಮಾಜಿಕ ಭದ್ರತೆ ನೀಡಬೇಕು ಎಂದು ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಭಾಷಣದಲ್ಲಿ ಹೇಳಿದ್ದರು. ಆದರೆ ಆರು ವರ್ಷಗಳಾದರೂ ಜಾರಿ ಮಾಡಿಲ್ಲ. ಅದನ್ನು ಜಾರಿ ಮಾಡಬೇಕು ಎನ್ನುವುದು ನಮ್ಮ ಬೇಡಿಕೆಯಾಗಿದೆ. ಅಲ್ಲದೆ LKG, UKG ರೀತಿಯ ಪ್ರಿ ಪ್ರೈಮರಿ ಶಾಲೆಗಳನ್ನು ಪ್ರಾರಂಭಿಸಬೇಕು. ಅದರಲ್ಲಿ ಅಂಗನವಾಡಿ ನೌಕರರನ್ನು ಶಿಕ್ಷಕರಾಗಿ ನೇಮಿಸಿಕೊಳ್ಳಬೇಕು. ಬಾಲ ವಿಕಾಸ ಸಮಿತಿ ಅಂತ ತೆಗೆದಿದ್ದಾರೆ. ಇದನ್ನು ತೆಗೆಯಬಾರದು ಅಂತ ಒಂದು ವರ್ಷಗಳ ಕಾಲ ವಿರೋಧವನ್ನು ಮಾಡಿದರೂ, ಆ ಯೋಜನೆಯಲ್ಲಿ ಕೆಲವು ಮಾರಕ ಅಂಶಗಳನ್ನು ಅಳವಡಿಕೆ ಮಾಡಿದ್ದಾರೆ. ಮಾರಕ ಅಂಶಗಳನ್ನು ಕೈ ಬಿಡುವವರೆಗೂ ನಾವು ಸಮಿತಿಗಳನ್ನು ರಚಿಸುವುದಿಲ್ಲ ಮತ್ತು ಮಾತೃಪೂರ್ಣವನ್ನು ನಿಲ್ಲಿಸುವುದಕ್ಕೂ ನಾವು ತಯಾರಾಗಿದ್ದೇವೆ ಎನ್ನುವುದನ್ನು ಬೇಡಿಕೆ ದಿನ ಎಚ್ಚರಿಸಲಿದ್ದೇವೆ.

ಪ್ರ: ಯಾವ ಮಾದರಿಯ ಅಂಗನವಾಡಿ ವ್ಯವಸ್ಥೆ ಜಾರಿಗೆ ಬರಬೇಕು ಎನ್ನುವುದನ್ನು ಹೇಳುತ್ತೀರಿ ?

ಉ: ಜನತೆ ಖಾಸಗಿ ಶಿಕ್ಷಣ ಸಂಸ್ಥೆಗಳ ರೀತಿಯಲ್ಲಿ ನಮ್ಮ ಮಕ್ಕಳು ಸಹ ಪಡೆಯಬೇಕು ಎನ್ನುವುದನ್ನು ಆಸೆ ಪಡುತ್ತಾ ಇದ್ದಾರೆ. ಹಾಗಾಗಿ ಆ ರೀತಿಯಾದ ವಾತಾವರಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರ ರೂಪಿಸಬೇಕು. ಅದಕ್ಕೆ ಬೇಕಾದ ಸ್ವಂತ ಕಟ್ಟಡ, ಮಕ್ಕಳ ಆಟವಾಡಲಿಕ್ಕೆ ಪೂರಕವಾದ ಸ್ಥಳ, ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಪೌಷ್ಟಿಕ ಗುಣಮಟ್ಟದ ಆಹಾರ ಪೂರೈಕೆ, ಆಟಿಕೆಗಳು ಇರಬೇಕು. ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕಾಗಿ ಕಾರ್ಯಕರ್ತರಿಗೆ ನಿರಂತರವಾಗಿ ತರಬೇತಿ ನೀಡಬೇಕು.

ಪ್ರ: ಸೆ. 5ರ ವರೆಗಿನ ಕಾರ್ಯಕ್ರಮ ರೂಪಿಸುತ್ತೇವೆ ಅಂತ ಆಗ ಹೇಳಿದ್ದೀರಿ. ಯಾವ ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ ?

ಉ: ಸೆ.5 ರಂದು ರೈತ ಕಾರ್ಮಿಕರು ಜತೆಗೂಡಿ ಪಾರ್ಲಿಮೆಂಟ್ ಚಲೋ ನಡೆಸಲಿದ್ದಾರೆ. ಇದನ್ನು 'ಕಿಸಾನ್ ಮಜದೂರ್ ಸಂಘರ್ಷ ರ್‍ಯಾಲಿ'. ಇದು ರೈತ ಕಾರ್ಮಿಕರ ಸಖ್ಯತೆಯನ್ನು ಬಲಪಡಿಸಲಿದೆ. ಇಂದು ರೈತ ಕಾರ್ಮಿಕರ ಸಖ್ಯತೆ ಅನಿವಾರ್ಯವಾಗಿದೆ.

ಪ್ರ: ರೈತ ಕಾರ್ಮಿಕರ ಸಖ್ಯತೆ ಇಂದು ಯಾಕೆ ಅನಿವಾರ್ಯವಾಗಿದೆ ?

ಉ: ಹೊಸ ಉದಾರೀಕರಣ ಆರ್ಥಿಕ ನೀತಿಗಳು ದೇಶದ ಎಲ್ಲಾ ದುಡಿಯುವ ವರ್ಗದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತಾ ಇವೆ. ಹೀಗಿರುವಾಗ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ ಉದ್ಯೋಗ ಮತ್ತು ಬದುಕಿನ ಮೇಲೆ ದಾಳಿಯನ್ನು ಹಿಮ್ಮೆಟ್ಟಿಸಲು ಎಲ್ಲ ದುಡಿಯುವ ವರ್ಗದ ಐಕ್ಯತೆಯ ಅನಿವಾರ್ಯತೆ ಇದೆ. ದೆಹಲಿಯಲ್ಲಿ ನಡೆಯುವ ರಾಷ್ಟ್ರಮಟ್ಟದ ಈ ಹೋರಾಟದಲ್ಲಿ ಕಾರ್ಮಿಕರೆಲ್ಲ ರೈತರ ಜೊತೆಗೂಡಿ ಪ್ರತಿಭಟಿಸಲಿದ್ದೇವೆ.

ನಾಳಿನ ಕಾರ್ಯಕ್ರಮಗಳು

- **"ICDS ಉಳಿಸಿ" ಅಂಗನವಾಡಿ ಬೇಡಿಕೆ ದಿನಾಚರಣೆ, ಜುಲೈ 10**
  ಅಂಗನವಾಡಿ ಯೂನಿಯನ್, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ
- **ಸಿಐಟಿಯು ಜಿಲ್ಲಾ ಜಾಥಾಗಳು**
  (ಜುಲೈ 2ನೇ ವಾರ – ಅಗಸ್ಟ್ 1ನೇ ವಾರ)
- **ರೈತರ ಜೈಲು ಭರೋ** ಅಗಸ್ಟ್ 9
  ದೇಶವ್ಯಾಪಿ, ರೈತ ಕೃಷಿಕೂಲಿಕಾರ ಸಂಘಟನೆಗಳು
- **ಅಹೋರಾತ್ರಿ ಸಾಮೂಹಿಕ ಜಾಗರಣೆ** ಅಗಸ್ಟ್ 14
  ಸಿಐಟಿಯು, ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ
- **ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ** ಸೆಪ್ಟೆಂಬರ್ 5
  ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಗೋನಾಳ್ ದಲಿತ ದೇವಣ್ಣನ ಮೇಲೆ ಕೈ ಕಡಿದು ಮಾರಣಾಂತಿಕ ಹಲ್ಲೆ



ಗೋನಾಳ್ ಗ್ರಾಮದಲ್ಲಿ ದಲಿತರು ಮತ್ತು ಸವರ್ಣೀಯರ ಮಧ್ಯೆ 2012 ರಲ್ಲಿ ಬಾಬು ಜಗಜೀವನರಾಮ್ ಮತ್ತು ಅಂಬೇಡ್ಕರರ ಫಲಕ ಹಾಕುವಾಗ ಜಾಗದ ವಿಷಯದಲ್ಲಿ ಜಗಳವಾಗಿತ್ತು. ತದನಂತರ ಕುರುಬ ಮತ್ತು ಮಾದಿಗ ಜನಾಂಗದ ಮಧ್ಯೆ ನಿರಂತರವಾದ ತಿಕ್ಕಾಟಗಳು ಪ್ರಾರಂಭವಾದವು. ಆಗ ಬಾಬು ಜಗಜೀವನರಾಮ್ ಫಲಕಕ್ಕೆ ಮಸಿ ಬಳಿದು ಚಪ್ಪಲಿ ಹಾರಹಾಕಿ ಅಪಮಾನ ಮಾಡಲಾಗಿತ್ತು ಮತ್ತೆ ಕ್ಷುಲಕ ಕಾರಣಕ್ಕಾಗಿ 2017 ಜನವರಿಯಲ್ಲಿ ಗೋನಾಳ್ ದಲಿತರಿಗೆ ಬಹಿಷ್ಕಾರ ಹಾಕಿದ್ದರು. ಈ ಸಂದರ್ಭವನ್ನು ತಿಳಿಗೊಳಿಸಲು ಸಮಾಜ ಕಲ್ಯಾಣ ಸಚಿವರಾಗಿದ್ದ ಹೆಚ್ ಆಂಜನೇಯ, ಎಸ್.ಸಿ, ಎಸ್.ಟಿ ಆಯೋಗದ ಅಧ್ಯಕ್ಷರು ಮತ್ತು ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳು ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಭೇಟಿ ನೀಡಿ ಶಾಂತಿ ಸಭೆ ನಡೆಸಿ ಬಂದಿದ್ದರು ಎನ್ನಲಾಗಿದೆ.

ತಿಳಿಗೊಂಡಿದೆ ಎನ್ನುವ ಹಾಗೆ ಇದ್ದ ಗೋನಾಳದಲ್ಲಿ ಮೇ 25 ರಂದು ಮಾದಿಗ ಜನಾಂಗಕ್ಕೆ ಸೇರಿದ ದೊಡ್ಡ ದೇವಣ್ಣ ಜತೆ, ಕುರುಬ ಜಾತಿಗೆ ಸೇರಿದವರಾದ ಹೋಸಕೇರಪ್ಪ, ಹೋನ್ನೂರಸ್ವಾಮಿ, ಜಡಿಯಪ್ಪ, ನಾಗರಾಜ ಮಧ್ಯೆ ದಾರಿಯಲ್ಲಿ ಜಗಳವಾಗಿದೆ. ದೊಡ್ಡ ದೇವಪ್ಪನನ್ನು ಅಟ್ಟಿಸಿ ಕೊಂಡು ಓಡಿ ಹೊಗಿದ್ದರಿಂದ ಹೊನ್ನೂರಮ್ಮನವರ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ದೊಡ್ಡ ದೇವಣ್ಣನ್ನು ಮಣಿಕಟ್ಟಿನ ವರೆಗೂ ಕೈ ಕಡಿದು ಮಾರಣಾಂತಿಕ ಹಲ್ಲೆ ಮಾಡಿ ಕೊಠಡಿಯಲ್ಲಿ ಕೂಡಿಹಾಕಿದ್ದರು ಎಂದು ಪೋಲೀಸ್ ಮೂಲಗಳಿಂದ ತಿಳಿದು ಬಂದಿದೆ. ಸದ್ಯ ದೇವಣ್ಣ ಬೆಂಗಳೂರಿನ ಸಾಯಿ ಅಂಬಿಕ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂತಹದೊಂದು ಸಂದರ್ಭದಲ್ಲಿ ಸಿ.ಪಿ.ಐ(ಎಂ) ಪಕ್ಷದ ಮುಖಂಡ ವಿ.ಎಸ್ ಶಿವಶಂಕರ ಅವರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಬಂಧಿಸಿ ಅವರ ಮೇಲೆ ಸುಳ್ಳುಕೇಸುಗಳನ್ನು ಹಾಕಿದ್ದಾರೆ ಎಂದು ಬಿ ಮಾಳಮ್ಮ ಜನಶಕ್ತಿಗೆ ತಿಳಿಸಿದ್ದಾರೆ.

ಮೇಲ್ನೋಟಕ್ಕೆ ಇದು ಜಾತಿಯ ಜಗಳಗಳಂತೆ ಕಂಡರೂ ಇನ್ನೋದು ಇದರ ಹಿಂದೆ ಮರಳು ಮಾಫಿಯಾದ ಕೈವಾಡ ಇದೆ ಎನ್ನುವ ಶಂಕೆ ಮೂಡಿದೆ. ಈ ಊರಿನ ಬಹುಪಾಲು ಜನರು ಮರಳು ಸಾಗಾಣಿಕೆಯಲ್ಲಿ ಸಕ್ರಿಯರಾಗಿದ್ದು ಕುರುಬರು ದಲಿತರಿಗೆ ಅವಕಾಶ ಕಲ್ಪಿಸಿ ಕೊಡದಿರುವುದು, ಮತ್ತು ಅವರನ್ನು ಮರಳು ಸಾಗಣಿಕೆಯಲ್ಲಿ ತೊಡಗದಂತೆ ತಡೆಯಲು ದೌರ್ಜನ್ಯಗಳನ್ನು ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಜನಶಕ್ತಿಯೊಂದಿಗೆ ಮಾತನಾಡಿದ ದೇವದಾಸಿ ವಿಮೋಚನ ಸಂಘದ ಅಧ್ಯಕ್ಷರಾದ ಬಿ.ಮಾಳಮ್ಮ ದೇವಣ್ಣನ ಮೇಲಾದ ಹಲ್ಲೆಯನ್ನು ಸಮಗ್ರ ತನಿಖೆಗೆ ವಹಿಸಬೇಕು. ಅಪರಾಧಿಗಳನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕು. ಜಿಲ್ಲಾಡಳಿತ ಈ ಮರಳು ಮಾಫಿಯಾಕ್ಕೆ ಕಡಿವಾಣ ಹಾಕಬೇಕು ಎಂದರು. ಜಿಲ್ಲಾಡಳಿತ ದೊಡ್ಡ ದೇವಣ್ಣನಿಗೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡಿ ಕೈ ತೊಳೆದು ಕೊಂಡಿರುವುದು ಸರಿಯಾದ ಕ್ರಮವಲ್ಲ. ಐವತ್ತು ಲಕ್ಷ ರೂಪಾಯಿ ಪರಿಹಾರ ಜೋತೆಗೆ 5 ಎಕರೆ ಭೂಮಿಯನ್ನು ನೀಡಬೇಕು. ಇತರೆ ಸಂತ್ರಸ್ತ ಕುಟುಂಬಗಳಿಗೆ ನಿವೇಶನ, ಮನೆ, ಭೂಮಿಯನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಹಲ್ಲೆಯ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲಾ ದಲಿತ–ಪರ ಸಂಘಟನೆಗಳ ಒಕ್ಕೂಟ, ದಲಿತ ಹಕ್ಕುಗಳ ಸಮಿತಿ (DHS), ದೇವದಾಸಿ ವಿಮೋಚನ ಸಂಘ, ಭಾರತ ಕಮ್ಯುನಿಸ್ಟ್ ಪಕ್ಷ ಜೂನ್ 27 ರಂದು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿ, ಉಪ ಮುಖ್ಯಮಂತ್ರಿ ಪರಮೇಶ್ವರ ಅವರೊಂದಿಗೆ ಮನವಿ ಕೊಟ್ಟು ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮಾಧುರ್ಯ ಸಾವಿನ ತನಿಖೆಗೆ ಆಗ್ರಹಿಸಿ ಹೋರಾಟ

ಹಾಸನ ನಗರದ ಸರ್ಕಾರಿ ಮೆಟ್ರಿಕ್ ಪೂರ್ವ ಹಾಸ್ಟೆಲ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ 'ಮಾಧುರ್ಯ'ಳ ಸಾವಿಗೆ ನ್ಯಾಯ ಒದಗಿಸಬೇಕೆಂದು, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಹಾಸ್ಟೆಲ್ ವಿಧ್ಯಾರ್ಥಿನಿಯರಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಭಾರತ ವಿಧ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ಆಗ್ರಹಿಸಿತು. ನಗರದ ಮೆಟ್ರಿಕ್ ಪೂರ್ವ ಹಾಸ್ಟೇಲ್‌ನಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆ ಬಂದು ಜಿಲ್ಲಾಧಿಕಾರಿಗೆ ಕಚೇರಿ ಮುಂದೆ ಧರಣಿ ನಡೆಸಿ ನಂತರ ಮನವಿ ಸಲ್ಲಿಸಲಾಯಿತು. ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿದ್ದು ಯುವತಿಯರು ವಸತಿ ನಿಲಯದಲ್ಲಿ ಸೂಕ್ತ ಭದ್ರತೆ ಇಲ್ಲದೆ ಇಂತಹ ಪ್ರಕರಣಗಳಿಗೆ ಕಾರಣವಾಗಿದೆ.

ಆತ್ಮಹತ್ಯೆ ಮಾಡಿಕೊಂಡು 2–3 ದಿನಗಳ ಹಿಂದೆ ಹಾಸ್ಟೆಲ್‌ನಿಂದಲೇ ಕಾಣೆಯಾಗಿದ್ದಳು ಎನ್ನಲಾಗಿದ್ದು ಹಾಸ್ಟೆಲ್ ಸಿಬ್ಬಂದಿಗಳು ಯಾವುದೇ ಎಚ್ಚರಿಕೆಯನ್ನು ವಹಿಸಿರುವುದಿಲ್ಲ. ಕಾಣೆಯಾಗಿದ್ದ ಮಾಧುರ್ಯ ಕೊನೆಗೆ ಕೊಳೆತ ಶವವಾಗಿ ಹಾಸ್ಟೆಲ್‌ನ ಕೋಣೆಯೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ನಾಲ್ವರು ಯುವಕರು ಇದೇ ಹಾಸ್ಟೆಲ್‌ನ ಇಬ್ಬರು ಯುವತಿಯರನ್ನು ಮತ್ತು ಓರ್ವ ಬೇರೆ ಹಾಸ್ಟೇಲ್ ಯುವತಿಯನ್ನು ಪ್ರವಾಸಕೆಂದು ಮೈಸೂರಿಗೆ ಕರೆದುಕೊಂಡು ಹೋಗಿ ದೌರ್ಜನ್ಯ ಎಸಗಲಾಗಿದೆ ಎಂಬ ಶಂಕೆ ಇದೆ. ಆ ಯುವಕರನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಪ್ರತಿಭಟಿಸಿ ಹಾಸ್ಟೆಲ್ ವಿಧ್ಯಾರ್ಥಿನಿ ಮಾದುರ್ಯಳ ಸಾವಿನ ತನಿಖೆ ಚುರುಕಾಗಿ ನೆಡೆಯಬೇಕು ಅಪರಾಧಿಗಳನ್ನು ಬಂಧಿಸಬೇಕು, ಪ್ರಕರಣದ ಹಿಂದೆ ಮಕ್ಕಳ ಸಾಗಣಿಕೆ, ವೇಶ್ಯವಾಟಿಕೆ ಜಾಲ ಇದೆಯೇ ಎನ್ನುವುದನ್ನು ಪತ್ತೆ ಹಚ್ಚಬೇಕು, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು, ಇನ್ನುಳಿದ ಇಬ್ಬರು ವಿಧ್ಯಾರ್ಥಿನಿಯರಿಗೆ ಸೂಕ್ತ ವೈದಕೀಯ ಭತ್ಯೆಯನ್ನು ಭರಿಸಬೇಕು, ನಿರ್ಭಯ ಕಾಯಿದೆ ಅಡಿ ಪರಿಹಾರ ಒದಗಿಸಬೇಕು, ಹಾಸ್ಟೆಲ್ ಮೇಲ್‌ವಿಚಾರಕರನ್ನು ಸೇವೆಯಿಂದ ವಜಾಗೊಳಿಸಬೇಕು. ಕೂಡಲೇ ಜಿಲ್ಲೆಯ ಎಲ್ಲಾ ಹಾಸ್ಟೇಲ್‌ಗಳಿಗೆ ಸಿ.ಸಿ ಕ್ಯಾಮೆರಗಳನ್ನು ಅಳವಡಿಸಿ ಕಾವಲುಗಾರನನ್ನು ನೇಮಕ ಮಾಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಎಂ.ಆಶಾ ತಾಲೂಕು ಕಾರ್ಯದರ್ಶಿ ರಮೇಶ್, ಮುಖಂಡ ಪೃಥ್ವಿ, ಅರವಿಂದ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಗ್ಗಲಿಪುರ ನಿವೇಶನ ರಹಿತರಿಗೆ ಭರವಸೆ

ಬೆಂಗಳೂರಿನಿಂದ 18 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಬಗರ್ ಹುಕುಂ ಸಾಗುವಳಿದಾರರಿಗೆ ಉಳುಮೆ ಚೀಟಿ ನೀಡಬೇಕು ಮತ್ತು ಈಗಾಗಲೇ ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ಬಡವರಿಗೆ ಹಕ್ಕುಪತ್ರ ನೀಡಬೇಕೆಂದು ಕಗ್ಗಲಿಪುರದ ಸುತ್ತಮುತ್ತಲಿನ ನಿವೇಶನ ರಹಿತರು ಜೂನ್ 26 ರಂದು ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ ಬೆಂಗಳೂರಿನ ಟೌನ್‌ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೂ ಮೆರವಣಿಗೆ ಬಂದು ಅನಿರ್ಧಿಷ್ಟಾವಧಿ ಧರಣಿಗೆ ಕೂತರು. ವಸತಿ ಸಚಿವ ಯು.ಟಿ.ಖಾದರ್ ಸಾಯಂಕಾಲ ಧರಣಿ ನಿರತರ ಸ್ಥಳಕ್ಕೆ ಆಗಮಿಸಿ ಜುಲೈ 11 ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತು ಸಂಘಟನಾ ಮುಖಂಡರನ್ನು ಒಳಗೊಂಡ ಸಭೆ ಕರೆಯುವುದಾಗಿ ಮತ್ತು ಸಮಸ್ಯೆಯ ಇತ್ಯರ್ಥಕ್ಕೆ ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ಧರಣಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಯ. ಬಸವರಾಜ, ಅಧ್ಯಕ್ಷರಾದ ಬೈಯ್ಯಾರೆಡ್ಡಿ, ರಾಜ್ಯ ಉಪಾಧ್ಯಕ್ಷರಾದ ಎನ್ ವೆಂಕಟಾಚಲಯ್ಯ, ಪಾಲನೇತ್ರಯ್ಯ, ನರಸಿಂಹಮೂರ್ತಿ, ಸಿದ್ದಪ್ಪ, ಅಶೋಕ್ ಕುಮಾರ್, ಬಾಲ್‌ರಾವ್, ವೀರಣ್ಣ, ಚಂದ್ರು ತೇಜಸ್ವಿ, ಬಿ.ವೈ ಕುಮಾರ್ ದೇವರಾಜು, ಹೊನ್ನರಾಜು, ನಾರಾಯಣ್ ರಾವ್ ಸೇರಿದಂತೆ ನೂರಾರು ಜನ ಹೋರಾಟದಲ್ಲಿ ಭಾಗವಹಿಸಿದ್ದರು.

ಮುಲಾರಪಟ್ನ ಸೇತುವೆ ಕುಸಿತ ಕಾರಣ ತನಿಖೆಗೆ ಸಿಪಿಐ(ಎಂ) ಆಗ್ರಹ

ಮಂಗಳೂರು ತಾಲೂಕಿನ ಕುಪ್ಪೆಪದವು ಮತ್ತು ಬಂಟ್ವಾಳವನ್ನು ಸಂಪರ್ಕಿಸುವ ಮುಲಾರಪಟ್ನ ಸೇತುವೆ 40 ವರ್ಷಗಳ ಹಿಂದೆಯಷ್ಟೇ ನಿರ್ಮಾಣವಾದ ಸೇತುವೆಯಾಗಿದೆ. ಬಂಟ್ವಾಳ ತಾಲೂಕಿನ ಅರಳಗ್ರಾಮ ಮತ್ತು ಮಂಗಳೂರು ತಾಲೂಕಿನ ಮುತ್ತೂರು ಗ್ರಾಮದ ನಾಗರಿಕರಿಗೆ ಅತ್ತ ಬಂಟ್ವಾಳ ಬಿ.ಸಿ.ರೋಡುಗಳಿಗೂ, ಇತ್ತ ಮಂಗಳೂರು ತಾಲೂಕಿನ ಎಡಪದವು ಗಂಜೀಮಠ, ಕೈಕಂಭಗಳಿಗೂ ಸಂಪರ್ಕ ನೀಡುವ ಮೂಲಕ ಮಂಗಳೂರು ಹಾಗೂ ಮೂಡಬಿದ್ರಿಗಳನ್ನು ತಲುಪಿಸುವ ನಿಟ್ಟಿನಲ್ಲಿ ಮುಲಾರಪಟ್ನ ಸೇತುವೆ ಪ್ರಧಾನ ಪಾತ್ರ ವಹಿಸುತ್ತಿತ್ತು. ಇತ್ತೀಚಿನ ಮಳೆ ಪ್ರವಾಹಕ್ಕೆ ಜೂನ್ 24ರ ಮುಸ್ಸಂಜೆಯ ಹೊತ್ತಿಗೆ 4 ಸೇತುವೆಗಳನ್ನು ಹೊತ್ತ ಒಂದು ಆಧಾರಸ್ತಂಭ ಕುಸಿದು, ಒಂದು ಕಾಂಕ್ರೀಟ್ ಸ್ಲ್ಯಾಬ್ ತುಂಡಾಗಿ ಫಲ್ಗುಣಿ ನದಿ ನೀರಲ್ಲಿ ಮುಳುಗಿ ಹೋಗಿದೆ. ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಈ ಬಗ್ಗೆ ತನ್ನ ಆಘಾತ ವ್ಯಕ್ತಪಡಿಸಿದೆ.

ಕೇವಲ 40 ವರ್ಷಗಳ ಹಿಂದೆ ನಿರ್ಮಾಣವಾದ ಸೇತುವೆ ಕುಸಿದು ಬೀಳಲು ಕಾಮಗಾರಿಯ ಕಳಪೆ ಮಟ್ಟ ಕಾರಣವೇ? ಈ ಸೇತುವೆಯ ಅಕ್ಕಪಕ್ಕ ನದಿಯಿಂದ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆ ಕಾರಣವೇ? ಈ ಬಗ್ಗೆ ಸರಕಾರ ಹಾಗೂ ಜಿಲ್ಲಾಡಳಿತ ಶೀಘ್ರ ತನಿಖೆ ನಡೆಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಈ ಸೇತುವೆ ಮೇಲಿನಿಂದ ಪ್ರತಿದಿನ 30ಕ್ಕೂ ಮಿಕ್ಕಿ ಬಸ್ಸುಗಳು ಹಾಗೂ ಇತರೇ ವಾಹನಗಳು ಸಂಚರಿಸುತ್ತಿದ್ದು, ಶಾಲಾ ಕಾಲೇಜುಗಳಿಗೆ ಹೋಗಬೇಕಾದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಅಲ್ಲದೆ ಬಂಟ್ವಾಳ, ಮಂಗಳೂರು, ಮೂಡಬಿದ್ರಿ ಪಟ್ಟಣಗಳಿಗೆ ಕಾರ್ಯಾರ್ಥವಾಗಿ ಹೋಗಬೇಕಾದ ನಾಗರಿಕರಿಗೂ ತೊಂದರೆಯಾಗಿದೆ. ಈ ನಿಟ್ಟಿನಲ್ಲಿ ಮುಂದೆ ಸೇತುವೆ ಪುನರ್ ನಿರ್ಮಾಣವಾಗುವವರೆಗೆ ಜಿಲ್ಲಾಡಳಿತ ಮುಲಾರಪಟ್ನ ಹಾಗೂ ಮುತ್ತೂರು ನಡುವೆ ಶೀಘ್ರದಲ್ಲೇ ದೋಣಿ ಸಂಚಾರ ವ್ಯವಸ್ಥೆಯನ್ನು ಮಾಡಬೇಕೆಂದೂ ಸಿಪಿಐ(ಎಂ) ಆಗ್ರಹಿಸಿದೆ. ಅಲ್ಲದೆ ಮುರಿದ ಸೇತುವೆ ಪುನರ್ ನಿರ್ಮಾಣ ಕಾರ್ಯವನ್ನು ತುರ್ತಾಗಿ ಕೈಗೊಂಡು ಮುಕ್ತಾಯಗೊಳಿಸಬೇಕೆಂದು ಸರಕಾರವನ್ನು ಆಗ್ರಹಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ವರ್ಷ ಪೂರೈಸುತ್ತಿರುವ ಶಿಥಿಲವಾದ ಇನ್ನೊಂದು ಸೇತುವೆ ಗುರುಪುರದಲ್ಲಿ ಫಲ್ಗುಣಿ ನದಿಗೆ ಅಡ್ಡವಾಗಿರುವ ಸೇತುವೆ. ಈ ಸೇತುವೆ ಮಂಗಳೂರು ಕಾರ್ಕಳ ಹೆದ್ದಾರಿ ಮೇಲಿದ್ದು, ಯಾವತ್ತಾದರೂ ಕುಸಿಯಬಹುದೆಂಬ ಭೀತಿ ಇದೆ.. ಗುರುಪುರ ಪ್ರದೇಶದ ನಾಗರಿಕರೂ, ಸಿಪಿಐ(ಎಂ) ಪಕ್ಷವೂ ಪರ್ಯಾಯ ಸೇತುವೆಗೆ ಕಾರ್ಯಯೋಜನೆ ಹಾಕಲು ಆಗ್ರಹಿಸಿ ಸೇತುವೆ ಬಳಿಯಲ್ಲಿ ಪ್ರತಿಭಟನೆಗಳನ್ನು ನಡೆಸಿದ್ದಿದೆ. ಅನಾಹುತಗಳಾಗುವ ಮುಂಚೆಯೇ ಗುರುಪುರದಲ್ಲಿ ಪರ್ಯಾಯ ಸೇತುವೆ ನಿರ್ಮಿಸಬೇಕೆಂದೂ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಆಗ್ರಹಿಸಿದೆ.

ಅಮಾನತ್ತು ವಾಪಸಾತಿಗಾಗಿ TRMN ನೌಕರರ ಉಪವಾಸ ಸತ್ಯಗ್ರಹ

ದಾಬಾಸ್ ಪೇಟೆಯ TRMN ಕಾರ್ಖಾನೆಯಲ್ಲಿ ಸುಮಾರು ಎರಡು ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿರುವ ಕಾರ್ಮಿಕರು ಆಡಳಿತ ಮಂಡಳಿ ಕಿರುಕುಳ ತಡೆಗಟ್ಟಲು ಸಂಘ ಕಟ್ಟಿಕೊಂಡ ಕಾರಣಕ್ಕೆ, ಮೊದಲ 49 ಜನ ಕಾರ್ಮಿಕರನ್ನು ಕಾರಣವಿಲ್ಲದೆ ವಜಾ ಮತ್ತು ಅಮಾನತ್ತುಗೊಳಿಸಲಾಗಿತ್ತು. ಗೇಟ್‌ನಲ್ಲಿಯೇ ಅವರನ್ನು ಒಳಗಡೆ ಪ್ರವೇಶ ಮಾಡದಂತೆ ತಡೆದು ವಜಾಮಾಡಿರುವ ಪತ್ರ ನೀಡಿ ಹೋರಗಡೆ ಹಾಕಿತ್ತು. ಈ ಕ್ರಮವನ್ನು ವಿರೋಧಿಸಿ ಮುಖಕ್ಕೆ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ಮಾಡಲಾಗಿದೆ. ಇನ್ನು ವಜಾ ಮಾಡಿದವರನ್ನು ವಾಪಾಸು ತೆಗೆದು ಕೊಳ್ಳದೆ ಇರುವ ಕಾರಣ ಪ್ರತಿಭಟನೆ ಮುಂದುವರೆದಿದೆ. ಕಾಂ.ಎನ್.ಕೆ ಬಸವರಾಜು,ಕಾಂ.ರಂಗಪ್ಪ,ಕಾಂ.ಮಹಾಂತೇಶ,ಕಾಂ. ಕೀರ್ತಿ, ಕಾಂ.ಚೈತ್ರ, ಕಾಂ.ಲಕ್ಷ್ಮಿ ಬಿ.ಕೆ ಅಮಾರಣಾಂತ



ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಕಾರ್ಮಿಕರು ಸಂಘಟನೆಯನ್ನು ಕಟ್ಟಿಕೊಳ್ಳಲು ಸಂವಿಧಾನಾತ್ಮಕ ಹಕ್ಕಾಗಿದ್ದು ಕಾರ್ಪೋರೇಟ್ ಸಂಸ್ಥೆಗಳು ಹಕ್ಕುಗಳನ್ನು ಕಿತ್ತುಕೊಳ್ಳಲು ಮುಂದಾಗಿದ್ದಾರೆ. ಇದು ಸಂವಿಧಾನ ವಿರೋಧಿ ಕ್ರಮವಾಗಿದ್ದು ವಜಾ ವಾಪಸಾತಿಗಾಗಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

ಹಾಸ್ಟೆಲ್ ಹೊರಗುತ್ತಿಗೆ ನೌಕರರ ಹೋರಾಟ 4ನೇ ದಿನಕ್ಕೆ

ಸರ್ಕಾರಿ ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದನ್ನು ವಿರೋಧಿಸಿ ಜೂನ್ 27 ರಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅನಿರ್ದಿಷ್ಟ ಸಾಮೂಹಿಕ ಧರಣಿ ಪ್ರಾರಂಭಿಸಿದ್ದಾರೆ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಬಾಲಕ ಬಾಲಕೀಯರ ಹಾಸ್ಟೆಲ್‌ಗಳಲ್ಲಿ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಾ ಬಂದಿರುವ 'ಡಿ' ವರ್ಗದ ನೌಕರರು ಕೆಲಸ ಖಾಯಂಗೊಳಿಸಲು ಹಲವಾರು ವರ್ಷಗಳಿಂದ ಹಕ್ಕೊತ್ತಾಯ ಮಾಡುತ್ತಾ ಬಂದಿದ್ದಾರೆ. ಇವರಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು ಮಹಿಳೆಯರೇ ಹೆಚ್ಚಿನವರು.

ನೇಮಕಾತಿ ನಿಯಮಗಳನ್ನು ಸೂಕ್ತವಾಗಿ ಬದಲಾಯಿಸಿ ಬಡಪಾಯಿ ನೌಕರರ ಸೇವೆಯನ್ನು ಖಾಯಂ ಮಾಡಬಹುದಾಗಿತ್ತು. ಆದರೆ ಸರ್ಕಾರ 10 ನೇ ತರಗತಿ ಪಾಸಾದವರಿಂದ ನೇರ ನೇಮಕಾತಿ ಪ್ರಾರಂಭಿಸಿತು. ಇದರಿಂದ ರಾಜ್ಯದ 5000 ಹೊರಗುತ್ತಿಗೆ ನೌಕರರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ. ಹೊಸದಾಗಿ ನೇಮಕಗೊಳ್ಳುವ ಕಾಯಂ ನೌಕರರನ್ನು ಹೊಸದಾಗಿ ನಿರ್ಮಾಣಗೊಂಡ ಹಾಸ್ಟೆಲುಗಳಿಗೆ ಮಾತ್ರ ನಿಯೋಜಿಸುತ್ತೇವೆ ಎಂಬ ಭರವಸೆ ನೀಡಲಾಗಿತ್ತು. ಹಾಲಿ ಎಲ್ಲಾ ಹೊರಗುತ್ತಿಗೆ ನೌಕರರು ನಿವೃತ್ತಿ ವಯಸ್ಸು ತಲುಪುವ ವರೆಗೆ ಅವರಿಗೆ ಸೇವಾ ಭದ್ರತೆ ನೀಡುವುದನ್ನು ಪರಿಶೀಲಿಸಲಾಗುವುದು ಎಂದು ಭರವಸೆ ನೀಡಲಾಗಿತ್ತು. ಕೊಟ್ಟ ಭರವಸೆಯಂತೆ ನಡೆಯದೆ ನೇರ ನೇಮಕಾತಿ ಮಾಡಿಕೊಂಡು ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದು ಖಂಡನೀಯವಾಗಿದೆ. ಜೂ. 28 ರಂದು ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಭೇಟಿ ಮಾಡಿದ ಹೊರಾಟದ ಮುಖಂಡರನ್ನು ಒಳಗೊಂಡ ನಿಯೋಗ ಈ ಕುರಿತು ಚರ್ಚಿಸಿ ಸಮಸ್ಯೆ ಪರಿಹಾರ ಮಾಡುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ ಆದರೂ ಸಮಸ್ಯೆ ಇತ್ಯರ್ಥವಾಗದ ಕಾರಣ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ಧಿಷ್ಟಾವಧಿ ಧರಣಿ ನಾಲ್ಕನೇ ದಿನಕ್ಕೆ ಮುಂದುವರೆದಿದೆ.



ಕೋಮುವಾದಿಗಳ ವಿರುದ್ಧ ಹೋರಾಡುವುದು ದೇಶಪ್ರೇಮಿಗಳ ಕರ್ತವ್ಯ : ಕವಿತಾ ಲಂಕೇಶ್

"ಹಿಂದುತ್ವದ ವಿರುದ್ಧ ಹೋರಾಡುವುದು ದೇಶದ್ರೋಹ ಅಲ್ಲ, ಅದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯ" ಎಂದು ಚಲನಚಿತ್ರಗಳ ನಿರ್ದೇಶಕಿ ಕವಿತಾ ಲಂಕೇಶ್ ರವರು ನುಡಿದರು. ಅವರು ತಿರುವನಂತಪುರದಲ್ಲಿ ಕೇರಳ ಗೆಜೆಟೆಡ್ ಆಫೀಸರ್ಸ್ ಅಸೋಸಿಯೇಷನ್ ಜೂನ್ 22 ರಂದು ಗೌರಿ ಲಂಕೇಶ್ ರವರಿಗೆ ನೀಡಿದ ಡಾ.ಎನ್.ಎಂ.ಮಹಮದ್ ಅಲಿ ಅವರ ಸ್ಮರಣೆಯ ಮರಣೋತ್ತರ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದರು.

'ಹಿಂದುತ್ವದ ಕೋಮುವಾದಿ ಶಕ್ತಿಗಳು ಜನತೆಯನ್ನು ಒಡೆಯಲು ತೀವ್ರ ಪ್ರಚಾರದೊಂದಿಗೆ ನಿರತವಾಗಿವೆ. ತಮ್ಮ ರಾಜಕೀಯ ಲಾಭಕ್ಕಾಗಿ ದೇಶದ ಜನತೆಯ ನಡುವೆ ದ್ವೇಷ, ದ್ವೇಷದ ದಳ್ಳುರಿಯನ್ನು ಹಬ್ಬಿಸುತ್ತಿವೆ. ಇಂತಹ ಸ್ಥಿತಿಯಲ್ಲಿ ದೇಶದ ವೈವಿಧ್ಯತೆಯ ಪರಂಪರೆ ಮತ್ತು ಪ್ರಜಾಪ್ರಭುತ್ವ ನೀತಿಗಳನ್ನು ರಕ್ಷಿಸಿಕೊಳ್ಳುವುದು ಆದ್ಯತೆಯಾಗಬೇಕು. ಅದಕ್ಕಾಗಿ ಪ್ರತಿಯೊಬ್ಬ ದೇಶಪ್ರೇಮಿಯೂ ಅವಿರತ ಶ್ರಮಿಸುವುದು ಅಗತ್ಯ' ಎಂದು ಹೇಳಿದರು.

ತಮ್ಮ ಸಹೋದರಿ ಗೌರಿ ಪತ್ರಕರ್ತೆಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿಯೂ ಕೆಲಸ ಮಾಡಿದ್ದನ್ನು ನೆನಪಿಸಿಕೊಂಡರು. 'ಗೌರಿಯ ಹತ್ಯೆಗೆ ಆಕೆ ಹಿಂದೂ ಧರ್ಮ ವಿರೋಧಿಯಾಗಿದ್ದುದೇ ಕಾರಣವೆಂದು ಇಂದು ಕೆಲವರು ಹೇಳುತ್ತಿದ್ದಾರೆ. ಕೆಲ ಮಾಧ್ಯಮಗಳೂ ಹಾಗೆಂದು ಪ್ರಚಾರಿಸುತ್ತಿವೆ. ಆದರೆ ಗೌರಿ ವಿರೋಧಿಸುತ್ತಿದ್ದುದು ಧರ್ಮವನ್ನಲ್ಲ, ಹಿಂದುತ್ವವನ್ನು, ಮತಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕೋಮುವಾದಿ ಕೃತ್ಯಗಳನ್ನು. ಹಿಂದುತ್ವವೇ ಬೇರೆ, ಧರ್ಮವೇ ಬೇರೆ ಎಂಬುದನ್ನು ಆ ಶಕ್ತಿಗಳು ಮರೆ ಮಾಚಿ ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಇಂದು ಜನರ ಜೀವನದ ಪ್ರಶ್ನೆಗಳತ್ತ ಚಿಂತಿಸಬೇಕಿದೆ. ಗೌರಿ ಹತ್ಯೆಯಾದಾಗ ಬಹು ದೊಡ್ಡ ರೀತಿಯಲ್ಲಿ ಪ್ರತಿಭಟನೆಗಳು ನಡೆದವು. ನಮ್ಮ ಕುಟುಂಬಕ್ಕೆ ತಮ್ಮೆಲ್ಲರಿಂದ ದೊರೆತ ಬೆಂಬಲ, ಸಾಂತ್ವನಕ್ಕೆ ಕೃತಜ್ಞತೆಗಳು' ಎಂದರು.

ಪ್ರಶಸ್ತಿಯು 50,000 ರೂಪಾಯಿಗಳು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. 2016 ರಿಂದ ನೀಡಲಾಗುತ್ತಿರುವ ಈ ಪ್ರಶಸ್ತಿ ಈ ಬಾರಿ ಸಾಮಾಜಿಕ ಕಾರ್ಯಕರ್ತರಿಗೆ ಮೀಸಲಾಗಿತ್ತು. ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡ 6 ಜನರ ಆಯ್ಕೆ ಸಮಿತಿಯು ಗೌರಿಯನ್ನು ಸರ್ವಾನುಮತದಿಂದ ಆರಿಸಿತ್ತು.

ಖ್ಯಾತ ನಿರ್ದೇಶಕ, ಕೇರಳ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಕಮಲ್‌ರವರು ಕಾರ್ಯ ಕ್ರಮ ಉದ್ಘಾಟಿಸಿದರಲ್ಲದೇ, ಪ್ರಶಸ್ತಿಯನ್ನು ಕವಿತಾ ಲಂಕೇಶ್ ರವರಿಗೆ ನೀಡಿದರು. "ಗೌರಿ ಲಂಕೇಶ್ ರವರ ತ್ಯಾಗ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳ ರಕ್ಷಣೆಗಾಗಿ ನಿಜ. ಆದರೆ ಅಷ್ಟು ಮಾತ್ರವೇ ಅಲ್ಲ, ಅದು ದೇಶದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿಯೂ ಮಹತ್ವದ ಗುರುತು" ಎಂದು ಕಮಲ್ ಹೇಳಿದರು. ಹೋರಾಟದ ಹಾದಿಯಲ್ಲಿ ಗೌರಿ ತೋರಿದ ಅಪಾರ ಧೈರ್ಯವನ್ನು ಸ್ಮರಿಸಿದ ಅವರು ಆ ಕೊಲೆಯನ್ನು ಖಂಡಿಸಿದ ಖ್ಯಾತ ನಟ ಪ್ರಕಾಶ್ ರೈ ಅವರ ನಿಲುವನ್ನು ಶ್ಲಾಘಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಕವಿತಾರವರಿಗೆ ಸನ್ಮಾನಿಸಿದ ಹಿರಿಯ ಚಿಂತಕ, ಸಂಸದರಾದ ಪ್ರೊ.ಸಿ.ಪಿ.ನಾರಾಯಣನ್ ರವರು "ಕೇರಳದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಅಭಾಧಿತ. ಇಂತಹ ಧೈರ್ಯ ಮತ್ತು ಹೊಣೆಗಾರಿಕೆಯನ್ನು ನೀಡಿರುವುದು ಎಡ ಚಳುವಳಿ' ಎಂದು ತಿಳಿಸಿದರು. ಆರಂಭದಲ್ಲಿ 'ಭಾರತದ ಪ್ರಜಾಪ್ರಭುತ್ವದ ಎದುರಿನ ಸವಾಲುಗಳು' ವಿಷಯದ ಕುರಿತು ಡಾ. ಮಹಮದ್ ಅಲಿ ದತ್ತಿ ಉಪನ್ಯಾಸವನ್ನು 'ದ ಹಿಂದೂ' ಪತ್ರಿಕೆಯ ಸ್ಥಾನಿಕ ಸಂಪಾದಕರಾದ ಸಿ.ಗುರುದಾಸನ್ ರವರು ನೀಡಿದರು.

ಅತಿಥಿಯಾಗಿ ಕೆ.ಎಸ್.ಟಿ.ಸಿ. ಅಧ್ಯಕ್ಷ ಸಿ.ವಿಜಯಕುಮಾರ್ ಆಗಮಿಸಿದ್ದರು. ಡಾ.ಮಹಮದ್‌ಅಲಿ ಯವರ ಪತ್ನಿ ಶ್ರೀಮತಿ ಕೆ.ಎಂ.ರಬಿಯಾಬಿ ಯವರು, ಸಂಘದ ಮಾಜಿ ಅಧ್ಯಕ್ಷರಾದ ಎನ್.ಭಗೀರಥನ್ ಮತ್ತು ಹಾಲಿ ಪದಾಧಿಕಾರಿಗಳು ಉಪಸ್ಥಿತರಿದ್ದರು. ಎಸ್.ವೈ.ಗುರುಶಾಂತ್ ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎಸ್.ರಘುಲಾಲ್ ರವರು ಸ್ವಾಗತಿಸಿದರು. ಅಧ್ಯಕ್ಷತೆ ಸಂಘದ ಅಧ್ಯಕ್ಷ ಕೆ.ಎನ್.ದಿಲೀಪ್ ವಹಿಸಿದ್ದರು. ನಗರದ ವಿ.ಜೆ.ಟಿ.ಹಾಲ್ ನಲ್ಲಿ ನಡೆದ ಸಮಾರಂಭದಲ್ಲಿ 500 ಕ್ಕೂ ಅಧಿಕ ಸದಸ್ಯರು, ವಿವಿಧ ಕ್ಷೇತ್ರಗಳ ಗಣ್ಯರು ಕಿಕ್ಕಿರಿದು ನೆರೆದಿದ್ದರು.

ಕೊಪ್ಪಳ SFI ಹೋರಾಟಕ್ಕೆ ಜಯ

ಕೊಪ್ಪಳ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಪ್ರಥಮ ವರ್ಷದ ಪ್ರವೇಶಾತಿ ಪಡೆಯುವ ವಿದ್ಯಾರ್ಥಿನಿಯರಿಗೆ ಮತ್ತು ITI ಮಾಡಿದ ವಿದ್ಯಾರ್ಥಿಗಳಿಗೆ 2018–19 ಸಾಲಿನಲ್ಲಿ ಪ್ರವೇಶವಿಲ್ಲ ಎಂದು ಹೇಳಿದ್ದರು. ಮುಂದುವರೆದು ಬಿ.ಎ, ಬಿ.ಕಾಂ, ಬಿ.ಎಸ್.ಸಿ, ಪ್ರಥಮ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶಗಳು ಪ್ರಾರಂಭವಾಗಿದ್ದು, ಪ್ರಥಮ ವರ್ಷದ ಪ್ರವೇಶಕ್ಕೆ ಒಬಿಸಿ ವಿದ್ಯಾರ್ಥಿಗಳಿಗೆ ರೂ.5120 ಫೀಸು ವಿಧಿಸಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಹಿಂದುಳಿದ ವಿದ್ಯಾರ್ಥಿಗಳಿಗೆ ನಿಯಮಗಳನ್ನು ಮೀರಿ ರೂ.2760 ಗಳನ್ನು ಪಡೆಯುತ್ತಿರುವುದನ್ನು ಪತ್ತೆ ಹಚ್ಚಿದ ಭಾರತ ವಿದ್ಯಾರ್ಥಿ ಫೆಡರೇಶನ್ ಕಾಲೇಜು ಆಡಳಿತ ವರ್ಗದೊಂದಿಗೆ ಮಾತನಾಡಿ ವಿದ್ಯಾರ್ಥಿಗಳ ಹೆಚ್ಚುವರಿ ಶುಲ್ಕ ವಾಪಾಸು ಮಾಡಿಸುವಲ್ಲಿ, ITI ಮಾಡಿದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕೊಡಿಸುವಲ್ಲಿ ಯಶಸ್ವಿಯಾಯಿತು. ಈ ಸಂದರ್ಭದಲ್ಲಿ ಎಸ್.ಎಫ್.ಐ ಜಿಲ್ಲಾ ಅಧ್ಯಕ್ಷರಾದ ಅಮರೇಶ ಕಡಗದ, ಬಾಳಪ್ಪ, ಹುಲಿಹೈದರ, ಮುಕ್ಕುಂಪಿ ಸೇರಿದಂತೆ ಇತರರು ಇದ್ದರು.

ಬೀದಿ ನಾಟಕ ಮಾಡುತ್ತಿದ್ದವರ ಮೇಲೆ ಅತ್ಯಾಚಾರ ಖಂಡಿಸಿ ಪ್ರತಿಭಟನೆ

ಜಾರ್ಖಂಡ್‌ನಲ್ಲಿ ಮಾನವ ಕಳ್ಳಸಾಗಣಿಕೆ ಕುರಿತಂತೆ ಅರಿವು ಬಿತ್ತುವ ಬೀದಿನಾಟಕವನ್ನು ಮಾಡುತ್ತಿದ್ದ ಮಹಿಳಾ ಕಲಾವಿದರನ್ನು ಅಪಹರಿಸಿ ಅತ್ಯಾಚಾರ ಮಾಡಿರುವ ಘಟನೆಯೊಂದು ನೆಡೆದಿದೆ. ರಾಕ್ಷಸಿ ಕೃತ್ಯವೆಸಗಿರುವ ಕೀಚಕರು ವೀಡಿಯೋ ಮಾಡಿ ವಿಚಾರ ಬಯಲು ಪಡಿಸಿದರೆ ಮಾನ ಹರಾಜು ಹಾಕಲಾಗುವುದು ಎಂದು ಬೆದರಿಕೆ ಒಡ್ಡಿದ್ದಾರೆ. ದೇಶದಲ್ಲಿ ಮಹಿಳೆಯರು ಮುಕ್ತವಾಗಿ ಸಂಚರಿಸದಂತಾಗಿದೆ. ಹಾಗಾಗಿ ಜಾರ್ಖಂಡ್ ಸರ್ಕಾರ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ಪಾತಳಗಡಿ ಎಂಬ ದಾನವ ಸಂಸ್ಕೃತಿಯ ಸಂಘಟನೆಯನ್ನು ನಿಷೇಧ ಮಾಡಬೇಕು, ನ್ಯಾಯ ಮೂರ್ತಿ ವರ್ಮಾ ಸಮಿತಿ ಜಾರಿಯಾಗಬೇಕು, ಅತ್ಯಾಚಾರಕ್ಕೆ ಒಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿ. ರಾಜ್ಯದ ಮಳವಳ್ಳಿ, ಕೋಲಾರ, ಸೇರಿದಂತೆ ಹಲವು ಕಡೆ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಗಿದೆ.

ಗ್ರಾಮ ಪಂಚಾಯಿತಿಯ ಎಲ್ಲಾ ನೌಕರರಿಗೆ EFMS ಮೂಲಕ ಏಕರೂಪ ವೇತನ ಪಾವತಿಗೆ ಆಗ್ರಹ

ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ರಾಜಾದ್ಯಂತ ಪ್ರತಿಭಟನೆ ನಡೆಸಿ ಗ್ರಾಮ ಪಂಚಾಯತಿ ನೌಕರರ ಸಂಘದ ಘಟಕಗಳು ಮನವಿ ಪತ್ರಗಳನ್ನು ಸಲ್ಲಿಸಿದೆ. 51,114 ಗ್ರಾ.ಪಂ ನೌಕರರಿಗೆ EFMS ಮೂಲಕ ವೇತನ ನೀಡುವ ತೀರ್ಮಾನ ಸ್ವಾಗತಾರ್ಹವಾಗಿದೆ. ಆದರೆ ಈ ಖಾಯ್ದೆಗೆ 17000 ಜನರು ಸೇರ್ಪಡೆಯಾಗದೆ ವಂಚಿತರಾಗಿದ್ದಾರೆ. ಇವರಲ್ಲಿ ಹೆಚ್ಚಾಗಿ ನಾಲೆ (ಚರಂಡಿ) ಸ್ವಚ್ಚಮಾಡುವ ಕಾರ್ಮಿಕರಿದ್ದಾರೆ. ತೆರಿಗೆಯ ಹಣದಲ್ಲಿ ವೇತನ ನೀಡಬೇಕು ಎನ್ನುವ ಕ್ರಮ ಇವರನ್ನು ನಿಕೃಷ್ಟ ಬದುಕಿಗೆ ತಳ್ಳಿದೆ. ಹಾಗಾಗಿ 2017 ಅಕ್ಟೋಬರ್ 30 ರ ಒಳಗೆ ಕೆಲಸ ಮಾಡುತ್ತಿರುವ ಗ್ರಾ.ಪಂ ನೌಕರರಿಗೆಲ್ಲ EFMS ಮೂಲಕವೇ ವೇತನವನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಪಾಸಾದ ಮತ್ತು ಹತ್ತು ವರ್ಷ ಸೇವೆ ಸಲ್ಲಿಸುತ್ತಿರುವ ಗ್ರಾ.ಪಂ. ಬಿಲ್ ಕಲೆಕ್ಟರ್‌ಗಳಿಗೆ ಸಿಗುತ್ತಿದ್ದ ಗ್ರೇಡ್–2 ಕಾರ್ಯದರ್ಶಿ ಬಡ್ತಿಯನ್ನು ಪುನಃ ಸಿಗುವಂತೆ ಸೂಕ್ತ ಆದೇಶ ಹೊರಡಿಸಬೇಕು, ಗ್ರಾಂ.ಪಂ ನೌಕರರ ಪೆನ್ಶನ್, ವೈದಕೀಯ ವೆಚ್ಚ ಗ್ರಾಜುಯಿಟಿಗಳನ್ನು ನೀಡಬೇಕು, ನಗರಾಭಿವೃದ್ಧಿ ಇಲಾಖೆಯಲ್ಲಿರುವ ಗ್ರಾಂ.ಪಂ. ನೌಕರರ ಸೇವ ನಿಯಾಮವಳಿ ಪ್ರಗತಿಯಲ್ಲಿದ್ದು ಇದಕ್ಕೆ ಆದೇಶ ಹೊರಡಿಸಬೇಕು, 2011 ಜನಗಣತಿ ಆಧಾರದ ಮೇಲೆ ಗ್ರಾಂ.ಪಂ. ಗ್ರೇಡ್–2 ನಿಂದ ಗ್ರೇಡ್–1 ಕ್ಕೆ ಮೇಲ್ದರ್ಜೆಗೇರಿಸಬೇಕು. ಅಪರ ಕಾರ್ಯದರ್ಶಿಗಳಾಗಿದ್ದ ಎಂ.ಎಸ್.ಸ್ವಾಮಿಯವರ ವರದಿಯ ಶಿಫಾರಸ್ಸಿನಂತೆ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯತಿಗಳ ಅವಶ್ಯಕತೆಗಳನುಗುಣವಾಗಿ ವಿವಿಧ ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ಆಗ್ರಹಿಸಿದ್ದಾರೆ. ಬಳ್ಳಾರಿ, ಹಗರಿ ಬೊಮ್ಮನಹಳ್ಳಿ, ಮಳವಳ್ಳಿ, ಕೋಲಾರ, ಹಾಸನ, ಕೊಪ್ಪಳ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ.



BEWU ನೆಗೋಶಿಯೇಟಿಂಗ್ ಯೂನಿಯನ್ ಆಗಿ ಆಯ್ಕೆ

CITU ಗೆ ಸಂಯೋಜಿತವಾದ BEWU ಬಿ.ಇ.ಎಲ್. ಬೆಂಗಳೂರು ಘಟಕದಲ್ಲಿ ಮ್ಯಾನೇಜುಮೆಂಟ್ ಜತೆ ಮಾತುಕತೆಯಲ್ಲಿ ಭಾಗವಹಿಸುವ (ನೆಗೋಶಿಯೇಟಿಂಗ್) ಪ್ರತಿನಿಧಿ ಆಯ್ಕೆ ಮಾಡಲು ಜೂ.26ರಂದು ನಡೆದ ಚುನಾವಣೆಯಲ್ಲಿ ಅತಿ ದೊಡ್ಡ ಏಕಮಾತ್ರ ಯೂನಿಯನು (53.54%) ಆಗಿ ಆಯ್ಕೆಯಾಗಿದೆ. ಇದಕ್ಕಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ BEWU ನ್ನು ಮತ್ತು ಬಿಇಎಲ್ ಕಾರ್ಮಿಕರನ್ನು ಅಭಿನಂದಿಸಿದೆ. ಸಿಐಟಿಯು ಕಾರ್ಮಿಕರ ಹಿತರಕ್ಷಣೆಗೆ ಮತ್ತು ಸಾರ್ವಜನಿಕ ಉದ್ಯಮಗಳನ್ನು ರಾಷ್ಟ್ರೀಯ ಆಸ್ತಿಯಾಗಿ ರಕ್ಷಿಸಲು ಹೋರಾಡುತ್ತವೆ ಎಂದು ಅದರ ರಾಜ್ಯ ಪ್ರಧಾನ ಕಾರ್ಯದರ್ಶಿ – ಮೀನಾಕ್ಷಿ ಸುಂದರಂ ಭರವಸೆ ನೀಡಿದ್ದಾರೆ. ಇಂಟಕ್, ಎಐಟಿಯುಸಿ, ಬಿಎಂಎಸ್ ಗಳಿಗೆ ಸಂಯೋಜಿತವಾದ ಯೂನಿಯನುಗಳೂ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು.

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

ಮರುನೋಟಕ್ಕೆ ಒಳಗಾಗಬೇಕಾದ ಬೇಲಿ ಮತ್ತು ಹೊಲದ ಕಥೆ ಪ್ರಸಂಗ


ಇತ್ತೀಚೆಗೆ ಗೌರಿ ಲಂಕೇಶ ಹತ್ಯೆಯ ಪ್ರಮುಖ ಆರೋಪಿಯಾದ ಪರಶುರಾಮ ವಾಗ್ಮೋರೆ ಸೆರೆಸಿಕ್ಕ ಮೇಲೆ, ಸಿಐಟಿ ಪೋಲೀಸರು ಕೆಲ ಮಹತ್ವದ ಮಾಹಿತಿಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದ ಮೇಲೆ ಸುದ್ದಿ ಮಾಧ್ಯಮಗಳು ಈ ಪ್ರಕರಣವನ್ನು ನಿಭಾಯಿಸುವ ವಿಧಾನ ವಿಚಿತ್ರವೂ ಆಗಿತ್ತು. ಕೆಲವು ಮಾಧ್ಯಮಗಳು ಪರಶುರಾಮ ವಾಗ್ಮೋರೆ ಎಂಬ ಆರೋಪಿಯ ಕುಟುಂಬ ಸ್ಥಿತಿಯ ಕಡೆ ಹೆಚ್ಚೆಚ್ಚು ಹೈಲೈಟ್ ಮಾಡುತ್ತಿದ್ದಂತಿತ್ತು. .. ..ಮಾಧ್ಯಮಗಳು ಅವ್ಯಕ್ತವಾಗಿಟ್ಟುಕೊಂಡಿರುವ ಪರ–ವಿರೋಧ ನಿಲುವುಗಳು ವಿಷಯ ನಿರೂಪಣೆಯಲ್ಲಿ ವ್ಯಕ್ತವಾಗುತ್ತಿರುತ್ತದೆ. ನೋಡುಗರ ಮನಸ್ಸಿನಲ್ಲಿ ಆರೋಪಿಯ ಪರವಾದ ಅನುಕಂಪವನ್ನು ಹುಟ್ಟಿಸಲು ಕಾರಣವಾಗುತ್ತದೆ. ಈ ಅನುಕಂಪ, ಸಾಮಾಜಿಕ ಜಾಲತಾಣಗಳಲ್ಲಿ– ನಿಮ್ಮ ಅನ್ನದ ಒಂದು ತುತ್ತನ್ನು ದೇಶಭಕ್ತರಿಗಾಗಿ ಕೊಡಲಾರಿರಾ? ಎಂಬ ಹೃದಯಸ್ಪರ್ಶಿ ಬೇಡಿಕೆಗಳನ್ನು ಸರಿಯೆಂದು ಒಪ್ಪಿಕೊಳ್ಳಲು ಒತ್ತಾಯಿಸುತ್ತದೆ. ಅಥವಾ, ಮನೆಮನೆಗಳಲ್ಲಿ ಪರಶುರಾಮ ವಾಗ್ಮೋರೆಯಂಥವರು ಹುಟ್ಟುತ್ತಾರೆ– ಎಂಬ ಉಗ್ರವಾದಕ್ಕೆ ಪೂರಕವಾದ ಕರುಣೆಯ ಅಲೆಯನ್ನು ಸೃಷ್ಟಿಸುತ್ತದೆ. .. ... ನಮ್ಮ ಬಹುತೇಕ ಮಾಧ್ಯಮಗಳಿಗೆ ಈ ಘಟನೆಯ ಇನ್ನೊಂದು ಪಾರ್ಶ್ವ ಮುಖ್ಯವೆನಿಸುವುದಿಲ್ಲ.

ಕಾಶ್ಮೀರಿ ಪತ್ರಕರ್ತರಿಗೆ ಬಿಜೆಪಿ ಶಾಸಕ ಚೌಧರಿ ಲಾಲಸಿಂಗ್ ಒಂದು ಧಮಕಿಕೊಟ್ಟಿದ್ದಾರೆ. "ಪತ್ರಕರ್ತರೇ, ನಿಮ್ಮ ಕೆಲಸಗಳಿಗೆ ಒಂದು ಲಕ್ಷ್ಮಣರೇಖೆಯನ್ನು ಹಾಕಿಕೊಳ್ಳಿ, ಇಲ್ಲದಿದ್ದರೆ ಶುಜಾತ್ ಬುಖಾರಿಯವರಿಗೆ ಉಂಟಾದ ಪರಿಸ್ಥಿತಿಯನ್ನು ನೆನಪಿಸಿಕೊಳ್ಳಿ". ಹೀಗೆ ಎಚ್ಚರಿಕೆಯನ್ನು ಕೊಟ್ಟ ಚೌಧರಿ ಲಾಲಸಿಂಗ್ ಕಾಶ್ಮೀರದಲ್ಲಿ ಅರಣ್ಯ ಸಚಿವನಾಗಿದ್ದರು ಮತ್ತು ಕಠುವಾ ಅತ್ಯಾಚಾರದ ಪ್ರಕರಣದಲ್ಲಿ, ಅತ್ಯಾಚಾರಿಗಳ ಪರವಾದ ರ್‍ಯಾಲಿಯಲ್ಲಿ ಭಾಗವಹಿಸಿದ ಕಾರಣಕ್ಕಾಗಿ ಅವರನ್ನು ಸಂಪುಟದಿಂದ ಕೈಬಿಡಲಾಗಿತ್ತು. ಅತ್ಯಾಚಾರ ಪ್ರಕರಣವನ್ನು ಸುದೀರ್ಘಕ್ಕೆ ಒಯ್ದರೆ, ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಮುಸ್ಲಿಮರ ನರಮೇಧ ಮರುಕಳಿಸುತ್ತದೆ– ಎಂದು ಉದ್ರೇಕಕಾರಿ ಹೇಳಿಕೆಗಳನ್ನು ಕೊಟ್ಟು, ತಾನು ಪ್ರಜಾಸತ್ತಾತ್ಮಕ ದೇಶದ ಗೌರವಾನ್ವಿತ ಸಚಿವನಾಗಿದ್ದೇನೆ ಎಂಬ ಅರಿವನ್ನೂ ಕಳೆದುಕೊಂಡಿದ್ದ ವ್ಯಕ್ತಿ ಇವರು. ಪತ್ರಕರ್ತರನ್ನು ಮಾನಸಿಕವಾಗಿ ಅಧೀರರನ್ನಾಗಿಸಲು ಶುಜಾತ್ ಬುಖಾರಿಯವರ ನಿದರ್ಶನ ಕೊಡುವಾಗ, ಶಾಸಕರಿಗೆ ಗೊತ್ತಿದೆ. ಶುಜಾತ್ ಬುಖಾರಿ ಒಬ್ಬ ನಿಷ್ಠಾವಂತ ಪತ್ರಕರ್ತರಾಗಿದ್ದವರು. ಜನಪರತೆ ಮತ್ತು ನ್ಯಾಯನಿಷ್ಠುರತೆಗೆ ಹೆಸರಾದವರು. ದಿ ರೈಸಿಂಗ್ ಕಾಶ್ಮೀರ್– ದೈನಿಕದ ಸಂಪಾದಕರಾಗಿದ್ದು; ಪ್ರತ್ಯೇಕತಾವಾದಿಗಳು ಮತ್ತು "ದೇಶಭಕ್ತ"ರಿಬ್ಬರ ವಿರೋಧವನ್ನೂ ಎದುರಿಸುತ್ತಿದ್ದವರು. ಅವರ ಕೊನೆಯ ಟ್ವೀಟ್‌ನಲ್ಲಿಯೂ, ಜನರಿಗಾಗಿ ಸತ್ಯವನ್ನು ನುಡಿಯುವ ಧೀರತೆ ಮತ್ತು ವೃತ್ತಿಪರ ಬದ್ಧತೆಗಳೇ ಹೊಳೆಯುತ್ತಿದ್ದುದು.

ಇಂತಹ ಪತ್ರಕರ್ತರ ಹತ್ಯೆ ದೇಶದ ಗೌರವಕ್ಕಾದ ದೊಡ್ಡ ಆಘಾತ. ಹಾಗಿರುವಾಗ ಚೌಧರಿ ಲಾಲಸಿಂಗ್ ಎಂಬ ಜವಾಬ್ದಾರಿಯುತ ಹುದ್ದೆಯಲ್ಲಿದ್ದ ವ್ಯಕ್ತಿ, ಯಾವ ಪತ್ರಕರ್ತರೂ ಶುಜಾತ್ ಬುಖಾರಿಯವರ ಹಾದಿಯಲ್ಲಿ ನಡೆಯಬಾರದು – ಎಂಬ ಪ್ರಾಣಭಯವನ್ನು ಒಡ್ಡುತ್ತಿದ್ದಾರೆ. ಅಂದರೆ ಮುದ್ದು ಮಗುವನ್ನು ಭಯಾನಕವಾಗಿ ಅತ್ಯಾಚಾರ ಮಾಡಿದ ಪ್ರಕರಣದ ಬಗ್ಗೆ ಜನರನ್ನು ಕಾನೂನನ್ನು ನಿರಂತರವಾಗಿ ಎಚ್ಚರಿಸುವಂತೆ, ಸರಿಯಾದ ನ್ಯಾಯತೀರ್ಮಾನ ಸಿಗುವಂತೆ, ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂಬಂತೆ ಜವಾಬ್ದಾರಿಯುತ ಪತ್ರಕರ್ತರು ವರ್ತಿಸಬಾರದು ಎಂಬ ಭೀತಿಯನ್ನು ಉಂಟು ಮಾಡುವುದು. ಹಾಗಿದ್ದರೆ ಇವರ ಪ್ರಕಾರ ಪತ್ರಕರ್ತರು ಹೇಗಿರಬೇಕು? ಮಾಧ್ಯಮಗಳು ಏನು ಮಾಡಬೇಕು? ಮಾಧ್ಯಮ ನೀತಿ ಸಂಹಿತೆಯನ್ನೇ ಬದಲಿಸಿಡುವ ಒತ್ತಡವನ್ನು ಸೃಷ್ಟಿಸುತ್ತಿದ್ದಾರೆಯೇ? ಇದು ದೇಶದ ಯಾವುದೋ ಮೂಲೆಯಲ್ಲಿ, ಭಯೋತ್ಪಾದಕರ ದಾಳಿಗೆ ಸಿಕ್ಕಿನಲುಗುತ್ತಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ; ಯಾರೋ ಒಬ್ಬರು ಅವಿವೇಕಿ ಜನಪ್ರತಿನಿಧಿ ಆಡಿರುವ ಮಾತೆಂದು ಸರಿಸಿಡುವುದು ಸಾಧ್ಯವೇ? ಅಥವಾ ಮಾಧ್ಯಮಗಳನ್ನು ತಮ್ಮ ಕಾವಲು ನಾಯಿಯಾಗಿಸಿಕೊಳ್ಳುವ, ಪ್ರಯತ್ನದಲ್ಲಿರುವ ರಾಜಕೀಯ ಬಂಡವಾಳೋದ್ಯಮವು ಲೆಕ್ಕಾಚಾರ ತಪ್ಪಿದೊಡನೆ ಸಿಡಿಮಿಡಿಗೊಳ್ಳುತ್ತಿರುವ ವಿಧಾನ ಎಂದು ತಿಳಿಯಬೇಕೇ?

ಇತ್ತೀಚೆಗೆ ಗೌರಿ ಲಂಕೇಶ ಹತ್ಯೆಯ ಪ್ರಮುಖ ಆರೋಪಿಯಾದ ಪರಶುರಾಮ ವಾಗ್ಮೋರೆ ಸೆರೆಸಿಕ್ಕ ಮೇಲೆ, ಸಿಐಟಿ ಪೋಲೀಸರು ಕೆಲ ಮಹತ್ವದ ಮಾಹಿತಿಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದ ಮೇಲೆ ಸುದ್ದಿ ಮಾಧ್ಯಮಗಳು ಈ ಪ್ರಕರಣವನ್ನು ನಿಭಾಯಿಸುವ ವಿಧಾನ ವಿಚಿತ್ರವೂ ಆಗಿತ್ತು. ಕೆಲವು ಮಾಧ್ಯಮಗಳು ಪರಶುರಾಮ ವಾಗ್ಮೋರೆ ಎಂಬ ಆರೋಪಿಯ ಕುಟುಂಬ ಸ್ಥಿತಿಯ ಕಡೆ ಹೆಚ್ಚೆಚ್ಚು ಹೈಲೈಟ್ ಮಾಡುತ್ತಿದ್ದಂತಿತ್ತು. ನಿಜ, ಆ ಕುಟುಂಬದಲ್ಲಿ ಕೆಟ್ಟ ಬಡತನವಿದೆ. ಅದಕ್ಕೂ ಹೆಚ್ಚಾಗಿ, ಮಗ ಕೆಟ್ಟರೆ... ನಾಡಿನ ಮರ್‍ಯಾದೆ ಕಳಿಯುವ ಕ್ರೂರ ಹತ್ಯೆಯ ಪಾತ್ರಧಾರಿಯಾದರೆ, ಹೆತ್ತವರು ಅನುಭವಿಸುವ ನೋವಿನ ಅಸದಳವನ್ನು ಶಬ್ದಗಳಲ್ಲಿ ಮೂಡಿಸಲಾಗದು. ಆದರೆ ಮಾಧ್ಯಮಗಳಿಗೆ ಅದರಲ್ಲೂ ವಿದ್ಯುನ್ಮಾನ ಮಾಧ್ಯಮಗಳಿಗೆ ಇರುವ ವಿಷಯಗಳನ್ನು 'ಕಾಣಿಸುವ ಮತ್ತು ವಿಚಾರಗಳನ್ನು ಉತ್ಪಾದಿಸುವ ತ್ರಾಣ'ದ ಬಗ್ಗೆ ಗಾಬರಿ ಬೀಳುವಂತಾಯಿತು. ಮಾಧ್ಯಮಗಳು ಅವ್ಯಕ್ತವಾಗಿಟ್ಟುಕೊಂಡಿರುವ ಪರ–ವಿರೋಧ ನಿಲುವುಗಳು ವಿಷಯ ನಿರೂಪಣೆಯಲ್ಲಿ ವ್ಯಕ್ತವಾಗುತ್ತಿರುತ್ತದೆ. ನೋಡುಗರ ಮನಸ್ಸಿನಲ್ಲಿ ಆರೋಪಿಯ ಪರವಾದ ಅನುಕಂಪವನ್ನು ಹುಟ್ಟಿಸಲು ಕಾರಣವಾಗುತ್ತದೆ. ಈ ಅನುಕಂಪ, ಸಾಮಾಜಿಕ ಜಾಲತಾಣಗಳಲ್ಲಿ– ನಿಮ್ಮ ಅನ್ನದ ಒಂದು ತುತ್ತನ್ನು ದೇಶಭಕ್ತರಿಗಾಗಿ ಕೊಡಲಾರಿರಾ? ಎಂಬ ಹೃದಯಸ್ಪರ್ಶಿ ಬೇಡಿಕೆಗಳನ್ನು ಸರಿಯೆಂದು ಒಪ್ಪಿಕೊಳ್ಳಲು ಒತ್ತಾಯಿಸುತ್ತದೆ. ಅಥವಾ, ಮನೆಮನೆಗಳಲ್ಲಿ ಪರಶುರಾಮ ವಾಗ್ಮೋರೆಯಂಥವರು ಹುಟ್ಟುತ್ತಾರೆ– ಎಂಬ ಉಗ್ರವಾದಕ್ಕೆ ಪೂರಕವಾದ ಕರುಣೆಯ ಅಲೆಯನ್ನು ಸೃಷ್ಟಿಸುತ್ತದೆ. ಮಾಧ್ಯಮ ಎಂಬ ಕನ್ನಡಿ ಒಂದು ಘಟನೆಯ ಯಾವ ಪಾರ್ಶ್ವದ ಮೇಲೆ ಫೋಕಸ್ ಮಾಡುತ್ತದೆಯೋ ಅದು ಜನಾಭಿಪ್ರಾಯವನ್ನು ರೂಪಿಸುವ ಪರಿಕರವಾಗಿ ದುಡಿಯುತ್ತದೆ.

ನಮ್ಮ ಬಹುತೇಕ ಮಾಧ್ಯಮಗಳಿಗೆ ಈ ಘಟನೆಯ ಇನ್ನೊಂದು ಪಾರ್ಶ್ವ ಮುಖ್ಯವೆನಿಸುವುದಿಲ್ಲ. ಈಗ, ಹತ್ಯೆಯ ಆರೋಪವನ್ನು ಒಪ್ಪಿಕೊಂಡಿದ್ದಾನೆ ಎಂದು ಹೇಳಲಾಗುವ ಪರಶುರಾಮ ವಾಗ್ಮೋರೆ, ಈ ಹಿಂದೆ ಕೂಡ ಪಾಕಿಸ್ತಾನದ ಧ್ವಜವನ್ನು ಹಾರಿಸಿ, ಸಮಾಜದ ಶಾಂತಿಯನ್ನು ಕದಡುವ ಕೋಮುಹಿಂಸೆಯನ್ನು ಪ್ರಚೋದಿಸಲು ಯತ್ನಿಸಿದ ವ್ಯಕ್ತಿಯಾಗಿದ್ದ. ಹಾಗಿದ್ದರೆ, ಆ ಪ್ರಕರಣ ಏನು? ಆತನ ಮೇಲೆ ಸಾಬೀತಾಗಿದ್ದ ಮೊಕದ್ದಮೆ ಏನು? ಅವನ ಸಹಚರರು ಯಾರು? ಯಾವ ಸಂಘಟನೆಯ ಬೆಂಬಲದೊಂದಿಗೆ ಇಂಥವನ ಕ್ರಿಯಾಚಟುವಟಿಕೆಗಳು ನಡೆದವು?– ಎಂಬ ಅಧ್ಯಾಯ ಬಹುಮಟ್ಟಿಗೆ ಬೈಪಾಸ್ ಆಗತೊಡಗಿತ್ತು. ಗೌರಿ ಲಂಕೇಶ ಅವರ ಬರಹಗಳು, ಭಾಷಣದ ತುಣುಕುಗಳು ಹತ್ಯೆಯನ್ನು ಸಮರ್ಥಿಸುವಂತೆ ಇದ್ದಿತ್ತೇ? ವರ್ತಮಾನದ ವಿದ್ಯಮಾನಗಳಿಗೆ ಮೌಲ್ಯಪ್ರಜ್ಞೆಯಿಂದ, ನೈತಿಕ ಎಚ್ಚರದಿಂದ ಸ್ಪಂದಿಸುವ ಪತ್ರಕರ್ತೆಯಾಗಿ ಅವರು ನಿರ್ವಹಿಸಿದ ಜವಾಬ್ದಾರಿಗಳೇನಿದ್ದವು? ಅವು ಕೊಲೆಗೆ ಅರ್ಹ ಎಂದು ತೀರ್ಮಾನಿಸಿದ ಮನಸ್ಥಿತಿ ಎಂತಹದು? ಪರಶುರಾಮ ವಾಗ್ಮೋರೆಯಂತಹ ಯುವಕರು ಗೌರಿ ಲಂಕೇಶ ಬರಹಗಳನ್ನು ಮಾತುಗಳನ್ನು ಪೂರ್ವಗ್ರಹದಿಂದ ಪ್ರವೇಶಿಸಿದ ಪರಿಣಾಮಗಳಲ್ಲವೇ ಇವು? ವಿಷಯವನ್ನು ತಿರುಚಿ, ಬೇಕಾದಂತೆ ಬಗ್ಗಿಸಿ, ಎಳೆದು ಕಟ್ಟುವ ಈ ಧೋರಣೆ ಪ್ರಜಾಪ್ರಭುತ್ವದಲ್ಲಿ ಎಷ್ಟರ ಮಟ್ಟಿಗೆ ಸರಿ? ಪತ್ರಕರ್ತರು ಏನನ್ನು ಬರೆಯಬೇಕು, ಹೇಗೆ ಬರೆಯಬೇಕು ಎನ್ನುವುದಕ್ಕೂ ರಾಜಕಾರಣಿಗಳ, ರಾಜಕೀಯ ಹಿತಾಸಕ್ತಿಗಳ ಒಪ್ಪಿಗೆ ಪತ್ರ ಬೇಕಿದೆಯೇ?



ಗೌರಿ ಲಂಕೇಶ ಮತ್ತು ಎಂ.ಎಂ.ಕಲಬುರ್ಗಿಯವರ ಹತ್ಯೆಯ ಹಿಂದು–ಮುಂದಿನ ವಿದ್ಯಮಾನಗಳನ್ನು ಗಮನಿಸಿ. ಇವರ ವಿರುದ್ಧ, ಹಿಂದೂತ್ವ ವಿರೋಧಿಗಳು – ಎಂಬ ಅಲೆಯನ್ನು ಸೃಷ್ಟಿಸಲಾಗಿತ್ತು. ಅದಕ್ಕೆ ಭದ್ರ ತಳಹದಿಯನ್ನು ನೀಡಿದ್ದು– ಸುಳ್ಳನ್ನು, ಊಹಾಪೋಹಗಳನ್ನು ಸಾರಾಸಗಟಾಗಿ ನಂಬುವ ಜನರ ಸ್ಥಿತಿ. ಸಾಕ್ಷ್ಯಾಧಾರಗಳಿಲ್ಲದೆ, ಮರುಪರೀಕ್ಷೆಗೆ ಒಡ್ಡಿಕೊಳ್ಳದೆ ಗಾಳಿಸುದ್ದಿಯನ್ನೇ ಸತ್ಯದ ಪ್ರಮಾಣವಾಗಿಸಿಕೊಳ್ಳುವ ಜನಮರುಳಿನ ಸ್ಥಿತಿಯ ಲಾಭವನ್ನು ಮತಾಂಧ ಶಕ್ತಿಗಳು ಪಡೆದುಕೊಳ್ಳುತ್ತಿವೆ. ಇತ್ತೀಚಿನ ಬಿಬಿಸಿ ವರದಿಯು ಭಾರತದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳನ್ನು ನಂಬುವ ಸುಳ್ಳು ಪ್ರಿಯರ ಸಂಖ್ಯೆ ಬಹಳವಿದೆ– ಎನ್ನುತ್ತದೆ. ಸುಳ್ಳುಪ್ರಿಯತೆ ಸೃಷ್ಟಿಸಿರುವ ದುರಂತ–ದೌರ್ಜನ್ಯಗಳನ್ನು ಲೆಕ್ಕವಿಡುವುದೂ ಸಾಧ್ಯವಿಲ್ಲವೇನೋ. ಸತ್ಯಶೋಧಕಗುಣ ಬದ್ಧತೆಯಿಂದ, ಜನರಲ್ಲಿ ವೈಚಾರಿಕ ಶಕ್ತಿಯನ್ನು ಬೆಳೆಯಿಸಬೇಕಿದ್ದ ಮಾಧ್ಯಮಗಳು ಜನರಲ್ಲಿ ಭ್ರಮೆಯನ್ನು, ಅವಕಾಶವಾದಿತನವನ್ನು ಬೆಳೆಯಿಸುತ್ತಿದೆ.

ಜನರನ್ನು ಹೇಗೆ ಬೇಕಾದರೂ ತೇಜೋವಧೆ ಮಾಡುವ ಯಾರನ್ನು ಬೇಕಾದರೂ ಹೀರೋ ಮಾಡುವ ತಂತ್ರಕುಶಲತೆ ವಿದ್ಯುನ್ಮಾನ ಮಾಧ್ಯಮಗಳಿಗಿದೆ. ಡಿ. ಉಮಾಪತಿಯವರು ಬೇರೆ ಸಂದರ್ಭದಲ್ಲಿ ಉಲ್ಲೇಖಿಸಿದ ಒಂದು ಉದಾಹರಣೆ ಇದು. ಜಾಲತಾಣಗಳಲ್ಲಿ ನೆಹರೂ ಅವರನ್ನು ಹೆಣ್ಣುಬಾಕ ಎಂದು ಬಿಂಬಿಸಲು ಹರಿದಾಡುತ್ತಿರುವ ಫೋಟೋಗಳು, ನಿಜಕ್ಕೂ ಅಂಥವಲ್ಲ. ಅವು ನೆಹರೂ ಅವರ ತಂಗಿ ವಿಜಯಲಕ್ಷ್ಮೀ ಪಂಡಿತ ಮತ್ತು ಅವರ ಮಗಳು ನಯನತಾರಾ ಸೆಹಗಲ್ ಅವರೊಡನೆ ನೆಹರೂ ಕಳೆದ ಕ್ಷಣಗಳದ್ದು. ಮಾಧ್ಯಮಕ್ಕಿರುವ ಈ ಅಭೂತಪೂರ್ವ ತಾಕತ್ತು, ಅವು ನಿಸ್ಪ್ರಹವಾಗಿ ಸ್ಪಂದಿಸಿದಾಗ, ಇತ್ಯಾತ್ಮಕವಾದ ಪರಿಣಾಮವನ್ನು ಉಂಟು ಮಾಡಿದ ಉದಾಹರಣೆಗಳೂ ಇವೆ. ದೆಹಲಿಯ ನಿರ್ಭಯಾ ದೌರ್ಜನ್ಯ ಪ್ರಕರಣವನ್ನು ಜಗತ್ತಿನಾದ್ಯಂತ ತಲುಪಿಸಿ, ಜನಪ್ರಜ್ಞೆಯನ್ನು ಬಡಿದೆಬ್ಬಿಸುವ, ಅತ್ಯಾಚಾರ ವಿರೋಧಿ ,ಎಚ್ಚರವನ್ನು ಹುಟ್ಟಿಸುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿತ್ತು. ಆದರೆ ಇದೇ ಕಮಿಟ್‌ಮೆಂಟ ಖೈರ್ಲಾಂಜಿ ಅತ್ಯಾಚಾರ ಪ್ರಕಣರಣದಲ್ಲಿ ಅಥವಾ ಇಂತಹ ಗ್ರಾಮ ಭಾರತದ ಪ್ರಕರಣದಲ್ಲಿ ಯಾಕೆ ನಡೆಯಲಿಲ್ಲ ಎಂಬ ಪ್ರಶ್ನೆಯೂ ಏಳುತ್ತದೆ. ಮಾಧ್ಯಮಗಳಿಗೆ ಯಾವುದು ಆದ್ಯತೆಯ, ಯಾವುದು ಆದ್ಯತೆಯಿಲ್ಲದ ವಿಷಯವಾಗುತ್ತದೆ–ಎಂಬುದು ಗಮನಾರ್ಹ.

ಇದಕ್ಕೆ ಕಾರಣ ಏನೆಂದರೆ, ಮಾಧ್ಯಮಗಳ ನೈತಿಕ ಅಡಿಪಾಯವೇ ಕುಸಿದಿರುವುದು. ಬಂಡವಾಳಶಾಹಿಗಳು ರಾಜಕೀಯವನ್ನೂ, ಮಾಧ್ಯಮ ಕ್ಷೇತ್ರವನ್ನೂ ಉದ್ಯಮವಾಗಿಸಿ ಒಂದರಿಂದ ಇನ್ನೊಂದರ ಹಿತಾಸಕ್ತಿಯನ್ನು ಕಾಪಾಡಿ, ಲಾಭಕೋರತನದ ಪರಮಾವಧಿಯನ್ನು ತಲುಪಲು ಯತ್ನಿಸುತ್ತಿರುವ ಕಾಲವಿದು. ಪರಿಣಾಮವಾಗಿ ಸಹಜವಾಗಿಯೇ ಮಾಧ್ಯಮಗಳ ಬದ್ಧತೆಯಲ್ಲಿ ಅಡಚಣೆ ಕಂಡುಬರುತ್ತದೆ. ಇವು ಯಾಜಮಾನ್ಯದ ಮರ್ಜಿ ಕಾಯುವ ಒತ್ತಡದಲ್ಲಿ ಉಸಿರುಗಟ್ಟುತ್ತಿರುತ್ತವೆ. ಇದು ಸಂಘಟಿತ ಸರ್ಕಾರೀ, ಖಾಸಗೀ ಮಾಧ್ಯಮಗಳ ಸ್ಥಿತಿ. ಆದರೆ ನಾವೀಗ ಬದುಕುತ್ತಿರುವುದು ಮಾಧ್ಯಮಗಳ ಸಾಧ್ಯತೆಯು ಪ್ರತಿಯೊಬ್ಬರ ಕೈಗೂ ನಿಲುಕಿರುವ ಕಾಲದಲ್ಲಿ. ಜಾಲತಾಣಗಳಲ್ಲಿ ತನ್ನನ್ನು ತಾನು ಎಕ್ಸಫೋಸ್ ಮಾಡಿಕೊಳ್ಳುವ, ಜನಾಭಿಪ್ರಾಯವನ್ನು ರೂಪಿಸಿಕೊಳ್ಳುವ ಅವಕಾಶ ಮುಕ್ತವಾಗಿದೆ. ಈ ಮುಕ್ತತೆಗೆ ಏನನ್ನೋ ವಿಜೃಂಭಿಸುವ, ಇನ್ನೇನನ್ನೋ ಮರೆಮಾಡುವ ಸಹಜ ಶಕ್ತಿಯಿದೆ. ಒಂದು ಫೋಟೋ ನಮ್ಮದಾಗಿರುವ, ನಮ್ಮದಲ್ಲದೆಯೂ ಇರುವ ಹಾಗೆ. ಆದರೆ ಈ ನೆಳಲು ಬೆಳಕಿನ ದೃಶ್ಯ ಸಂಯೋಜನೆಯು ವಿಚಾರಗಳ ಮಟ್ಟಕ್ಕೆ ಬಂದಾಗ, ವ್ಯರ್ಥ ವಾಗ್ವೈಖರಿಯನ್ನೋ ಅಸ್ಪಷ್ಟತೆಯನ್ನೋ ಸೃಷ್ಟಿಸಬಲ್ಲದು. ಇಂದು ಮತಾಂಧ ಫೋರ್ಸಗಳು ಅಭಿಪ್ರಾಯ ನಿರೂಪಣೆಯಲ್ಲಿ ವೈಯಕ್ತಿಕ ಸಂಪರ್ಕ ಮಾಧ್ಯಮಗಳ ಪ್ರಯೋಜನವನ್ನು ದೊಡ್ಡ ಪ್ರಮಾಣದಲ್ಲಿ ಬಳಸಿಕೊಂಡು, ಸಾಮಾಜಿಕವಾಗಿ ಅಪ್ರಬುದ್ಧವೂ ಅಪ್ರಯೋಜಕವೂ ಆದ ಕೆಲಸವನ್ನು ಮಾಡುತ್ತಿವೆ. ಇಷ್ಟಕ್ಕೆ ತೃಪ್ತವಾಗದೆ, ಸಂಘಟಿತ ಮಾಧ್ಯಮಗಳ ಮೇಲೆ ನಿಯಂತ್ರಣ ಸಾಧಿಸುವ, ಆ ಮೂಲಕ ಜನಾಭಿಪ್ರಾಯವನ್ನು ರೂಪಿಸುವ, ಆ ಮೂಲಕ ಅಧಿಕಾರ ಲಾಭ ಪಡೆವ ಕ್ರೌರ್ಯವನ್ನು ಮೆರೆಯುತ್ತಿವೆ. ಪ್ರಜಾಪ್ರಭುತ್ವಕ್ಕೆ ತೀಕ್ಷ್ಣ ಸವಾಲುಗಳನ್ನು ಒಡ್ಡುವ ಸಂದರ್ಭಗಳಿವು. •



ಜಮ್ಮು-ಕಾಶ್ಮೀರದಲ್ಲಿ ಬಿಜೆಪಿಯ ವಿಭಜನಕಾರಿ ಆಟ

ರಾಜ್ಯಪಾಲರ ಆಡಳಿತದ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ನೇರವಾದ ಆಡಳಿತ ನಡೆಸಲು ನರೇಂದ್ರ ಮೋದಿ ಸರಕಾರ ನಿರ್ಧರಿಸಿದೆ. ಮೆಹಬೂಬಾ ಮುಫ್ತಿ ನೇತೃತ್ವದ ಮೈತ್ರಿಕೂಟ ಸರಕಾರದಿಂದ ಹೊರಬರಲು ಬಿಜೆಪಿ ನಿರ್ಧರಿಸಿದ ಪರಿಣಾಮ ಇದಾಗಿದೆ.

ಸಮ್ಮಿಶ್ರ ಸರಕಾರ ಆಡಳಿತಕ್ಕೆ ಬಂದ ಮೂರು ವರ್ಷಗಳ ನಂತರ ಬಿಜೆಪಿ ಯಾಕೆ ಈ ಹೆಜ್ಜೆಯಿಟ್ಟಿತು?. ಸಮ್ಮಿಶ್ರ ಸರಕಾರ ಪತನಗೊಂಡಿದ್ದು ಅಚ್ಚರಿಯ ಸಂಗತಿಯೇನೂ ಅಲ್ಲ. ಯಾಕೆಂದರೆ ರಾಜಕೀಯ ಕ್ಷೇತ್ರದಲ್ಲಿ ಪರಸ್ಪರ ವಿರುದ್ಧ ಧೋರಣೆಗಳನ್ನು ಹೊಂದಿರುವ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಮತ್ತು ಬಿಜೆಪಿ ವಿಧಾನಸಭಾ ಚುನಾವಣೆಗಳ ನಂತರ ಸರಕಾರ ರಚಿಸಲು ಕೈ ಜೋಡಿಸಿದ ಆರಂಭದಿಂದಲೂ ಅವುಗಳ ನಡುವೆ ಯಾವುದೇ ಸಾಮಾನ್ಯ ಅಂಶಗಳು ಇರಲಿಲ್ಲ.

ಬಿಜೆಪಿಯು ಹಿಂದೂ ಬಾಹುಳ್ಯದ ಜಮ್ಮುವನ್ನು ಪ್ರತಿನಿಧಿಸುವುದರಿಂದ ಹಾಗೂ ಕಾಶ್ಮೀರ ಕಣಿವೆಯಲ್ಲಿ ಪಿಡಿಪಿಗೆ ಗರಿಷ್ಠ ಸ್ಥಾನಗಳು ಸಿಕ್ಕಿರುವುದರಿಂದ ರಾಜ್ಯವನ್ನು ಒಗ್ಗೂಡಿಸಲು ಮೈತ್ರಿ ಸರಕಾರಕ್ಕೆ ನೆರವಾಗಬಹುದು ಎಂದು ಪಿಡಿಪಿ ನಾಯಕ ಮುಫ್ತಿ ಮಹಮದ್ ಸಯೀದ್ ಆ ಸಂದರ್ಭದಲ್ಲಿ ತರ್ಕಿಸಿದ್ದರು. ಕೇಂದ್ರದಲ್ಲಿ ಆಡಳಿತದಲ್ಲಿರುವ ಪಕ್ಷವಾಗಿ, ಅದರಲ್ಲೂ ವಿಶೇಷವಾಗಿ ಕೇಂದ್ರೀಯ ಭದ್ರತಾ ಪಡೆಗಳನ್ನು ದೊಡ್ಡ ಪ್ರಮಾಣದಲ್ಲಿ ನಿಯೋಜಿಸಿರುವ ಸನ್ನಿವೇಶದಲ್ಲಿ ಬಿಜೆಪಿಯೇ ಮೇಲುಗೈ ಹೊಂದಿರುತ್ತದೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತಿತ್ತು.

ಈ ಸಮಯಸಾಧಕ ಸಮ್ಮಿಶ್ರ ಸರಕಾರವು ಕಾಶ್ಮೀರ ಕಣಿವೆಯ ಜನರ ಪರಕೀಯತೆಯ ಭಾವನೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ ಹಾಗೂ ಜಮ್ಮು ಮತ್ತು ಕಾಶ್ಮೀರ ವಲಯಗಳ ನಡುವಿನ ಕೋಮು ವಿಭಜನೆಯನ್ನು ಉಲ್ಬಣಗೊಳಿಸುತ್ತದೆ ಎಂದು ಸಿಪಿಐ (ಎಂ) ಎಚ್ಚರಿಸಿತ್ತು.

ಈಗ ರಾಜ್ಯಪಾಲರ ಆಡಳಿತವನ್ನು ಹೇರಿರುವಾಗ, ಕಣಿವೆಯಲ್ಲಿನ ಪರಿಸ್ಥಿತಿ ಯಾವತ್ತೂ ಇಷ್ಟು ಕೆಟ್ಟದಾಗಿರಲಿಲ್ಲ. ಜನರ ಬಹುಭಾಗ ಅದರಲ್ಲೂ ಯುವಜನರಲ್ಲಿ ಪರಕೀಯ ಭಾವ ಉಂಟಾಗಿದೆಯಷ್ಟೇ ಅಲ್ಲದೆ ಭಾರತದ ಜೊತೆ ಯಾವುದೇ ರೀತಿಯ ಸಂಬಂಧ ಹೊಂದಿರಲು ಬಯಸುತ್ತಿಲ್ಲ. ಕೇಂದ್ರ ಸರಕಾರ ಅನುಸರಿಸುತ್ತಿರುವ ಬರ್ಬರ ದಮನಕಾರಿ ನೀತಿ ಹಾಗೂ ರಾಜ್ಯ ಸರಕಾರಕ್ಕೆ ಅದು ನೀಡುತ್ತಿರುವ ನಿರ್ದೇಶನಗಳೇ ಇದಕ್ಕೆ ಕಾರಣವಾಗಿದೆ. 2016 ಜುಲೈನಲ್ಲಿ ಹಿಜ್ಬುಲ್ ಉಗ್ರ ಬುರ್ಹಾನ್ ವಾನಿ ಹತ್ಯೆ ನಡೆದ ನಂತರ ಕಣಿವೆಯಲ್ಲಿ ಸಾಮೂಹಿಕ ಉತ್ಕ್ರಾಂತಿ ನಡೆದಿದೆ. ಪ್ರತಿಭಟನೆಗಳನ್ನು ಹತ್ತಿಕ್ಕಲು ಭದ್ರತಾ ಪಡೆಗಳು ಪೆಲೆಟ್ ಗನ್‌ಗಳನ್ನು ಬಳಸಿವೆ. ಬಂದೂಕುಗಳಿಂದ ಸಿಡಿದ ಪೆಲೆಟ್‌ಗಳು 500ಕ್ಕೂ ಹೆಚ್ಚು ಯುವಕ-ಯುವತಿಯರು ಕಣ್ಣಿನ ದೃಷ್ಟಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಕಳೆದುಕೊಳ್ಳುವಂತೆ ಮಾಡಿವೆ.

ಹುರಿಯತ್‌ನ ಪ್ರತ್ಯೇಕತಾವಾದಿ ನಾಯಕತ್ವ ಸೇರಿದಂತೆ ಎಲ್ಲಾ ರಾಜಕೀಯ ಶಕ್ತಿಗಳೊಂದಿಗೆ ಒಂದು ರಾಜಕೀಯ ಸಂಧಾನ ಮಾತುಕತೆ ಆರಂಭಿಸಲು ಮೋದಿ ಸರಕಾರ ಸತತವಾಗಿ ನಿರಾಕರಿಸುತ್ತಿದೆ.

ಇದರ ಪರಿಣಾಮವಾಗಿ ನೂರಾರು ಯುವಕರು ಉಗ್ರರನ್ನು ಸೇರಿಕೊಳ್ಳುತ್ತಿದ್ದಾರೆ. ಕಳೆದ ವರ್ಷ, ಗಡಿಯಾಚೆಯಿಂದ ನುಸುಳಿ ಬಂದ ಉಗ್ರರಿಗಿಂತ ಸ್ಥಳೀಯವಾಗಿ ನೇಮಕಗೊಂಡ ಉಗ್ರರೇ ಜಾಸ್ತಿಯಿದ್ದರು.

2016ರ ಮಧ್ಯಭಾಗದಿಂದ ಹಿಂಸಾಕೃತ್ಯಗಳು ಒಂದೇ ಸಮನೆ ಏರಿಕೆಯಾಗಿವೆ. ಅದರಿಂದಾಗಿ ಉಗ್ರಗಾಮಿಗಳ ದಾಳಿ ಮತ್ತು ಭದ್ರತಾ ಪಡೆಗಳಿಂದ ಉಗ್ರ-ವಿರೋಧಿ ಕಾರ್ಯಾಚರಣೆಗಳು ಹೆಚ್ಚಿವೆ. ಇತ್ತೀಚಿನ ವರ್ಷಗಳಲ್ಲಿ ಸಾವುಗಳ ಪ್ರಮಾಣದ ವಿಚಾರದಲ್ಲಿ 2017 ಅತಿ ಕೆಟ್ಟ ವರ್ಷವಾಗಿದೆ: 140 ನಾಗರಿಕರು, 80 ಭದ್ರತಾ ಪಡೆ ಸಿಬ್ಬಂದಿ ಹಾಗೂ 213 ಉಗ್ರಗಾಮಿಗಳು ಆ ವರ್ಷ ಸತ್ತಿದ್ದಾರೆ. ಇವರಲ್ಲಿ ಕೆಲವರು ಕಲ್ಲೆಸೆತದಲ್ಲಿ ತೊಡಗಿದ್ದ ನಾಗರಿಕರು ಮತ್ತು ಪ್ರತಿಭಟನೆಕಾರರೂ ಇದ್ದಾರೆ.

ಭಾರೀ ಸದ್ದು ಮಾಡಿದ 2016ರ ಸೆಪ್ಟೆಂಬರ್‌ನಲ್ಲಿ ಗಡಿರೇಖೆಯಲ್ಲಿ ಮಾಡಿದ ಮಿಂಚಿನ ದಾಳಿಯ ಹೊರತಾಗಿಯೂ ಗಡಿಯಾಚೆಯಿಂದ ನುಸುಳಿ ಬರುವವರ ಸಂಖ್ಯೆ ತುಂಬಾ ಹೆಚ್ಚಾಗಿದೆ. ಗಡಿಯಲ್ಲಿ ಶೆಲ್ ದಾಳಿ ಹಾಗೂ ಗುಂಡಿನ ದಾಳಿಗಳ ಮೂಲಕ ಕದನ ವಿರಾಮ ಉಲ್ಲಂಘನೆಯಾಗಿದ್ದು ಎರಡೂ ಕಡೆ ನಾಗರಿಕರ ಪ್ರಾಣ ಹಾನಿಯಾಗಿವೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಸಚಿವರು ಮತ್ತು ಬಿಜೆಪಿ-ಆರ್‌ಎಸ್‌ಎಸ್ ಕೂಟದ ನಾಯಕರು ಜಮ್ಮು ಜನರನ್ನು ಕಣಿವೆ ಜನರ ವಿರುದ್ಧ ಎತ್ತಿ ಕಟ್ಟಲು ಹಾಗೂ ಕೋಮು ಧೃವೀಕರಣಕ್ಕೆ ಸತತವಾಗಿ ಪ್ರಯತ್ನಿಸಿದ್ದಾರೆ. ಇದರ ಪರಿಣಾಮವಾಗಿ ಹೆಚ್ಚಾದ ಇಸ್ಲಾಮ್‌ವಾದಿ ಉಗ್ರವಾದವನ್ನು ದಬ್ಬಾಳಿಕೆಯನ್ನು ತೀವ್ರಗೊಳಿಸಲಿಕ್ಕಾಗಿ ಬಳಸಿಕೊಳ್ಳಲಾಗಿದೆ.

ಜಮ್ಮುವಿನ ಕಥುವಾದಲ್ಲಿ ಎಂಟು ವರ್ಷ ಪ್ರಾಯದ ಮುಸ್ಲಿಂ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಬರ್ಬರವಾಗಿ ಕೊಂದು ಹಾಕಿದ ಪ್ರಕರಣ ಇಂಥ ವಿಭಜನಕಾರಿ ನೀತಿಗೆ ದೊಡ್ಡ ದೃಷ್ಟಾಂತವಾಗಿದೆ. ಈ ಹೀನ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳನ್ನು ಬಂಧಿಸಿದ್ದರ ವಿರುದ್ಧ ನಡೆದ ಪ್ರತಿಭಟನೆಗಳಲ್ಲಿ ಬಿಜೆಪಿ ಸಚಿವರು ಮತ್ತು ಇತರ ನಾಯಕರು ಭಾಗವಹಿಸಿದ್ದು ಇನ್ನೂ ಆಘಾತಕರ ಸಂಗತಿ. ದೇಶದಾದ್ಯಂತ ಆಕ್ರೋಶ ವ್ಯಕ್ತವಾದ ನಂತರ ಈ ಇಬ್ಬರು ಸಚಿವರನ್ನು ಸಚಿವ ಸಂಪುಟದಿಂದ ತೆಗೆದು ಹಾಕುವ ಒತ್ತಡಕ್ಕೆ ಬಿಜೆಪಿ ಒಳಗಾಯಿತು. ಆದರೆ ಅದಾಗಲೇ ಹಾನಿ ಆಗಿ ಹೋಗಿತ್ತು.

ಸರಕಾರವನ್ನು ಕೆಳಗಿಳಿಸುವ ಬಿಜೆಪಿ ನಿರ್ಧಾರ 2019ರ ಲೋಕಸಭೆ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಒಂದು ಪ್ರಜ್ಞಾಪೂರ್ವಕ ರಾಜಕೀಯ ನಡೆಯಾಗಿದೆ. ಕಾಶ್ಮೀರಿಗಳು ರಾಷ್ಟ್ರ-ವಿರೋಧಿಗಳು ಹಾಗೂ ಭಯೋತ್ಪಾದಕರಿಗೆ ಆಶ್ರಯದಾತರು ಎಂದು ಕಾಶ್ಮೀರಿಗಳನ್ನು ಗುರಿ ಮಾಡುವುದು ಬಿಜೆಪಿಯ ಉದ್ದೇಶವಾಗಿದೆ. ಭಯೋತ್ಪಾದನೆಯನ್ನು ನಿಭಾಯಿಸಲು ಪಿಡಿಪಿ ನೇತೃತ್ವದ ಸರಕಾರ ವಿಫಲವಾಗಿದೆ ಎಂದು ಅದು ಈಗಾಗಲೇ ಆರೋಪಿಸಿದೆ.

ಬಿಜೆಪಿಗೆ ಕಾಶ್ಮೀರ ವಿಚಾರ ಇಡೀ ದೇಶದಲ್ಲಿ ಲೋಕಸಭೆ ಚುನಾವಣೆಯಲ್ಲಿ ರಾಜಕೀಯ ವೇದಿಕೆ ಮಾಡಿಕೊಳ್ಳಲು ಅಗತ್ಯವಾಗಿದೆ. ಬಿಜೆಪಿ, ತಾನು "ಭಯೋತ್ಪಾದನೆ" ದಮನಿಸಲು ಮತ್ತು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದರೆ, ಭಯೋತ್ಪಾದನೆ ಮತ್ತು ಪಾಕಿಸ್ತಾನದ ಬಗ್ಗೆ ಸೌಮ್ಯ ಧೋರಣೆ ಹೊಂದಿರುವ ಪಿಡಿಪಿ ಮತ್ತು ಕಾಶ್ಮೀರಿ ಮುಸ್ಲಿಮರು ಈ ಪ್ರಯತ್ನವನ್ನು ವಿಫಲಗೊಳಿಸಿದರು ಎಂಬ ಕೋಮುವಾದಿ ಪ್ರಚಾರವನ್ನು ಮುಂದೊತ್ತ ಬಯಸುತ್ತಿದೆ. ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಬೇಕೆಂದು ಬಿಜೆಪಿ ಹೊಸ ಹುಮ್ಮಸ್ಸಿನೊಂದಿಗೆ ಪ್ರತಿಪಾದಿಸಲಿದೆ.

ಆದರೆ ವಾಸ್ತವವಾಗಿ,ಕಾಶ್ಮೀರಿ ಜನರನ್ನೆಲ್ಲರನ್ನೂ ಪರಕೀಯರಾಗಿಸಿ ಹಾಗೂ ನೂರಾರು ಯುವಜನರನ್ನು ಉಗ್ರಗಾಮಿತ್ವಕ್ಕೆ ತಳ್ಳಿ ಕೈಗೆ ಬಂದೂಕು ತೆಗೆದುಕೊಳ್ಳುವಂತೆ ಮಾಡಿ ದೇಶದ ಏಕತೆ ಮತ್ತು ಭದ್ರತೆಗೆ ಅತಿ ಹೆಚ್ಚು ಹಾನಿ ಮಾಡಿದ್ದು ಬಿಜೆಪಿಯೇ. ಬಹಳ ಗೌರವಾನ್ವಿತ ಸಂಪಾದಕ ಶುಜಾತ್ ಬುಖಾರಿ ಹತ್ಯೆ ಒಂದು ಕೆಟ್ಟ ಶಕುನವಾಗಿದೆ. ಒಟ್ಟಾರೆಯಾಗಿ ಮೋದಿಯವರ ಕಾಶ್ಮೀರ ಧೋರಣೆ ಒಂದು ವಿನಾಶಕಾರಿ ವೈಫಲ್ಯವಾಗಿದೆ.

ದೇಶದಾದ್ಯಂತ ಹಿಂದೂ ಭಾವನೆಗಳನ್ನು ಬಡಿದೆಬ್ಬಿಸುವ ದೊಡ್ಡ ಯೋಜನೆಯಲ್ಲಿ ಬಿಜೆಪಿಗೆ ಕಾಶ್ಮೀರ ಒಂದು ದಾಳವಾಗಿದೆ.

ಬಿಜೆಪಿ ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ಕಾಶ್ಮೀರಿ ಜನರನ್ನು ಬಲಿಗೊಡಲು ಬಿಡಬಾರದು. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಎಲ್ಲಾ ಜನತಾಂತ್ರಿಕ ಮತ್ತು ಜಾತ್ಯತೀತ ಶಕ್ತಿಗಳು ಒಟ್ಟಾಗಿ ರಾಜ್ಯದಲ್ಲಿನ ಎಲ್ಲಾ ಬಗೆಯ ಅಭಿಪ್ರಾಯದವರೊಂದಿಗೆ ರಾಜಕೀಯ ಸಂವಾದ' ನಡೆಸುವುದೇ ಮುನ್ನಡೆಯ ಹೆಜ್ಜೆಯಾಗಿದೆ ಎಂದು ಒತ್ತಾಯ ಮಾಡಬೇಕಿದೆ. ಇದಕ್ಕಾಗಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಬೇಕಾಗಿದೆ. ಅವುಗಳು ಪ್ರಭುತ್ವದ ದಬ್ಬಾಳಿಕೆಗೆ ಬಲಿಯಾಗದಂತೆ ನೋಡಿಕೊಳ್ಳಬೇಕಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಆಡುತ್ತಿರುವ ಛಿದ್ರಕಾರಿ ಆಟಗಳನ್ನು ಬಯಲಿಗೆಳೆಯುವ ಪ್ರಚಾರಾಂದೋಲನವನ್ನು ದೇಶದಾದ್ಯಂತ ನಡೆಸಬೇಕಿದೆ.

ಅನು: ವಿಶ್ವ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯ ಸರಕಾರವನ್ನು ಕೆಳಗಿಳಿಸುವ ಬಿಜೆಪಿ ನಿರ್ಧಾರ 2019ರ ಲೋಕಸಭೆ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಒಂದು ಪ್ರಜ್ಞಾಪೂರ್ವಕ ರಾಜಕೀಯ ನಡೆಯಾಗಿದೆ. ಕಾಶ್ಮೀರಿಗಳು ರಾಷ್ಟ್ರ-ವಿರೋಧಿಗಳು ಹಾಗೂ ಭಯೋತ್ಪಾದಕರಿಗೆ ಆಶ್ರಯದಾತರು ಎಂದು ಗುರಿ ಮಾಡುವುದು ಅದರ ಉದ್ದೇಶ. ಅದಕ್ಕೆ ಕಾಶ್ಮೀರ ವಿಚಾರ ಇಡೀ ದೇಶದಲ್ಲಿ ಲೋಕಸಭೆ ಚುನಾವಣೆಯಲ್ಲಿ ರಾಜಕೀಯ ವೇದಿಕೆ ಮಾಡಿಕೊಳ್ಳಲು ಅಗತ್ಯವಾಗಿದೆ. ಆದರೆ ವಾಸ್ತವವಾಗಿ, ಕಾಶ್ಮೀರಿ ಜನರನ್ನೆಲ್ಲರನ್ನೂ ಪರಕೀಯರಾಗಿಸಿ ಹಾಗೂ ನೂರಾರು ಯುವಜನರನ್ನು ಉಗ್ರಗಾಮಿತ್ವಕ್ಕೆ ತಳ್ಳಿ ಕೈಗೆ ಬಂದೂಕು ತೆಗೆದುಕೊಳ್ಳುವಂತೆ ಮಾಡಿ ದೇಶದ ಏಕತೆ ಮತ್ತು ಭದ್ರತೆಗೆ ಅತಿ ಹೆಚ್ಚು ಹಾನಿ ಮಾಡಿದ್ದು ಬಿಜೆಪಿಯೇ. ಅದು ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ಕಾಶ್ಮೀರಿ ಜನರನ್ನು ಬಲಿಗೊಡಲು ಬಿಡಬಾರದು.

● ಪ್ರಕಾಶ್ ಕಾರಟ್





ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಬಿಜೆಪಿ ತುರ್ತು ಪರಿಸ್ಥಿತಿಯ ಕಥನವನ್ನು ಆರೆಸ್ಸೆಸ್ ಮತ್ತು ಅದರ ಬಾಲಂಗೋಚಿ ಜನಸಂಘವನ್ನು ಅದರ ವಿರುದ್ಧ ಪ್ರಧಾನ ಹೋರಾಟಗಾರರು ಎಂದು ಬಿಂಬಿಸಿ ಪರಿಷ್ಕರಿಸ ಬಯಸುತ್ತದೆ. ಇದು ಸತ್ಯಕ್ಕೆ ಬಗೆಯುವ ಅಪಚಾರ. ಮೋದಿ ಸರಕಾರದ ಕಳೆದ ನಾಲ್ಕು ವರ್ಷಗಳಲ್ಲಿ ಕಾಣ ಬಂದಿರುವುದು ಒಂದು 'ಅಘೋಷಿತ ತುರ್ತುಪರಿಸ್ಥಿತಿ'ಯೇ. ಅದು ಸರ್ವಾಧಿಕಾರಶಾಹಿಯ ಸಾಂಸ್ಥೀಕರಣವಲ್ಲದೆ ಬೇರೇನೂ ಅಲ್ಲ.

ಬಿಜೆಪಿಯ ತುರ್ತು ಪರಿಸ್ಥಿತಿ ಕಥನ

ತುರ್ತು ಪರಿಸ್ಥಿತಿಯ 43ನೇ ವಾರ್ಷಿಕ ಎಂದಿನಂತೆ ಬಿಜೆಪಿ ಮುಖಂಡತ್ವಕ್ಕೆ ಸ್ವಾತಂತ್ರ್ಯೋತ್ತರ ಭಾರತದ ಈ ಘಟನಾಮಯ ಅವಧಿಯ ಬಗ್ಗೆ ತನ್ನದೇ ವಿರೂಪಗೊಳಿಸಿದ, ಜಂಭದಿಂದ ಕೂಡಿದ ಕಥನಗಳನ್ನು ಕೊಡುವ ಸಂದರ್ಭವಾಗಿ ಕಂಡಿದೆ.

ಜೂನ್ 26, 1975ರಂದು ಇಂದಿರಾಗಾಂಧಿ ಘೋಷಿಸಿದ ಆಂತರಿಕ ತುರ್ತು ಪರಿಸ್ಥಿತಿ ಪ್ರಜಾಪ್ರಭುತ್ವದ ಮೇಲೊಂದು ನೇರ ದಾಳಿಯಾಗಿತ್ತು. ಅದರಿಂದ ಮೂಡಿ ಬಂದದ್ದು ಒಂದು ಸರ್ವಾಧಿಕಾರಶಾಹಿ ಆಳ್ವಿಕೆ- ಇದು ನಾಗರಿಕ ಸ್ವಾತಂತ್ರ್ಯಗಳನ್ನು ಅಮಾನತಿನಲ್ಲಿಟ್ಟಿತು, ಪ್ರತಿಪಕ್ಷಗಳ ಮುಖಂಡರನ್ನು ಮತ್ತು ಸಾವಿರ-ಸಾವಿರ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಜೈಲಿಗಟ್ಟಿತು, ಪತ್ರಿಕಾ ನಿರ್ಬಂಧಗಳನ್ನು ಹೇರಿತು ಮತ್ತು ಕರಾಳ ಕ್ರಮಗಳನ್ನು ತರಲು ಸಂವಿಧಾನವನ್ನು ತಿದ್ದುಪಡಿ ಮಾಡಿತು.

ಈ ಎಲ್ಲ ಕ್ರಮಗಳನ್ನು ಸಮರ್ಥಿಸಿ ಕೊಳ್ಳಬೇಕಾಗಿದ್ದುದರಿಂದ, ತನ್ನ ಸರಕಾರವನ್ನು ಅಸ್ಥಿರಗೊಳಿಸುವ ಒಂದು ಸಂವಿಧಾನ ಬಾಹಿರ ಪ್ರಯತ್ನ ನಡೆದಿದೆ ಎಂಬ ನೆವವನ್ನು ಮುಂದೆ ಮಾಡಿ ನಿರ್ದಿಷ್ಟವಾಗಿ ಆಕೆ ತನಗೆ ವಿರುದ್ಧವಾಗಿದ್ದ ಎಲ್ಲ ರಾಜಕೀಯ ಶಕ್ತಿಗಳ ಮೇಲೆ ಗುರಿಯಿಟ್ಟರು. ಇದರಲ್ಲಿ ಜನಸಂಘ-ಆರೆಸ್ಸೆಸ್‌ನಂತಹ ಬಲಪಂಥೀಯ ಪ್ರತಿಪಕ್ಷದಿಂದ ಆರಂಭಿಸಿ ಎಡಪಂಥೀಯ ಪ್ರತಿಪಕ್ಷಗಳು, ಮುಖ್ಯವಾಗಿ ಸಮಾಜವಾದಿಗಳು ಮತ್ತು ಸಿಪಿಐ(ಎಂ)ವರೆಗೆ ಎಲ್ಲರೂ ಇದ್ದರು. ಆರೆಸ್ಸೆಸ್‌ನ್ನು ಒಂದು ಸಂಘಟನೆಯಾಗಿ ನಿಷೇಧಿಸಲಾಯಿತು.

ಬಿಜೆಪಿ ತುರ್ತು ಪರಿಸ್ಥಿತಿಯ ಕಥನವನ್ನು ಆರೆಸ್ಸೆಸ್ ಮತ್ತು ಅದರ ಬಾಲಂಗೋಚಿ ಜನಸಂಘವನ್ನು ಅದರ ವಿರುದ್ಧ ಪ್ರಧಾನ ಹೋರಾಟಗಾರರು ಎಂದು ಬಿಂಬಿಸಿ ಪರಿಷ್ಕರಿಸ ಬಯಸುತ್ತದೆ. ಇದು ಸತ್ಯಕ್ಕೆ ಬಗೆಯುವ ಅಪಚಾರ. ದೊಡ್ಡ ಸಂಖ್ಯೆಯಲ್ಲಿ ಆರೆಸ್ಸೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ಜೈಲಿಗೆ ಹಾಕಲಾಯಿತು ಎಂಬುದು ನಿಜ. ಅವರಲ್ಲಿ ಹಲವರು ಕ್ಷಮಾಪಣೆ ಕೇಳಿ, ತಮ್ಮ ಬಿಡುಗಡೆಗಾಗಿ ಇಂದಿರಾ ಸರಕಾರದ 20-ಅಂಶಗಳು ಕಾರ್ಯಕ್ರಮಕ್ಕೆ ಬೆಂಬಲವನ್ನು ಘೋಷಿಸಿದರು ಎನ್ನುವುದೂ ಅಷ್ಟೇ ನಿಜವಾದ ಸಂಗತಿ.

ಬಹುಶಃ ಅವರಿಗೆ ಸಂಕೇತ ಸಿಕ್ಕಿದ್ದು ಆರೆಸ್ಸೆಸ್‌ನ ಸರಸಂಘಚಾಲಕ ಬಾಳಾಸಾಹೇಬ್ ದೇವರಸ್‌ರವರಿಂದ. ಜೈಲಿನಲ್ಲಿದ್ದ ಅವರು ಸರಕಾರದೊಂದಿಗೆ ಸಹಕರಿಸುವುದಾಗಿ ಹೇಳುತ್ತ ಮತ್ತು ಸರಕಾರದ 'ರಚನಾತ್ಮಕ ಕಾರ್ಯಕ್ರಮ'ಗಳಿಗೆ ಬೆಂಬಲ ಸಾರುತ್ತ ಎರಡು ಪತ್ರಗಳನ್ನು ಬರೆದರು. ಹೀಗೆ ತುರ್ತು ಪರಿಸ್ಥಿತಿಯ ವಿರುದ್ಧ ಕೆಚ್ಚಿನಿಂದ ನಿಂತಿದ್ದ ಹೋರಾಟಗಾರರು ಪ್ರಭುತ್ವದ ದಮನದ ಎದುರು ಹಲ್ಲುಗಿಂಜುವವವರಾಗಿ ಮತ್ತು ಚಂಚಲಮನಸ್ಕರಾಗಿ ಕಂಡು ಬಂದರು.

ಇಂತಹ ವಂಚಕ ದಾಖಲೆ ಇಟ್ಟುಕೊಂಡು ಅರುಣ್ ಜೇಟ್ಲಿ, ಸೈದ್ಧಾಂತಿಕವಾಗಿ ಸಿಪಿಐ(ಎಂ) ತುರ್ತುಪರಿಸ್ಥಿತಿಯನ್ನು ವಿರೋಧಿಸಿದರೂ ಆ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ ಎಂದು ಹೇಳಿಕೊಂಡಿರುವುದು ಅತಿಯೇ ಸರಿ. ಆಗ ಎಬಿವಿಪಿ ಮುಖಂಡರಾಗಿದ್ದ ಅರುಣ್ ಜೇಟ್ಲಿಯವರು ಮೀಸಾದ ಅಡಿಯಲ್ಲಿ ಜೈಲಿನಲ್ಲಿದ್ದರು. ಆ ಸಮಯದಲ್ಲಿ ಎಸ್‌ಎಫ್‌ಐನ ಮುಖಂಡರೂ ಜೈಲಿನಲ್ಲಿದ್ದರು ಎಂಬುದು ಅವರಿಗೆ ಚೆನಾಗಿಯೇ ಗೊತ್ತಿರಬೇಕು. ಅಷ್ಟೇ ಅಲ್ಲ, ಸಿಪಿಐ(ಎಂ)ನ ಹಲವು ಮುಖಂಡರು

ಪುಟ 12 ನೋಡಿ

ರಶ್ಯಾದಲ್ಲಿ ಈಗ ನಡೆಯುತ್ತಿರುವ 21ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳ ಸಂದರ್ಭದಲ್ಲಿ ಫುಟ್ಬಾಲ್ ನ ಚರಿತ್ರೆ ಬಗ್ಗೆ ಒಂದು ನೋಟ – ಆರ್.ಡಿ. ಮೆಲ್ಕಿಯೋರ್

ಫುಟ್‌ಬಾಲ್ ಎಂಬ ಹೊಸ ಧರ್ಮ

ಜಗತ್ತಿನಲ್ಲಿ ಮೊದಲನೇ ಸ್ಥಾನದಲ್ಲಿರುವ ಕ್ರೀಡೆ ಫುಟ್ಬಾಲ್. ಫುಟ್ಬಾಲನ್ನು ಕ್ರೀಡೆಗಳ ರಾಜ ಎಂದು ಕರೆಯಲಾಗುತ್ತಿದೆ. ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಜಗತ್ತಿನ ಅತ್ಯಂತ ಶ್ರೇಷ್ಠ ಹಾಗೂ ಬೃಹತ್ ಕ್ರೀಡಾ ಉತ್ಸವ. 21ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಜೂನ್ 14ರಿಂದ ರಷ್ಯಾದಲ್ಲಿ ಪ್ರಾರಂಭವಾಗಿವೆ. ಕಳೆದ ಎರಡು ವರ್ಷಗಳಿಂದ ಆರಂಭವಾದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಅಮೆರಿಕಾ, ಯುರೋಪ್, ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ ಖಂಡಗಳ ಒಟ್ಟು 210 ರಾಷ್ಟ್ರಗಳು ಭಾಗವಹಿಸಿ ಅಂತಿಮ ಸುತ್ತಿಗೆ 32 ರಾಷ್ಟ್ರಗಳು ಆಯ್ಕೆಯಾಗಿವೆ.

ಫುಟ್ಬಾಲ್ ಅರ್ಥಾತ್ ಕಾಲ್ಚೆಂಡು ಕ್ರೀಡೆ ಕ್ರಿ.ಪೂ. 2ನೇ ಶತಮಾನದಲ್ಲಿ ಚೀನಾದಲ್ಲಿ ಆರಂಭವಾಯಿತು ಎಂಬ ದಾಖಲೆಗಳಿವೆ. ರೋಮನ್, ಗ್ರೀಕ್, ಚೀನಾ ನಾಗರೀಕತೆಗಳಲ್ಲಿ ಫುಟ್ಬಾಲ್ ಕ್ರೀಡೆಯ ಕುರುಹುಗಳಿವೆ. ಶತಮಾನಗಳ ಕಾಲ ಜನರು ಚೆಂಡನ್ನು ಒದೆಯುವ ಮೂಲಕ ಸಂತೋಷ ಪಡುತ್ತಾ ಬಂದಿರುತ್ತಾರೆ. ಮಧ್ಯಯುಗದಲ್ಲಿ ಪಟ್ಟಣಗಳ ನಡುವೆ, ಹಳ್ಳಿಗಳ ನಡುವೆ ನೂರಾರು ದಿನಗಳ ಕಾಲ ಒದೆಯುವ ಆಟ ನಡೆಯುತ್ತಿತ್ತು. ಆಧುನಿಕ ಫುಟ್ಬಾಲ್ 1863ರಲ್ಲಿ ಜನ್ಮತಾಳಿತು. ಇದರ ಕೀರ್ತಿ ಇಂಗ್ಲೆಂಡ್‌ಗೆ ಸಲ್ಲುತ್ತದೆ. 18ನೇ ಶತಮಾನದಲ್ಲಿ ಜನಪ್ರಿಯಗೊಂಡ ಫುಟ್ಬಾಲ್ ಕ್ರೀಡೆಗೆ ಬ್ರಿಟೀಷರು ಒಂದು ನಿರ್ದಿಷ್ಟ ರೂಪ ನೀಡಿದರು. 18ನೇ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡಿನಲ್ಲಿ ಹಲವು ಫುಟ್ಬಾಲ್ ಕ್ಲಬ್‌ಗಳು ಉದಯಿಸಿದವು. 1863ರಲ್ಲಿ ಇಂಗ್ಲೆಂಡ್ ಫುಟ್ಬಾಲ್ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದಿತು ಹಾಗೆಯೇ ಕ್ರೀಡೆಗೆ ನಿರ್ದಿಷ್ಟ ರೂಪವನ್ನೂ ನೀಡಲಾಯಿತು ಹಾಗೂ ನಿಯಮಗಳನ್ನು ರೂಪಿಸಲಾಯಿತು. 1904ರಲ್ಲಿ ಅಂತರ‍್ರಾಷ್ಟ್ರೀಯ ಫುಟ್ಬಾಲ್ ಫೆಡರೇಷನ್ ಪ್ಯಾರೀಸ್‌ನಲ್ಲಿ ಅಸ್ಥಿತ್ವಕ್ಕೆ ಬಂದಿತು.

ಇಂದು ಅಂತರ‍್ರಾಷ್ಟ್ರೀಯ ಫುಟ್ಬಾಲ್ ಸಂಸ್ಥೆ (ಫೀಫಾ) ವಿಶ್ವದಲ್ಲಿಯೇ ದೊಡ್ಡ ಹಾಗೂ ಪ್ರಬಲ ಕ್ರೀಡಾ ಸಂಸ್ಥೆಯಾಗಿದೆ ಹಾಗೂ ಸ್ವಿಜರ್‌ಲ್ಯಾಂಡಿನ ಜ್ಯೂರಿಚ್‌ನಲ್ಲಿ ತನ್ನ ಕೇಂದ್ರವನ್ನು ಹೊಂದಿದೆ. ಇಂದು ವಿಶ್ವದ 211 ರಾಷ್ಟ್ರಗಳು ಫೀಫಾದ ಸದಸ್ಯತ್ವವನ್ನು ಹೊಂದಿವೆ. ಇದು ವಿಶ್ವಸಂಸ್ಥೆಯ ಸದಸ್ಯ ರಾಷ್ಟಗಳ ಸಂಖ್ಯೆ(193)ಗಿಂತ ಹಿರಿದಾಗಿದೆ. ಅಂತರ‍್ರಾಷ್ಟ್ರೀಯ ಫುಟ್ಬಾಲ್ ಫೆಡರೇಷನ್ ಇಂದು ವಿಶ್ವದ ಅತ್ಯಂತ ಶ್ರೀಮಂತ ಕ್ರೀಡಾ ಸಂಸ್ಥೆಯಾಗಿದೆ.

ಜನಪ್ರಿಯತೆ

ಫುಟ್ಬಾಲ್ ಇಂದು ವಿಶ್ವದ ಅತ್ಯಂತ ಜನಪ್ರಿಯ ಕ್ರೀಡೆ. ಇದನ್ನು ಜಗತ್ತಿನ ಅತ್ಯಂತ ಸುಂದರ ಕ್ರೀಡೆಯೆಂದು ಕರೆಯಲಾಗುತ್ತದೆ. ಹಿಮಾಲಯದ ತಪ್ಪಲಲ್ಲಿರುವ ನೇಪಾಳದಿಂದ ಹಿಡಿದು, ಆಫ್ರಿಕಾ ಖಂಡದ ಮರುಭೂಮಿ, ದಕ್ಷಿಣ ಅಮೆರಿಕಾ ಖಂಡದ ಸಮುದ್ರ ತೀರಗಳು, ಆಸ್ಟ್ರೇಲಿಯದ ಹುಲ್ಲುಗಾವಲುಗಳು, ಸಾಗರದ ಮಧ್ಯದಲ್ಲಿರುವ ಪುಟಾಣಿ ದ್ವೀಪಗಳು, ಆಲ್ಫ್ಸ್ ಪರ್ವತಶ್ರೇಣಿಯ ತಪ್ಪಲು, ಅಮೆಜಾನ್ ದಟ್ಟ ಕಾಡುಗಳು, ಆಫ್ರಿಕಾದ ಅರಣ್ಯಗಳು ಹೀಗೆ ಎಲೆಲ್ಲೂ ಫುಟ್ಬಾಲ್ ಅರಳಿ ನಿಂತಿದೆ. ಫುಟ್ಬಾಲ್ ಜನಸಾಮಾನ್ಯರ, ಕಾರ್ಮಿಕರ, ಸೈನಿಕರ, ರೈತರ ಮೂಲಕ ಬೆಳೆದು ಬಂದ ಕ್ರೀಡೆಯಾದ ಕಾರಣ ಇದು ವಿಶ್ವದ ಅತ್ಯಂತ ಜನಪ್ರಿಯ ಕ್ರೀಡೆಯಾಗಿದೆ. ಅತ್ಯಂತ ಶ್ರಮ ಬೇಡುವ ಫುಟ್ಬಾಲ್ ಕ್ರೀಡೆ ಜನರನ್ನು ಸಶಕ್ತರನ್ನಾಗಿ ಮಾಡುತ್ತದೆ.

ವಿಶ್ವದಲ್ಲಿ ಫುಟ್ಬಾಲ್ ಕ್ರೀಡೆಯ ಬೆಳವಣಿಗೆ

ವಿಶ್ವದಲ್ಲಿ ಫುಟ್ಬಾಲ್ ಪಸರಿಸಲು ಬ್ರಿಟೀಷರು ಕಾರಣ. ಮೊದಲಿಗೆ ಯುರೋಪಿನಲ್ಲಿ, ನಂತರ ಅಮೆರಿಕಾ ಮುಖ್ಯವಾಗಿ ದಕ್ಷಿಣ ಅಮೆರಿಕಾ, ಆಫ್ರಿಕಾ, ಏಷ್ಯಾ ಖಂಡಗಳಲ್ಲಿ ಫುಟ್ಬಾಲ್ ಬ್ರಿಟೀಷರಿಂದಲೇ ಪಸರಿಸಿತು. ಸಾಮ್ರಾಜ್ಯಶಾಹಿ ರಾಜ್ಯಗಳ ವಸಾಹತು ಸ್ಥಾಪನೆ ಸಹಾ ಜಗತ್ತಿನಾದ್ಯಂತ ಫುಟ್ಬಾಲ್ ನೆಲೆಯೂರಲು, ಬೆಳೆಯಲು ಕಾರಣವಾಯಿತು. ಬ್ರಿಟೀಷ್‌ರು ವಸಾಹತು ಸ್ಥಾಪಿಸಿದ (ಕಾಮನ್‌ವೆಲ್ತ್ ರಾಷ್ಟ್ರಗಳೇ ಇದಕ್ಕೆ ಉದಾಹರಣೆ) ರಾಷ್ಟ್ರಗಳಲ್ಲೆಲ್ಲಾ ಫುಟ್ಬಾಲ್ ಜನಪ್ರಿಯಗೊಂಡಿತು. ಬ್ರಿಟನ್, ಸ್ಪೇನ್, ಪೋರ್ಚುಗಲ್, ಬೆಲ್ಜಿಯಂ, ಹಾಲೆಂಡ್ ರಾಷ್ಟ್ರಗಳು ಎಲ್ಲೆಲ್ಲಿ ವಸಾಹತುಗಳನ್ನು ಸ್ಥಾಪಿಸಿದರೋ ಅಲ್ಲೆಲ್ಲಾ ಫುಟ್ಬಾಲ್ ಬೆಳೆಯಿತು. ಮುಖ್ಯವಾಗಿ ಸ್ಪೇನ್ ದಕ್ಷಿಣ ಅಮೆರಿಕಾ ಖಂಡಗಳ ರಾಷ್ಟ್ರಗಳನ್ನು ತನ್ನ ವಸಾಹತು ಮಾಡಿಕೊಂಡಿತ್ತು. ಬ್ರಿಟನ್, ಪೋರ್ಚುಗಲ್ ಕೂಡಾ ಜೊತೆಗೂಡಿದವು. ಇಡೀ ದಕ್ಷಿಣ ಅಮೆರಿಕಾ ಖಂಡದ ರಾಷ್ಟ್ರಗಳ ಸಂಪತ್ತನ್ನು ಈ ರಾಷ್ಟ್ರಗಳು ಕೊಳ್ಳೆಹೊಡೆದವು. ಸ್ಥಳೀಯ ಸಂಸ್ಕೃತಿಗಳನ್ನು, ಭಾಷೆಗಳನ್ನು ನಾಶ ಮಾಡಿದವು. ಜನಾಂಗಗಳ ನಾಶಕ್ಕೂ ಇವು ಕಾರಣವಾದವು. ಪರಿಣಾಮವಾಗಿ ಮಿಶ್ರ ಜನಾಂಗಗಳು ಹುಟ್ಟಿಕೊಂಡವು. ಆದರೆ ಈ ವಿನಾಶದ ಜತೆಯಲ್ಲೇ ದಕ್ಷಿಣ ಅಮೇರಿಕಾ ಖಂಡಕ್ಕೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕೊಡುಗೆ ಈ ಫುಟ್ಬಾಲ್ ಕ್ರೀಡೆ. ಬ್ರೆಜಿಲ್, ಅರ್ಜೆಂಟೈನಾ, ಉರುಗ್ವೆ, ಪರುಗ್ವೆ, ಪೆರು, ಕೊಲಂಬಿಯಾ, ಮೆಕ್ಸಿಕೋ, ಚಿಲಿ, ಈಕ್ವೆಡೋರ್, ಬೊಲಿವಿಯಾ ರಾಷ್ಟ್ರಗಳ ಸ್ಥಳೀಯರು ಸಾಮ್ರಾಜ್ಯಶಾಹಿಗಳ ಕೊಡುಗೆ ಫುಟ್ಬಾಲ್ ಆಟವನ್ನು ಅಪ್ಪಿಕೊಂಡರು ಹಾಗೂ ಈ ಮೂಲಕ ಬದುಕು ಕಂಡುಕೊಂಡರು.

ಫುಟ್ಬಾಲ್‌ಗೆ ಇನ್ನೊಂದು ಹೆಸರು ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳು. ಲ್ಯಾಟಿನ್ ಅಮೆರಿಕಾದ ಆಟಗಾರರು ಕಲಾತ್ಮಕ ಫುಟ್ಬಾಲ್ ಆಟಕ್ಕೆ ಪ್ರಸಿದ್ಧರು. ಮುಖ್ಯವಾಗಿ ಬ್ರೆಜಿಲ್‌ನ ಇನ್ನೊಂದು ಗುರುತು ಫುಟ್ಬಾಲ್. ಬ್ರೆಜಿಲ್ 5 ಬಾರಿ ವಿಶ್ವಕಪ್ ಗೆದ್ದ ರಾಷ್ಟ್ರವಾಗಿದೆ ಮತ್ತು ಎರಡು ಬಾರಿ ಎರಡನೇ ಸ್ಥಾನ ಗಳಿಸಿದೆ. ಉರುಗ್ವೆ ಪ್ರಥಮ ವಿಶ್ವಕಪ್ ವಿಜೇತ ರಾಷ್ಟ್ರ ಹಾಗೂ ಇದು ಎರಡು ಬಾರಿ ವಿಶ್ವಕಪ್ ಜಯಿಸಿದೆ. ಅರ್ಜೆಂಟೈನಾ ಮೂರು ಬಾರಿ ವಿಶ್ವಕಪ್ ಪಡೆದುಕೊಂಡಿದೆ ಹಾಗೂ ಮೂರು ಬಾರಿ ಎರಡನೆಯ ಸ್ಥಾನ ಗಳಿಸಿದೆ. ಈ ಅಂಕಿಅಂಶಗಳೇ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಫುಟ್ಬಾಲ್‌ನ ಪ್ರಾಬಲ್ಯಕ್ಕೆ ಸಾಕ್ಷಿ. ಬ್ರೆಜಿಲ್‌ನಲ್ಲಿ 'ಮಗು ತಾಯಿಗರ್ಭದಲ್ಲಿದ್ದಾಗಲೇ ಒದೆಯಲು ಕಲಿಯುತ್ತದೆ' ಎಂಬ ನಾಣ್ಣುಡಿ ಚಾಲ್ತಿಯಲ್ಲಿದೆ. ಫುಟ್ಬಾಲ್ ಆಟದ ದಿಗ್ಗಜರಾದ ಪೀಲೆ ಹಾಗೂ ಡೈಗೋ ಮರಡೋನಾ ಕ್ರಮವಾಗಿ ಬ್ರೆಜಿಲ್ ಹಾಗೂ ಅರ್ಜೆಂಟೈನಾ ದೇಶದವರು. ಬ್ರೆಜಿಲ್ 3 ಬಾರಿ ವಿಶ್ವಕಪ್ ಪಡೆಯಲು ಪೀಲೆ ಕಾರಣಕರ್ತನಾದರೆ ಡೈಗೋ ಮರಡೋನಾ 1986ರಲ್ಲಿ ವಿಶ್ವಕಪ್ ಅರ್ಜೆಂಟೈನಾ ಪಾಲಾಗಲು ಕಾರಣಕರ್ತ. ಪೀಲೇ ವಿಶ್ವಫುಟ್ಬಾಲ್‌ನ ಜೀವಂತ ದಂತಕತೆ. ಪೀಲೆಗೆ ಫುಟ್ಬಾಲ್ ಅಭಿಮಾನಿಗಳು 'ಸಾಮ್ರಾಟ ಪೀಲೆ' ಎಂಬ ಬಿರುದು ಕೊಟ್ಟಿದ್ದಾರೆ. ಪೀಲೆಯ ನಂತರ ಹುಟ್ಟಿದ ಎಲ್ಲಾ ದೇಶಗಳ



ಪ್ರಸಿದ್ಧ ಫುಟ್ಬಾಲ್ ಆಟಗಾರರನ್ನು ಪೀಲೆಯ ಜೊತೆ ಹೋಲಿಕೆ ಮಾಡುವುದು ವಾಡಿಕೆಯಾಗಿ ಬಂದಿದೆ. ಇಂದಿಗೂ ಪೀಲೆಯ ಭೇಟಿಗೆ ವಿಶ್ವದ ಎಲ್ಲಾ ರಾಷ್ಟ್ರಗಳ ಫುಟ್ಬಾಲ್ ಪ್ರೇಮಿಗಳು ಹಾತೊರೆಯುತ್ತಾರೆ. ಪೀಲೆ ಯಾವುದೇ ರಾಷ್ಟ್ರಕ್ಕೆ (ವೈಯಕ್ತಿಕ) ಭೇಟಿ ನೀಡಿದಾಗಲೂ ಲಕ್ಷಾಂತರ ಮಂದಿ ಸೇರುತ್ತಾರೆ. 1977ರಲ್ಲಿ ಪೀಲೆ ಭಾರತದ ಫುಟ್ಬಾಲ್ ಕಾಶಿ ಕಲ್ಕತ್ತಾಕ್ಕೆ ಭೇಟಿ ನೀಡಿ ಪ್ರಸಿದ್ಧ ಫುಟ್ಬಾಲ್ ಕ್ಲಬ್ ಮೋಹನ್ ಬಾಗನ್ ಎದುರು ಪ್ರದರ್ಶನ ಪಂದ್ಯವಾಡಿದ್ದ. ಈ ಪಂದ್ಯ ವೀಕ್ಷಿಸಲು ಲಕ್ಷಕ್ಕೂ ಅಧಿಕ ಮಂದಿ ಸೇರಿದ್ದು ಪೀಲೆಯ ಜನಪ್ರಿಯತೆಗೆ ಸಾಕ್ಷಿ. ಇದೇ ರೀತಿ ಫುಟ್ಬಾಲ್‌ನ ಇನ್ನೊಬ್ಬ ಜೀವಂತ ದಂತಕತೆ ಅರ್ಜೆಂಟೈನಾದ ಡೈಗೋ ಮರಡೋನಾ. ಅಲ್ಪಕಾಲ ಮಿಂಚಿದ್ದ ಮರಡೋನಾ ನಂತರ ಮಾದಕ ದ್ರವ್ಯ ವ್ಯಸನಿಯಾದರೂ ಇಂದಿಗೂ ವಿಶ್ವದ ಫುಟ್ಬಾಲ್ ಪ್ರೇಮಿಗಳ ಕಣ್ಮಣಿ. ಮರಡೋನಾ ಎರಡು ಬಾರಿ ಕಲ್ಕತ್ತಾಗೆ ಹಾಗೂ ಒಂದು ಬಾರಿ ಕೇರಳಕ್ಕೆ ಭೇಟಿ ನೀಡಿದ್ದ. ಈ ಭೇಟಿಗಳಿಗೆ ಎರಡೂ ರಾಜ್ಯಗಳಲ್ಲಿ ಲಕ್ಷಾಂತರ ಮಂದಿ ಸಾಕ್ಷಿಯಾಗಿದ್ದರು. ಕಲ್ಕತ್ತಾಕ್ಕೆ ಭೇಟಿ ನೀಡಿದ್ದ ಮರಡೋನಾ ಪಶ್ಚಿಮ ಬಂಗಾಳದ ಅಂದಿನ ಮುಖ್ಯಮಂತ್ರಿ ಜ್ಯೋತಿಬಸು ಅವರನ್ನು ವಿಶೇಷವಾಗಿ ಭೇಟಿಯಾಗಿದ್ದ. ಮರಡೋನಾ ಅಮೆರಿಕಾ ವಿರುದ್ಧದ ದಕ್ಷಿಣ ಅಮೆರಿಕಾದ ರಾಷ್ಟ್ರಗಳ ಜನತೆಯ ಹೋರಾಟದ ಬೆಂಬಲಿಗ.

ಆಫ್ರಿಕಾ ಖಂಡದಲ್ಲಿ ಸಹಾ ಯುರೋಪ್ ಸಾಮ್ರಾಜ್ಯಶಾಹಿ ರಾಷ್ಟ್ರಗಳೇ ಫುಟ್ಬಾಲ್ ಬೆಳವಣಿಗೆಗೆ ಕಾರಣಕರ್ತರು. ಇಂದು ಆಫ್ರಿಕಾ ಖಂಡದಲ್ಲಿ ಫುಟ್ಬಾಲ್ ಜನಪ್ರಿಯ ಕ್ರೀಡೆ. ನೈಜೀರಿಯ, ಮೊರಾಕ್ಕೋ, ಕ್ಯಾಮರೋನ್, ಈಜಿಪ್ಟ್, ಘಾನಾ, ಸೆನೆಗಲ್, ಕಾಂಗೋ ದೇಶಗಳಲ್ಲಿ ಫುಟ್ಬಾಲ್ ಜನಪ್ರಿಯ ಕ್ರೀಡೆ. ಫುಟ್ಬಾಲ್‌ನಲ್ಲಿ ಈ ರಾಷ್ಟ್ರಗಳು ಸಹಾ ವಿಶ್ವಮಟ್ಟದಲ್ಲಿ ಹೆಸರು ಗಳಿಸುತ್ತಿವೆ. ನೈಜೀರಿಯಾ ಹಾಗೂ ಘಾನಾ ಬ್ರಿಟಿಷರ, ಕಾಂಗೋ ಹಾಗೂ ಸೆನೆಗಲ್ ಹಾಗೂ ಕ್ಯಾಮರೋನ್ ಫ್ರೆಂಚರ, ಮೊರಾಕ್ಕೋ ಸ್ಪೇನ್ ಹಾಗೂ ಫ್ರೆಂಚರ, ಈಜಿಪ್ಟ್ ಬ್ರಿಟಿಷರ ವಸಾಹತುಗಳಾಗಿದ್ದವು. ತಮ್ಮನ್ನು ಕೊಳ್ಳೆ ಹೊಡೆದ ದೇಶಗಳಿಂದ ಫುಟ್ಬಾಲ್ ನ್ನು ಈ ರಾಷ್ಟ್ರಗಳು ಸ್ವೀಕರಿಸಿದವು ಮಾತ್ರವಲ್ಲ ಜನಪ್ರಿಯಗೊಳಿಸಿದವು.

ಗುಲಾಮರ ವ್ಯಾಪಾರ ಮತ್ತು ಫುಟ್ಬಾಲ್ ನಂಟು

ಅಮಾನವೀಯ ಗುಲಾಮರ ಮಾರಾಟ ಮಾನವ ಕುಲದ ಕಪ್ಪು ಚುಕ್ಕೆ. ಮುಖ್ಯವಾಗಿ ಆಫ್ರಿಕಾ ಖಂಡದ ನೀಗ್ರೋಗಳು ವಸಾಹತು ರಾಷ್ಟ್ರಗಳ ಮೂಲಕ ಗುಲಾಮರಾಗಿ ವಿಶ್ವದಾದ್ಯಂತ ಮಾರಾಟಗೊಂಡರು. ಆಫ್ರಿಕಾದ ನೀಗ್ರೋಗಳು ಯುರೋಪ್ ಮೂಲಕ ಅಮೆರಿಕಾ ಖಂಡದವರೆಗೆ ಗುಲಾಮರಾಗಿ ಮಾರಾಟಗೊಂಡು ಕಠಿಣ ದುಡಿಮೆಗಳಿಗೆ ಒಳಗಾದವರು. ಶೋಷಣೆ, ಹಿಂಸೆ, ಜನಾಂಗೀಯ ನಿಂದನೆಗೆ ಒಳಗಾದ ನೀಗ್ರೋಗಳು ಇಂದು ತಾವು ನೆಲೆಗೊಂಡ ರಾಷ್ಟ್ರಗಳಲ್ಲಿ ಹಲವು ಕ್ರೀಡೆಗಳಲ್ಲಿ ವಿಶ್ವಖ್ಯಾತಿ ಗಳಿಸಿದ್ದಾರೆ.

ಬ್ರೆಜಿಲ್ ವಿಶ್ವದ ಅತ್ಯಂತ ದೊಡ್ಡ ಗುಲಾಮರನ್ನು ಆಮದು ಮಾಡಿಕೊಳ್ಳುವ ದೇಶವಾಗಿತ್ತು. 1502 ರಿಂದ 1860ರವರೆಗೆ ಬ್ರೆಜಿಲ್ ಗುಲಾಮ ವ್ಯಾಪಾರದ ದೊಡ್ಡ ಪಾಲುದಾರನಾಗಿತ್ತು. ವಿಶ್ವದ ಪಶ್ಚಿಮ ಗೋಲಾರ್ಧಕ್ಕೆ ವ್ಯಾಪಾರಕ್ಕೆ ಬರುತ್ತಿದ್ದ ಗುಲಾಮರಲ್ಲಿ ಶೇಕಡಾ 38ರಷ್ಟು ಮಂದಿ ಈ ಅವಧಿಯಲ್ಲಿ ಬ್ರೆಜಿಲ್‌ನಲ್ಲಿ ನೆಲೆಗೊಂಡರು. ಸಕ್ಕರೆ ಉತ್ಪಾದನೆಗೆ ಸಂಬಂಧಿಸಿದಂತೆ ಕೃಷಿ ಕೆಲಸಗಳಿಗೆ ಇವರನ್ನು ಬಳಸಿಕೊಳ್ಳಲಾಗುತ್ತಿತ್ತು. ಗುಲಾಮರ ವ್ಯಾಪಾರ ನಿಷೇಧಿಸಿದ ಕಟ್ಟ ಕಡೆಯ ರಾಷ್ಟ್ರ ಬ್ರೆಜಿಲ್. 1888ರಲ್ಲಿ ಗುಲಾಮರ ವ್ಯಾಪಾರ, ಬಳಕೆಯನ್ನು ಬ್ರೆಜಿಲ್‌ನಲ್ಲಿ ನಿಷೇಧಿಸಲಾಯಿತು. 20ನೇ ಶತಮಾನದ ಆರಂಭದಲ್ಲಿ ಗುಲಾಮರು ಹಾಗೂ ಅವರ ವಂಶಸ್ಥರೂ ಆದ ನೀಗ್ರೋ ಸಂಜಾತರನ್ನು ಬ್ರೆಜಿಲ್‌ನಲ್ಲಿ ಸಮಾಜದ ಎಲ್ಲಾ ಸಮಸ್ಯೆಗಳಿಗೆ, ಅವಘಡಗಳಿಗೆ ಬಲಿಪಶುಗಳನ್ನಾಗಿ ಮಾಡುವ ಕಾರ್ಯ ಆರಂಭವಾಯಿತು. ಈ ಎಲ್ಲಾ ಅವಮಾನ, ಜನಾಂಗೀಯ ನಿಂದನೆ, ದುಃಖ ದುಮ್ಮಾನಗಳಿಂದ ಹೊರಬರಲು ಗುಲಾಮರು ಹಾಗೂ ನೀಗ್ರೋ ಸಂಜಾತ ಬ್ರೆಜಿಲರು ಬ್ರಿಟೀಷರ ಕೊಡುಗೆಯಾದ ಫುಟ್ಬಾಲ್ ಅನ್ನು ಧರ್ಮದಂತೆ ಅಪ್ಪಿಕೊಂಡರು. ತಮ್ಮದೇ ಆದ ಆಟದ ಶೈಲಿಯನ್ನು ರೂಪಿಸಿಕೊಂಡರು. ಬ್ರೆಜಿಲ್ ಆಟಗಾರರ ಫುಟ್ಬಾಲ್ ಶೈಲಿಯನ್ನು ಇಂದಿಗೂ ವಿಶ್ವದಲ್ಲಿ ರಷ್ಯಾದ ಬ್ಯಾಲೆ ನೃತ್ಯಕ್ಕೆ, ನವಿರಾದ ಸಂಗೀತಕ್ಕೆ, ಶ್ರೇಷ್ಟವಾದ ಕುಂಚ ಕಲೆಗೆ ಹೋಲಿಸಲಾಗುತ್ತಿದೆ. 1930ರಲ್ಲಿ ಬ್ರೆಜಿಲ್‌ನ ಪ್ರತಿಭಾನ್ವಿತ ಕಪ್ಪು ವರ್ಣೀಯ ಫುಟ್ಬಾಲ್ ಆಟಗಾರರು ರಾಷ್ಟ್ರೀಯ ನಾಯಕರಾದರು. ಇವರು ಬ್ರೆಜಿಲ್‌ನ ಕಪ್ಪು ವರ್ಣೀಯರನ್ನು ರಾಷ್ಟ್ರದ ವಿವಿಧತೆಯಲ್ಲಿ ಏಕತೆ ಮೂಡಿಸುವಂತೆ ಪ್ರೇರೇಪಿಸಿದರು. 1930 ರಿಂದ ಬ್ರೆಜಿಲ್‌ನ ಜನತೆಯಲ್ಲಿ ಐಕ್ಯತೆ ಮೂಡಿಸುವಲ್ಲಿ ಫುಟ್ಬಾಲ್ ಪ್ರಮುಖ ಪಾತ್ರ ವಹಿಸಿದೆ.

ಇಲ್ಲಿಂದ ಆರಂಭವಾದ ಗುಲಾಮರು ಮತ್ತು ಅವರ ವಂಶಸ್ಥರಾದ ಕಪ್ಪು ವರ್ಣೀಯರ ಫುಟ್ಬಾಲ್ ಪ್ರಾವಿಣ್ಯತೆ ವಿಶ್ವದೆಲ್ಲೆಡೆ ಪಸರಿಸಿತು. ಜಗತ್ತಿನಲ್ಲಿ ಇಂದು ಫುಟ್ಬಾಲ್‌ಗೆ ಪ್ರಸಿದ್ಧವಾದ ದೇಶದ ತಂಡಗಳಲ್ಲಿ ಕಪ್ಪುವರ್ಣೀಯರು ಇಲ್ಲದ ತಂಡಗಳೇ ಅಪರೂಪವಾಗಿವೆ. ವಿಶ್ವ ಕಂಡ ಸರ್ವ

ಪುಟ 16 ನೋಡಿ



ದಲಿತರು, ಆದಿವಾಸಿಗಳು ಮತ್ತು ಮಹಿಳೆಯರಿಗೆ ನೀಡಿದ ಆಶ್ವಾಸನೆಗಳು ಮಾಡಿದ ವಿಶ್ವಾಸಘಾತ

ಅಧಿಕಾರದಲ್ಲಿ ನಾಲ್ಕು ವರ್ಷಗಳನ್ನು ಪೂರೈಸಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬರುವ ಮೊದಲು ಚುನಾವಣಾ ಪ್ರಚಾರದಲ್ಲಿ, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಅಧಿಕಾರ ವಹಿಸಿಕೊಂಡ ಮೇಲೂ ಆಶ್ವಾಸನೆಗಳ ಮೇಲೆ ಆಶ್ವಾಸನೆಗಳನ್ನು ನೀಡಿತ್ತು–ರೈತರಿಗೆ ಮತ್ತು ಕಾರ್ಮಿಕರಿಗೆ, ವಿವಿಧ ಜನವಿಭಾಗಗಳಿಗೆ– ಮಹಿಳೆಯರಿಗೆ, ದಲಿತರಿಗೆ ಮತ್ತು ಆದಿವಾಸಿಗಳಿಗೆ. ಆದರೆ ಯಾವವೂ ಈಡೇರಿಲ್ಲ. ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ ನಾಲ್ಕು ಕಿರುಪುಸ್ತಕಗಳಲ್ಲಿ ಮೂರನೆಯದು ವಿವಿಧ ಜನವಿಭಾಗಗಳಿಗೆ ನೀಡಿದ ಆಶ್ವಾಸನೆಗಳ ಮತ್ತು ನಾಲ್ಕು ವರ್ಷಗಳ ನಂತರ ಅವುಗಳ ಸ್ಥಿತಿ–ಗತಿಗಳ ಒಂದು ಚಿತ್ರವನ್ನು ನೀಡಿದೆ.

ಅದರಲ್ಲಿನ ಎರಡು ದೊಡ್ಡ ಜನವಿಭಾಗಗಳಾದ ರೈತರು ಮತ್ತು ಕಾರ್ಮಿಕರಿಗೆ ನೀಡಿದ ಆಶ್ವಾಸನೆಗಳ, ಮಾಡಿದ ವಿಶ್ವಾಸಘಾತಗಳ ಚಿತ್ರವನ್ನು ಕಳೆದ ಸಂಚಿಕೆಯಲ್ಲಿ ನೋಡಿದ್ದೀರಿ.

ಈ ಸಂಚಿಕೆಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು ಹಾಗೂ ಮಹಿಳೆಯರಿಗೆ ಸಂಬಂಧಪಟ್ಟಂತೆ ಈ ನಾಲ್ಕು ವರ್ಷಗಳ 'ಸಾಧನೆ' ಗಳ ಚಿತ್ರವನ್ನು ಕೊಡಲಾಗಿದೆ.



ದಲಿತ ಯುವಜನರ ಆಕಾಂಕ್ಷೆಗಳಿಗೆ ಕ್ರೂರ ತಿರಸ್ಕಾರ

2014ರ ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಪರಿಶಿಷ್ಟ ಜಾತಿ/ಬುಡಕಟ್ಟು/ಒಬಿಸಿ ಸಮುದಾಯಗಳ ಸದಸ್ಯರಿಗೆ ಶಿಕ್ಷಣಕ್ಕೆ ಆದ್ಯತೆಯಿರುತ್ತದೆ, ಇವರನ್ನು ಬಡತನದಿಂದ ಮೇಲೆತ್ತಿ ಉದ್ದಿಮೆದಾರರನ್ನಾಗಿ ಪರಿವರ್ತಿಸಲಾಗುವುದು ಎಂದು ಆಶ್ವಾಸನೆ ನೀಡಲಾಗಿತ್ತು. ಅಲ್ಲದೆ ಮೋದಿ ಸರಕಾರ 'ಆಕಾಂಕ್ಷಾಭರಿತ ಭಾರತ'ದ ಅಗತ್ಯಗಳನ್ನು ಈಡೇರಿಸುತ್ತದೆ ಎಂಬ ನಿರೀಕ್ಷೆ ಹುಟ್ಟಿಸಲಾಗಿತ್ತು. ಆದರೆ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಈ ಸರಕಾರ ಆಕಾಂಕ್ಷಾಭರಿತ ದಲಿತ ಯುವಜನರ ಬಗ್ಗೆ ತನ್ನ ಕ್ರೂರ ತಿರಸ್ಕಾರವನ್ನು ಪ್ರದರ್ಶಿಸಿದೆ. ಈ ಮೂಲಕ ಇವೆಲ್ಲ ಅಸ್ಪೃಶ್ಯತೆ ಅಭಿನ್ನ ಅಂಗವಾಗಿರುವ ಮನುಸ್ಮೃತಿಯೇ ಅವರ ಸಂವಿಧಾನ ಎಂಬುದನ್ನು ಸ್ಪಷ್ಟಗೊಳಿಸಿದೆ.

ಶಿಕ್ಷಣ ರಂಗದಲ್ಲಿ 'ಆದ್ಯತೆ'ಯ ಬದಲು ವಂಚನೆ:

ಜನವರಿ 2015ರಲ್ಲಿ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯುದ ಪ್ರತಿಭಾವಂತ ವಿದ್ಯಾರ್ಥಿ ರೋಹಿತ್ ವೆಮುಲನ 'ಸಾಂಸ್ಥಿಕ ಹತ್ಯೆ' ಇದಕ್ಕೆ ಜ್ವಲಂತ ಸಾಕ್ಷಿ. ಸಂಘ ಪರಿವಾರದ 'ವಿಚಾರ'ಗಳನ್ನು ಬಲವಾಗಿ ವಿರೋಧಿಸುತ್ತಿದ್ದ ವೆಮುಲಾನ ಮೇಲೆ ಗುರಿಯಿಟ್ಟು ದಾಳಿ ನಡೆಸಲಾಯಿತು. ಎಷ್ಟೆಂದರೆ ಆತನ ಸಾವಿನ ನಂತರವೂ ಅದು ನಿಲ್ಲಲಿಲ್ಲ, ಆತನ ದಲಿತ ಅಸ್ಮಿತೆಯನ್ನೂ ಕಿತ್ತುಕೊಂಡು, ಆತ ದಲಿತನೇ ಅಲ್ಲ, ಒಬಿಸಿ ಎಂದು ಸಾರಲೂ ಹಿಂಜರಿಯಲಿಲ್ಲ. ಈಗ ಆತನ ತಾಯಿಯ ಮೇಲೂ ಕುತ್ಸಿತ ಟೀಕೆಗಳನ್ನು ಹರಿಯಬಿಡಲಾಗುತ್ತಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ವಿದ್ಯಾರ್ಥಿಗಳು ಎಷ್ಟೊಂದು ಅವಮಾನಕರ ಪರಿಸ್ಥಿತಿಗಳನ್ನು ಎದುರಿಸಬೇಕಾಗಿದೆ ಎಂಬುದಕ್ಕೆ ವೆಮುಲಾ ಆತ್ಮಹತ್ಯೆ ಒಂದು ಉದಾಗರಣೆ. ದಲಿತ ವಿದ್ಯಾರ್ಥಿಗಳಿಗೆ ಹಕ್ಕಾಗಿ ಸಿಗಬೇಕಾದ ವಿದ್ಯಾರ್ಥಿವೇತನಗಳ ಪಾವತಿಯಲ್ಲಿ ವಿಪರೀತ ವಿಳಂಬ ಸಾವಿರ–ಸಾವಿರ ಬಡ ದಲಿತ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಆಕಾಂಕ್ಷೆಗಳನ್ನು ಕೈಬಿಡುವಂತೆ ಮಾಡಿದೆ.

ಉದಾಹರಣೆ ನೋಡಿ:

* ವಿದ್ಯಾರ್ಥಿವೇತನ ನೀಡಲು ಬೇಕಿರುವುದು 8000 ಕೋಟಿ ರೂ.
* 2017–18ರ ಬಜೆಟ್ ನೀಡಿದ್ದು ರೂ.3347.9 ಕೋಟಿ
* 2018–19ರಲ್ಲಿ ಇದು 3000 ಕೋಟಿ ರೂ.ಗೆ ಇಳಿದಿದೆ.
  (ಈ ನಡುವೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ!)
* ರಾಜ್ಯಗಳಿಂದ ಬೇಡಿಕೆ ಬಂದಿರುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಬಾಕಿಯಿರುವ ಸ್ಕಾಲರ್‌ಶಿಫ್‌ಗಳ ಮೊತ್ತ 6824.5 ಕೋಟಿ ರೂ.ಗಳು. ಇದು ಫೆಬ್ರುವರಿ 2, 2018ರಂದು ಸ್ವತಃ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ಸಂಸತ್ತಿಗೆ ನೀಡಿದ ಮಾಹಿತಿ.

ಅಂದರೆ ಅದೆಷ್ಟು ಲಕ್ಷ ದಲಿತ ವಿದ್ಯಾರ್ಥಿಗಳ ಶೈಕ್ಷಣೀಕ ಆಕಾಂಕ್ಷೆಗಳೊಂದಿಗೆ, ಭವಿಷ್ಯದೊಂದಿಗೆ ಈ ಸರಕಾರ ಆಟವಾಡುತ್ತಿದೆ!

ಉದ್ಯೋಗಗಳಲ್ಲೂ ವಂಚನೆ, ವಿಶ್ವಾಸಘಾತ:

ಸರಕಾರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ದಲಿತರಿಗೆ ಶಿಕ್ಷಕರಾಗುವ ಅವಕಾಶಗಳನ್ನು ವಂಚಿಸಲು ಹೊಸದೊಂದು ತಂತ್ರ ವನ್ನು ಬಳಸಲಾಗುತ್ತಿದೆ. ಈಗಲೂ ಶಿಕ್ಷಕರಲ್ಲಿ ದಲಿತರ ಪ್ರಮಾಣ ಕೇವಲ 7.22%. ಯುಜಿಸಿ ಹೊರಡಿಸಿರುವ ಹೊಸ ನಿಯಮಗಳ ಪ್ರಕಾರ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ದಲಿತರಿಗೆ ಮೀಸಲಿರುವ ಶಿಕ್ಷಕರ ಹುದ್ದೆಗಳಲ್ಲಿ 59% ದಷ್ಟು ಕಡಿತವಾಗುತ್ತದೆ ಎಂದು ಲೆಕ್ಕಹಾಕಲಾಗಿದೆ.

ಇತರ ಸರ್ಕಾರದ/ಸಾರ್ವಜನಿಕ ವಲಯದ ಉದ್ದಿಮೆಗಳಲ್ಲೂ ದಲಿತರ ಉದ್ಯೋಗಾವಕಾಶಗಳಲ್ಲಿ ಕಡಿತವಾಗುತ್ತಿದೆ. ಖಾಸಗೀಕರಣ ಮತ್ತು ಹೊರಗುತ್ತಿಗೆ

ಪುಟ 10 ನೋಡಿ

ಆದಿವಾಸಿಗಳಿಗೆ ಕೈಕೊಟ್ಟು ಕಾರ್ಪೊರೇಟ್‌ಗಳ 'ವಿಕಾಸ'

ಸಂವಿಧಾನದ ಪ್ರಕಾರ ಆರ್ಥಿಕ ನ್ಯಾಯ ಮತ್ತು ರಾಜಕೀಯ ಸಬಲೀಕರಣಕ್ಕೆ ಅನುವು ಮಾಡಿಕೊಡುವ ಒಂದು ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಿ ಆದಿವಾಸಿಗಳು ಮತ್ತು ಇತರ ಜನಗಳ ನಡುವಿನ ಅಭಿವೃದ್ಧಿಯ ಅಂತರವನ್ನು ನಿವಾರಿಸಲಾಗುವುದು ಎಂದು ಬಿಜೆಪಿಯ 2014 ರ ಚುನಾವಣಾ ಪ್ರಣಾಳಿಕೆ ದೇಶದ ಆದಿವಾಸಿ ಸಮುದಾಯಗಳಿಗೆ ಆಶ್ವಾಸನೆ ಕೊಟ್ಟಿತ್ತು. ಈಗ ನಾಲ್ಕು ವರ್ಷಗಳ ನಂತರ ಆದಿವಾಸಿಗಳು ಕಾಣುತ್ತಿರುವುದು ಅಭಿವೃದ್ಧಿಯ ಹೆಸರಲ್ಲಿ, ವ್ಯಾಪಾರವನ್ನು ಸುಗಮಗೊಳಿಸುವ ಹೆಸರಿನಲ್ಲಿ ಆದಿವಾಸಿಗಳ ಹಕ್ಕುಗಳು ಮತ್ತು ಜೀವನಾಧಾರಗಳ ಮೇಲೆಯೇ ದಾಳಿ.

ಕಾನೂನುಗಳ ಜಾರಿಯ ಬದಲು, ಹಕ್ಕುಗಳನ್ನು ಕಸಿದುಕೊಳ್ಳುವ ತಿದ್ದುಪಡಿಗಳು/ಕಾನೂನಗಳು

ಅರಣ್ಯ ಹಕ್ಕುಗಳ ಕಾಯ್ದೆ(ಎಫ್‌ಆರ್‌ಎ) 2006 ರಲ್ಲಿ ಆದಿವಾಸಿ ಜನಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳಿಗೆ ಜೀವನಾಧಾರದ ಹಕ್ಕುಗಳನ್ನು ಕೊಟ್ಟಿರುವ ಕಾನೂನು. ಆದರೆ ಅರಣ್ಯದಲ್ಲಿನ ಸಂಪನ್ಮೂಲಗಳ ಮೇಲೆ ಕಣ್ಣಿಟ್ಟಿರುವ ಅದಾನಿ, ವೆದಾಂತ ಮುಂತಾದ ಕಾರ್ಪೊರೇಟ್‌ಗಳು ಮತ್ತು ಅಧಿಕಾರ ಪಡೆಯಲು ಅವರ ಬೆಂಬಲವನ್ನು ಅವಲಂಬಿಸಿರುವ ಆಳುವ ಸರಕಾರಗಳಿಗೆ ಇದು 'ಅಭಿವೃದ್ಧಿ'ಗೆ ಒಂದು ಕಂಟಕವಾಗಿಯೇ ಕಾಣುತ್ತಿದೆ.

ಆದ್ದರಿಂದ ಈ ಕಾಯ್ದೆಯ ಸರಿಯಾದ ಜಾರಿ ಆದಿವಾಸಿಗಳ ಬಹುವರ್ಷಗಳ ಆಗ್ರಹ.

ಕಳೆದ ವರ್ಷ ಈ ಕಾಯ್ದೆಯ ಅಡಿಯಲ್ಲಿನ ಆದಿವಾಸಿ ಜನಗಳ ದಾವೆಗಳನ್ನು ಎರಡು ತಿಂಗಳಲ್ಲಿ ಇತ್ಯರ್ಥ ಮಾಡುವುದಾಗಿ ಸ್ವತಃ ಪ್ರಧಾನ ಮಂತ್ರಿಗಳು ಪ್ರಕಟಿಸಿದರು. ಆದರೆ ಇದುವರೆಗೆ 20–25ಶೇ. ದಾವೆಗಳು ಮಾತ್ರ ಇತ್ಯರ್ಥಗೊಂಡಿವೆ, ಅರ್ಧಕ್ಕಿಂತಲೂ ಹೆಚ್ಚು ದಾವೆಗಳನ್ನು ತಿರಸ್ಕರಿಸಲಾಗಿದೆ.

ಅರಣ್ಯ ಭೂಮಿಯನ್ನು ಕೈಗಾರಿಕಾ ಯೋಜನೆಗಳಿಗೆ ಪರಿವರ್ತಿಸಲು ಆ ಪ್ರದೇಶದ ಗ್ರಾಮ ಸಭೆಯ ಸಮ್ಮತಿ ಬೇಕು ಎನ್ನುವುದು ಈ ಕಾಯ್ದೆಯ ಒಂದು ಪ್ರಮುಖ ಅಂಶ. ಆದರೆ ಮೋದಿ ಸರಕಾರ ಈ ಕಾಯ್ದೆಗೆ ಮತ್ತು ಪಂಚಾಯತುಗಳು(ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ) ಕಾಯ್ದೆ(ಪೇಸಾ)ಕ್ಕೆ ತಿದ್ದುಪಡಿ ತಂದಿದೆ. ಸ್ವತಃ ತನ್ನ ಬುಡಕಟ್ಟು ವ್ಯವಹಾರಗಳ ಇಲಾಖೆಯ ಅಭಿಪ್ರಾಯವನ್ನೂ ಕಡೆಗಣಿಸಿ ಗಣಿಗಾರಿಕೆ, ಮೂಲರಚನೆ ಯೋಜನೆಗಳಿಗೆ ಗ್ರಾಮಸಭೆಯ ಸಮ್ಮತಿಯ ಅಂಶವನ್ನು ಬದಿಗೊತ್ತಿ 2015ರಲ್ಲಿ 35867 ಹೆಕ್ಟೇರ್ ಅರಣ್ಯ ಭೂಮಿಯನ್ನು ಕೊಟ್ಟಿದೆ.

* ಆಗಸ್ಟ್ 2016ರಲ್ಲಿ 'ಕಾಂಪಾ ಬಿಲ್' ತರಲಾಯಿತು. ಅಂದರೆ 'ಪರಿಹಾರಾತ್ಮಕ ಅರಣ್ಯೀಕರಣ ನಿಧಿ ಕಾಯ್ದೆ".

  ಕೈಗಾರಿಕೆಗಾಗಿ ಬಳಸಿದ ಭೂಮಿಯ ಬದಲು ಬೇರೆ ಅರಣ್ಯೀಕರಣದ ಮೂಲಕ ಪರಿಹಾರ ಒದಗಿಸುವುದು ಇದರ ಘೋಷಿತ ಉದ್ದೇಶ. ಆದರೆ ವಾಸ್ತವವಾಗಿ ಇದು ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ದುರ್ಬಲಗೊಳಿಸುವ ಕಾಯ್ದೆ. ಇದರಲ್ಲಿ ಗ್ರಾಮಸಭೆಗಳಿಗೆ ನಿರ್ಧಾರದ ಹಕ್ಕು ಇರುವುದಿಲ್ಲ.
* ಗಣಿಗಳು ಮತ್ತು ಖನಿಜಗಳು(ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ ಉದ್ದಿಮೆಗಾಗಿ ಅರಣ್ಯಪ್ರದೇಶವನ್ನು ಪಡೆದವರು ಅದಕ್ಕೆ ಸಮನಾದ ರಾಯಧನದ 100%ವನ್ನು ಬುಡಕಟ್ಟು ಅಭಿವೃದ್ಧಿ ನಿಧಿಗೆ ನೀಡುವ ಬದಲು ಅದನ್ನು 30%ಕ್ಕೆ ಮಿತಿಗೊಳಿಸಿ ಆದಿವಾಸಿ ಪ್ರದೇಶಗಳಿಗೆ

ಪುಟ 10 ನೋಡಿ

ಮಹಿಳಾ ಸಾಮರ್ಥ್ಯದ ಸಾಕಾರ ಎಂಬ ಮತ್ತೊಂದು ಬೊಗಳೆ

'ಮಹಿಳೆಯರು–ರಾಷ್ಟ್ರ ಕಟ್ಟುವವರು' ಎಂದು 2014ರಲ್ಲಿ ಬಿಜೆಪಿಯ ಪ್ರಣಾಳಿಕೆ ಹೇಳಿತ್ತು. ನಾಲ್ಕು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಮೋದಿ ಸರಕಾರದ ಪೂರ್ಣ ಪುಟದ ಬಣ್ಣದ ಜಾಹೀರಾತು "ಮಹಿಳಾ ನೇತೃತ್ವದ ಅಭಿವೃದ್ಧಿ ಮೂಲಕ ಭಾರತದ ಪೂರ್ಣ ಸಾಮರ್ಥ್ಯದ ಸಾಕಾರ' ಎಂದಿದೆ. ಚುನಾವಣಾ ಪ್ರಣಾಳಿಕೆ 33% ಮೀಸಲಾತಿಯನ್ನು ಸಾಕಾರಗೊಳಿಸುವ ಆಶ್ವಾಸನೆ ನೀಡಿತ್ತು. ಆದರೆ ಭಾರತದ ಪೂರ್ಣ ಸಾಮರ್ಥ್ಯದ ಸಾಕಾರದ ಬಹುವರ್ಣಗಳ ಜಾಹೀರಾತಿನಲ್ಲಿ 33% ಮೀಸಲಾತಿಯ ಸಾಕಾರದ ಮಾತೇ ಇಲ್ಲ. ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಮಾತಂತೂ ಇಲ್ಲವೇ ಇಲ್ಲ.

ಸಂಸತ್ತಿನಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ 33% ಮೀಸಲಾತಿಗೆ ತಾನು ಬದ್ಧ ಎಂದು ಸಾರಿದ್ದರೂ ನಾಲ್ಕು ವರ್ಷಗಳಾದರೂ ಈ ನಿಟ್ಟಿನಲ್ಲಿ ಆಳುವ ಪಕ್ಷವಾಗಲೀ, ಅವರ ಸರಕಾರವಾಗಲೀ ಒಂದೇ ಒಂದು ಹೆಜ್ಜೆಯನ್ನೂ ಇಟ್ಟಿಲ್ಲ. ಬಹುಮತ ಇಲ್ಲ ಅಥವ ಸರ್ವಸಮ್ಮತಿ ಇಲ್ಲ ಎಂಬ ಮಾತೂ ಕೇಳಬಂದಿಲ್ಲ. ಬರೀ ಮೌನ. 75 ಮಂತ್ರಿಗಳಿರುವ ಸಂಪುಟದಲ್ಲಿ ಮಹಿಳೆಯರ ಸಂಖ್ಯೆ 9 ಮಾತ್ರ.

ಉದ್ಯೋಗರಂಗದಲ್ಲಿ ಮಹಿಳೆ

ಈ ಬಹುವರ್ಣದ ಜಾಹೀರಾತಿನಲ್ಲಿ ಮಹಿಳೆಯರ ಉದ್ಯೋಗ ಸಾಮರ್ಥ್ಯದ ಬಗ್ಗೆಯೂ ಏನೂ ಇಲ್ಲ. ಉದ್ಯೋಗರಂಗದಲ್ಲಿ ಭಾಗವಹಿಸುವಿಕೆ ಸಬಲೀಕರಣ ತಿರುಳು. ಇದು ಸದಾ ಕಡಿಮೆಯೇ ಇತ್ತು. ಈಗಲೂ ಹಾಗೆಯೇ ಇದೆ. ಸ್ವಲ್ಪಮಟ್ಟಿಗೆ ಮತ್ತಷ್ಟು ಇಳಿದಿದೆ. ಲೇಬರ್ ಬ್ಯುರೊ ನಡೆಸಿರುವ 5ನೇ ಉದ್ಯೋಗ–ನಿರುದ್ಯೋಗ ಸರ್ವೆಯ ಪ್ರಕಾರ ದುಡಿಯುವ ಮಹಿಳೆಯರ ಪ್ರಮಾಣ 2013–14ರಲ್ಲಿ 25.8% ಇತ್ತು, 2015–16ರಲ್ಲಿ ಅದು 23.7% ಆಗಿದೆ. ಅದೇ ಅವಧಿಯಲ್ಲಿ ಅವರಲ್ಲಿ ಉದ್ಯೋಗಹೀನತೆ 7.7%ದಿಂದ 8.7%ಕ್ಕ ಏರಿದೆ.

1990 ದಶಕದ ಆರಂಭ'ದಿಂದ ನವ–ಉದಾರೀಕರಣ ಯುಗದಲ್ಲಿನ ಈ ಇಳಿಕೆಯ ಪ್ರವೃತ್ತಿಯನ್ನು ಮೋದಿ ಸರಕಾರಕ್ಕೆ ಬದಲಿಸಲು ಆಗಿಲ್ಲ ಎನ್ನುವುದಕ್ಕಿಂತ ಅದನ್ನು ಬದಲಿಸುವ ಉದ್ದೇಶವೂ ಇರಲಿಲ್ಲ ಎನ್ನಬಹುದು.

ವಾಸ್ತವವಾಗಿ ಅವರ ಮಟ್ಟಿಗೆ ಮಹಿಳೆಯ ಶ್ರಮ 'ಸ್ವಯಂಸೇವೆ'. ಆದ್ದರಿಂದ ಅದು ಮಹಿಳೆಯರನ್ನು ಉದ್ಯೋಗಭದ್ರತೆ ಇಲ್ಲದ, ಕನಿಷ್ಟ ಸಂಬಳ ಇಲ್ಲದ ಮತ್ತು ಸಾಮಾಜಿಕ ಭದ್ರತೆ ಇಲ್ಲದ 'ಸ್ವಯಂಪ್ರೇರಣೆ'ಯ 'ಗೌರವಧನ'ದ ಕೆಲಸಗಾರರೆಂದು ಪರಿಗಣಿಸುವುದನ್ನು ಮುಂದುವರೆಸಲಾಗಿದೆ. ಐಸಿಡಿಎಸ್, ಆರೋಗ್ಯ ಮಿಶನ್, ಮಧ್ಯಾಹ್ನ ಊಟ ಮುಂತಾದ ಜನಸಾಮಾನ್ಯರನ್ನು ತಲುಪಬೇಕಾದ ಸರಕಾರದ ವಿವಿಧ ಯೋಜನೆಗಳನ್ನು ಸಾಕಾರಗೊಳಿಸುತ್ತಿರುವ ಒಂದು ಕೋಟಿಗೂ ಹೆಚ್ಚು ಮಹಿಳಾ ಕೆಲಸಗಾರರು ಎದುರಿಸುತ್ತಿರುವ ತಾರತಮ್ಯ ಅವರ ಸಾಮರ್ಥ್ಯವನ್ನು ಸಾಕಾರಗೊಳಿಸುವಲ್ಲಿ ಮೋದಿ ಸರಕಾರದ ಮಟ್ಟಿಗೆ ಒಂದು ಅಂಶವೇ ಅಲ್ಲ.

ಆದ್ದರಿಂದ ಬಿಜೆಪಿ ಪ್ರಣಾಳಿಕೆ ಅಂಗನವಾಡಿ ನೌಕರರ ಸಂಬಳವನ್ನು ಹೆಚ್ಚಿಸುವ ನಿರ್ದಿಷ್ಟ ಆಶ್ವಾಸನೆಯನ್ನು ಕೊಟ್ಟಿದ್ದರೂ 2014–15ರ ಮೊದಲ ಪೂರ್ಣ ಬಜೆಟಿನಲ್ಲೇ 18,108 ಕೋಟಿ ರೂ.ಗೆ ಇಳಿಸಿತು. 2015–16ರಲ್ಲಿ 8400 ಕೋಟಿ ರೂ.ಗೆ ಇಳಿಸಿತು. 2017–18ರ ವೇಳೆಗೂ ಅದು 2014–15ರ ಮಟ್ಟಕ್ಕೆ ವಾಪಾಸು ಬಂದಿಲ್ಲ.

ಪೋಷಣಾಂಶ ಕೊರತೆ

ಬಹುವರ್ಣದ ಜಾಹೀರಾತು 'ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಉಪಕ್ರಮಗಳು' ಎಂದು ಹೇಳಿದೆ. ಆದರೆ ಈ ನಿಟ್ಟಿನಲ್ಲಿ ಕೃತಿಗಿಂತ ಹೆಚ್ಚು ಮಾತೇ ಕೇಳಬಂದಿದೆ. 2016ರಲ್ಲಿ ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರಿಗೆ ಒಂದು 'ಹೊಸ'

ಪುಟ 10 ನೋಡಿ

ದಲಿತ ಯುವಜನರ ಆಕಾಂಕ್ಷೆಗಳಿಗೆ ಕ್ರೂರ ತಿರಸ್ಕಾರ

ಪುಟ 9 ರಿಂದ

ಇದಕ್ಕಾಗಿ ಸರಕಾರ ಬಳಸುತ್ತಿರುವ ತಂತ್ರಗಳು. ಈ ನಾಲ್ಕು ವರ್ಷಗಳಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

ಖಾಸಗೀಕರಣದ ಮೇಲೆ ವಿಪರೀತ ಒತ್ತು ನೀಡುತ್ತಿರುವ ಈ ಸರಕಾರ ಮೀಸಲಾತಿಯನ್ನು ಖಾಸಗೀ ವಲಯುಕ್ಕೂ ವಿಸ್ತರಿಸಲು ಶಾಸನ ರೂಪಿಸಬೇಕು ಎನ್ನುವ ಬಹುದಿನಗಳ ಬೇಡಿಕೆಯ ಬಗ್ಗೆ ದಿವ್ಯಮೌನ ತಾಳಿದೆ. ಆ ಬಗ್ಗೆ ಚರ್ಚಿಸಲೂ ನಿರಾಕರಿಸುತ್ತಿದೆ.

ಇನ್ನೊಂದೆಡೆಯಲ್ಲಿ ದಲಿತರ 'ಪಾರಂಪರಿಕ' ಉದ್ಯೋಗಗಳ ಮೇಲೂ ದಾಳಿ ನಡೆಯುತ್ತಿದೆ– ಮುಖ್ಯವಾಗಿ 'ಗೋರಕ್ಷಣೆ' ಹೆಸರಲ್ಲಿ– ಜಾನುವಾರು ವ್ಯಾಪಾರದ ಮೇಲೆ ಅಡೆ–ತಡೆಗಳು ಮತ್ತು ಕಸಾಯಿಖಾನೆಗಳ ಮುಚ್ಚಿಕೆಗಳಿಂದ. ಇದು ಲಕ್ಷಾಂತರ ದಲಿತರು ಕೆಲಸ ಮಾಡುವ ಚರ್ಮ ಉದ್ದಿಮೆಯ ಮೇಲೂ, ಆಮೂಲಕ ದಲಿತರ ಉದ್ಯೋಗಗಳ ಮೇಲೂ ಭಾರೀ ದುಷ್ಪರಿಣಾಮ ಬೀರಿದೆ.

ಈ 'ಗೋರಕ್ಷಣೆ' ದಲಿತರ ಆಹಾರ ಪದ್ಧತಿಯನ್ನು ಕೂಡ ತಟ್ಟಿದೆ. 54% ದಷ್ಟು ಪೋಷಕಾಂಶಗಳ ಅಭಾವವಿರುವ ಈ ಸಮುದಾಯದ ಪೋಣಾಂಶದ ಒಂದು ಮೂಲವನ್ನೂ ಕಿತ್ತುಕೊಳ್ಳಲಾಗುತ್ತಿದೆ.

ಈ 'ಗೋರಕ್ಷಣೆ' ಈ ಸಮುದಾಯದ ಮೇಲೆ ಎಂತಹ ಘೋರ ಆಪತ್ತನ್ನು ತಂದಿದೆ ಎಂಬುದಂತೂ ಈಗ ಎಲ್ಲರಿಗೂ ತಿಳಿದಿರುವ ವಿಚಾರ. ಪ್ರಧಾನ ಮಂತ್ರಿಗಳ ತವರು ರಾಜ್ಯವಾದ ಉನಾದಲ್ಲಿ ಐವರು ದಲಿತ ಹುಡುಗರೊಂದಿಗೆ ಅಮಾನುಷ ವರ್ತನೆಯಿಂದ ಬೆಳಕಿಗೆ ಬಂದಿರುವ ಈ ಕ್ರೌರ್ಯ ಇನ್ನೂ ನಿಂತಿಲ್ಲ.

ಉದ್ಯೋಗ, ಮೀಸಲಾತಿ ಎಂದು ಅಲೆದದ್ದು ಸಾಕು, ಸ್ವಯಂ ಉದ್ಯೋಗಿಳಾಗಿ ಎಂದು ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿನ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಸರಕಾರ ಹೇಳುತ್ತಿದ್ದರೂ, **ದಲಿತರನ್ನು ಉದ್ದಿಮೆದಾರರನ್ನಾಗಿ ಮಾಡುವ ಆಶ್ವಾಸನೆಯಾದರೂ ಎಷ್ಟರ ಮಟ್ಟಿಗೆ ಈಡೇರಿದೆ?**

ಈ ಹಿಂದೆ ಯುಜಿಸಿಯ ಅಧ್ಯಕ್ಷರಾಗಿದ್ದ ಪ್ರೊ. ಸುಖದೇವ್ ಥೋರಟ್ ಇದೂ ಇನ್ನೊಂದು ಟೊಳ್ಳು ಆಶ್ವಾಸನೆಯೆಂಬುದನ್ನು ಬಯಲಿಗೆಳೆದಿದ್ದಾರೆ. ಎಸ್‌ಸಿ./ಎಸ್‌ಟಿ ಹಬ್ ಎಂಬ ಒಂದು ಕಾರ್ಯಕ್ರಮದ ಜಾರಿಗೆ ಸಲಹೆಗೆಂದು ಒಂದು ಬಹುರಾಷ್ಟ್ರೀಯ ಸಲಹಾ ಕಂಪನಿಗೆ 490 ಕೋಟಿ ರೂ.ಗಳನ್ನು ನೀಡಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಉದ್ದಿಮೆಗಳ ಮಂತ್ರಾಲಯ ತನ್ನ ಖರೀದಿಗಳ 4% ದಷ್ಟನ್ನು ಪರಿಶಿಷ್ಟ ಜಾತಿ/ಬುಡಕಟ್ಟುಗಳ ಉದ್ದಿಮೆಗಳಿಂದ ಪಡೆಯಬೇಕು ಎಂದು ವಿಧಿಸಲಾಗಿದೆ. ಆದರೆ ಸಾಧ್ಯವಾಗಿರುವುದು 0.39%, ಅಂದರೆ 10ಶೇ. ದಷ್ಟು ಮಾತ್ರ.

ಭೂಹೀನತೆ ನಿವಾರಿಸುವ ಒಂದಾದರೂ ಕ್ರಮ ಇಲ್ಲ

ದಲಿತರನ್ನು ಸದಾ ಭೂಮಿಯ ಹಕ್ಕುಗಳಿಂದ ವಂಚಿಸಿಡಲಾಗಿದೆ. ಈಗಲೂ ಭೂಹೀನರಲ್ಲಿ ದಲಿತರೇ ಅತಿ ದೊಡ್ಡ ಸಮುದಾಯ, 58%ದಷ್ಟು. ಆದ್ದರಿಂದ ಭೂಮಿ ದಲಿತರ ಬಹುಕಾಲದ ಬೇಡಿಕೆಗಳಲ್ಲಿ ಪ್ರಮುಖವಾಗಿದೆ. ಆದರೆ ಮೋದಿ ಸರಕಾರ ಇದನ್ನು ಸಂಪೂರ್ಣವಾಗಿ ಉಪೇಕ್ಷಿಸಿದೆ. ಕೇಂದ್ರದಿಂದಾಗಲೀ, ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಾಗಲೀ ಈ ನಿಟ್ಟಿನಲ್ಲಿ ಒಂದೇ ಒಂದು ಕ್ರಮದ ಯೋಚನೆಯೂ ಇಲ್ಲ.

ಪರಿಶಿಷ್ಟ ಜಾತಿ ಉಪಯೋಜನೆಗೆ ಗಮನಾರ್ಹ ಕಡಿತ

ದುರ್ಬಲ ವಿಭಾಗಗಳ ಅಭಿವೃದ್ಧಿಯನ್ನು ಕಡೆಗಣಿಸಲಾಗದಂತೆ ನೋಡಿಕೊಳ್ಳಲು ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಪಿ)ಮತ್ತು ಬುಡಕಟ್ಟು ಉಪಯೋಜನೆ(ಟಿಎಸ್‌ಪಿ) ವ್ಯವಸ್ಥೆ ತರಲಾಗಿದ್ದು ಬಜೆಟ್‌ಗಳಲ್ಲಿ ಈ ಸಮುದಾಯಗಳ ಜನಸಂಖ್ಯೆಯ ಅನುಪಾತದಲ್ಲಿ ಇವಕ್ಕೆ ಹಣ ಒದಗಿಸಬೇಕು ಎಂದಿತ್ತು. ಅಂದರೆ ಎಸ್‌ಸಿಪಿಗೆ 16.6% ಒದಗಿಸಬೇಕು.

ಆದರೆ ಬಜೆಟಿನಲ್ಲಿ ಯೋಜನಾ ಮತ್ತು ಯೋಜನೇತರ ಖರ್ಚುಗಳು ಎಂಬಭಿನ್ನತೆಯನ್ನು ಈ ಸರಕಾರ ತೆಗೆದು ಹಾಕಿದ ಮೇಲೆ, ಇದನ್ನೇ ಬಳಸಿಕೊಂಡು ಈ ಬಾಬ್ತಿನಲ್ಲಿ ಖರ್ಚುಗಳಲ್ಲಿ ಭಾರೀ ಕಡಿತ ತರಲಾಗಿದೆ. ಮೋದಿ ಸರಕಾರದ ನಾಲ್ಕುವರ್ಷಗಳಲ್ಲಿ ಇದು ಸರಾಸರಿ 7.59%, ಅಂದರೆ ಅರ್ಧಕ್ಕಿಂತಲೂ ಕಡಿಮೆ, ಇದು ಹಲವು ಸಾವಿರ ಕೋಟಿ ರೂ.ಗಳಷ್ಟಾಗುತ್ತದೆ.

2014–15	8.79%
2015–16	6.63%
2016–17	7.06%
2017–18	8.91%
2018–19	6.55%

ದೌರ್ಜನ್ಯ ತಡೆ ಕಾಯ್ದೆಯನ್ನೂ ದುರ್ಬಲಗೊಳಿಸುವ ಹುನ್ನಾರ

ನವಂಬರ್ 2017ರಲ್ಲಿ ಪ್ರಕಟವಾದ ಎನ್‌ಸಿಆರ್‌ಬಿ(ರಾಷ್ಟ್ರೀಯ ಅಪರಾಧ ದಾಖಳೆಗಳ ಕಚೇರಿ) ಮಾಹಿತಿಗಳ ಪ್ರಕಾರ ಪರಿಶಿಷ್ಟ ಜಾತಿಗಳ ಜನಗಳ ಮೇಲೆ ಎಸಗಿರುವ ಅಪರಾಧಗಳ ಸಂಖ್ಯೆ 2015ರಲ್ಲಿ 38670; 2016ರಲ್ಲಿ ಇದು 40,801ಕ್ಕೇರಿದೆ. ನಂತರದ ಮಾಹಿತಿಗಳು ಇನ್ನೂ ಪ್ರಕಟವಾಗಿಲ್ಲ.

2016ರಲ್ಲಿ ಇಂತಹ ಅಪರಾಧಗಳು ಅತಿ ಹೆಚ್ಚು ದಾಖಲಾದದ್ದು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲೇ. 10426 ಅಪರಾಧಗಳನ್ನು ದಾಖಲಿಸಿರುವ ಉತ್ತರಪ್ರದೇಶ ಇದರಲ್ಲಿ ಸರ್ವಪ್ರಥಮ ಎನ್ನುವುದು ಆಶ್ಚರ್ಯದ ಸಂಗತಿಯೇನಲ್ಲ. ನಂತರದ ಸ್ಥಾನಗಳು ಬಿಹಾರ ಮತ್ತು ರಾಜಸ್ತಾನದ್ದು.

ಒಟ್ಟು ಜನಸಂಖ್ಯೆಯ ಪ್ರಮಾಣದಲ್ಲಿ ದಲಿತರ ಮೇಲಿನ ಅತ್ಯಾಚಾರಗಳ ದರದಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿ, ನಂತರದ ಸ್ಥಾನಗಳಲ್ಲಿ ರಾಜಸ್ತಾನ, ಗೋವಾ, ಬಿಹಾರ ಮತ್ತು ಗುಜರಾತ ಬರುತ್ತವೆ.

ಅಪರಾಧ ದಾಖಲಾದ ಕೇಸುಗಳಲ್ಲಿ ಶಿಕ್ಷೆಗೊಳಗಾದವರ ಪ್ರಮಾಣ 1% ಮಾತ್ರ, ಅರ್ಧಕ್ಕಿಂತಲೂ ಹೆಚ್ಚು ಕೇಸುಗಳು ವರ್ಷಾನುಗಟ್ಟಲೆ ಕೋರ್ಟುಗಳಲ್ಲಿ ಬಿದ್ದಿವೆ.

ಆದರೂ ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳ ವಿರುದ್ಧ ದೌರ್ಜನ್ಯಗಳ ತಡೆ ಕಾಯ್ದೆ(ಪಿಒಎ) ಆಳುವ ಮಂದಿಯ ಕಣ್ಣು ಕುಕ್ಕುತ್ತಿದೆ. ಇದರ ದುರುಪಯೋಗವಾಗುತ್ತಿದೆ ಎಂದು ಸುಪ್ರಿಂ ಕೋರ್ಟ್‌ನಲ್ಲಿ ಹಾಕಿದ್ದ ಒಂದು ಅರ್ಜಿಯನ್ನು ಎತ್ತಿ ಹಿಡಿದು ಅದನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟ್‌ನ ತೀರ್ಪು ಎಲ್ಲ ದಲಿತ ವಿಭಾಗಗಳಲ್ಲಿ ಮಾತ್ರವಲ್ಲ ಪ್ರಜಾಪ್ರಭುತ್ವವಾದಿ ವಿಭಾಗಗಳಲ್ಲೂ ಆಕ್ರೋಶವನ್ನು ಉಂಟು ಮಾಡಿದೆ. ಮೋದಿ ಸರಕಾರ ಇದರ ವಿರುದ್ಧ ಸರಿಯಾಗಿ ವಾದ ಮಂಡಿಸದಿರುವುದೇ ಈ ಪ್ರತಿಗಾಮಿ ತೀರ್ಪಿಗೆ ಕಾರಣ ಎಂದು ಮೋದಿ ಸರಕಾರದ ಬಗ್ಗೆ ಸಹಾನುಭೂತಿ ಇರುವ ದಲಿತ ವಿಭಾಗಗಳಿಗೂ ಅನಿಸಿರುವುದು ಈ ಬೆಳವಣಿಗೆಯ ಒಂದು ವಿಶೇಷ.

ಈ ಆಕ್ರೋಶ ಎಪ್ರಿಲ್ 2ರಂದು ಭಾರತ ಬಂದ್ ರೂಪದಲ್ಲಿ ಭುಗಿಲೆದ್ದಿತು. ಇದರಲ್ಲಿ ಸಾವಿರಾರು ದಲಿತ ಯುವಕರು ಭಾಗವಹಿಸಿದರು. ಆಗ ಅವರು ಅತಿಹೆಚ್ಚು ದಮನ ಎದುರಿಸಬೇಕಾಗಿ ಬಂದದ್ದು ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ ಮತ್ತಿತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲೇ ಎಂಬುದು ಇನ್ನೊಂದು ಗಮನಾರ್ಹ ಸಂಗತಿ. ಈ ಆಕ್ರೋಶ ಒಂಭತ್ತು ದಲಿತ ಯುವಕರನ್ನು ಬಲಿ ತೆಗೆದುಕೊಂಡಿತು. ಅದರಲ್ಲಿ 5 ಮಂದಿ ಬಿಜೆಪಿ ಸರಕಾರದ ಪೋಲಿಸರ ಗುಂಡುಗಳಿಗೆ ಬಲಿಯಾದರೆ, ಉಳಿದ 4 ಮಂದಿಯನ್ನು ಕೊಂದವರು ಮಧ್ಯಪ್ರದೇಶದ ಬಿಜೆಪಿ ಗೂಂಡಾಗಳು. ಇವರು ಇನ್ನೂ ಆರಾಮವಾಗಿ ಅಡ್ಡಾಡಿಕೊಂಡಿದ್ದರೆ, ಅದನ್ನು ಪ್ರತಿಭಟಿಸಿದ ಸಾವಿರಾರು ದಲಿತ ಯುವಕರು ಇನ್ನೂ ಜೈಲುಗಳಲ್ಲೇ ಇದ್ದಾರೆ, ಅವರಿಗೆ ಜಾಮೀನು ಕೂಡ ಕೊಡುತ್ತಿಲ್ಲ.

'ಹಿಂದು ಒಂದು' ಎನ್ನುವ ಘೋಷಣೆಯ ಅಡಿಯಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷದ ಆಧಾರದಲ್ಲಿ ದಲಿತರನ್ನೂ ಒಳಗೊಳ್ಳುವ ಪ್ರಯತ್ನಗಳ ಜೊತೆಗೇ ಅಸ್ಪೃಶ್ಯತೆಯ ವಿರುದ್ಧ, ದಲಿತರಿಗೆ ಸಮಾನ ಹಕ್ಕುಗಳಿಗೆ ಇರುವ ಕಾನೂನು ಮತ್ತು ಸಂವಿಧಾನಿಕ ಅಂಶಗಳನ್ನು ದುರ್ಬಲಗೊಳಿಸುತ್ತ ಬರುತ್ತಿರುವುದು ಮೋದಿ ಸರಕಾರದ ಈ ನಾಲ್ಕು ವರ್ಷಗಳಲ್ಲಿ ಕಂಡು ಬಂದಿರುವ ಸಂಗತಿ.

ಮಹಿಳಾ ಸಾಮರ್ಥ್ಯದ ಸಾಕಾರ ಎಂಬ ಮತ್ತೊಂದು ಬೊಗಳೆ

ಪುಟ 9 ರಿಂದ

ಸ್ಕೀಂ ಆರಂಭಿಸುತ್ತಿರುವುದಾಗಿ ಪ್ರಧಾನ ಮಂತ್ರಿಗಳು ಪ್ರಕಟಿಸಿದರು. ಆದರೆ ವಾಸ್ತವವಾಗಿ ಅದು ಪ್ರಯೋಗ ಹಂತದಲ್ಲಿ ಆಗಲೇ ಇದ್ದ ಯೋಜನೆಯನ್ನು ಇಡೀ ದೇಶಕ್ಕೆ ವಿಸ್ತರಿಸಿದ ಸಂದರ್ಭ ಮಾತ್ರವಾಗಿತ್ತು, ಹೊಸ ಯೋಜನೆಯೇನೂ ಅಲ್ಲ, ಬದಲಾಗಿ ಇದ್ದ ಯೋಜನೆಯ ಕಡಿತಗೊಂಡ ರೂಪವಾಗಿತ್ತು. ಈ ಸೌಕರ್ಯವನ್ನು ಇಬ್ಬರು ಮಕ್ಕಳ ಬದಲಿಗೆ ಕೇವಲ ಒಬ್ಬರಿಗೆ ಸೀಮಿತಗೊಳಿಸಲಾಗಿದೆ. ಅಲ್ಲದೆ ಇದನ್ನು ಆಧಾರ್‌ಗೆ ಜೋಡಿಸಲಾಗಿದೆ. ಆಂದರೆ ಇನ್ನೂ ಸಾವಿರಾರು ಅಗತ್ಯ ಫಲಾನುಭವಿಗಳು ವಂಚಿತರಾಗಿದ್ದಾರೆ.

15–19 ವಯೋಗುಂಪಿನಲ್ಲಿ 41.9% ಯುವತಿಯರು ಕಡಿಮೆ ತೂಕದವರಾಗಿದ್ದಾರೆ. ಇದು ಮುಖ್ಯವಾಗಿ ಪೋಷಣಾಂಶಗಳ ಕೊರತೆಯಿಂದಾಗಿ. ಆದರೆ ಮಹಿಳೆಯರ ಪೂರ್ಣ ಸಾಮರ್ಥ್ಯವನ್ನು ಸಾಕಾರಗೊಳಿಸುವ ಮಾತಾಡುವ ಸರಕಾರ ಈ ಸಮಸ್ಯೆಯನ್ನು ಕೈಗೆತ್ತಿಕೊಂಡಿಲ್ಲ, ಬದಲಾಗಿ ಮಹಿಳೆಯರಿಗೆ ಪೋಷಣಾಂಶ ಒದಗಿಸುವ ಸ್ಕೀಮ್‌ಗಳಿಗೂ ಹಣ ಕಡಿತ ಮಾಡಿದೆ.

ಹಿಂಸಾಚಾರ

ಎನ್‌ಸಿಆರ್‌ಬಿ ಅಂಕಿ–ಅಂಶಗಳು ತೋರಿಸುವಂತೆ ಮಹಿಳೆಯರ ಮೇಲಿನ ಅಪರಾಧಗಳು, ಅದರಲ್ಲಿಯೂ ಅತ್ಯಾಚಾರಗಳ ಸಂಖ್ಯೆ ಏರಿದೆ, ತದ್ವಿರುದ್ಧವಾಗಿ ಈ ಅಪರಾಧಗಳಿಗಾಗಿ ಶಿಕ್ಷೆಗೆ ಒಳಗಾಗಿರುವವರ ಪ್ರಮಾಣ ಇಳಿದಿದೆ.

* 2013ರಲ್ಲಿ ಮೋದಿಯವರು ಅಧಿಕಾರ ವಹಿಸುವ ಮೊದಲು 3,37,922 ಅಪರಾಧಗಳು ದಾಖಲಾಗಿದ್ದವು. ಅದು 2016ರಲ್ಲಿ 3,38,954 ಕ್ಕೆ ಏರಿದೆ.
* ಅತ್ಯಾಚಾರಗಳ ಸಂಖ್ಯೆ ಈ ಅವಧಿಯಲ್ಲಿ 33,707ರಿಂದ 38,947ಕ್ಕೆ ಏರಿದೆ.
* ಶಿಕ್ಷೆಗೊಳಗಾದವರ ಪ್ರಮಾಣ 21.3%ದಿಂದ 18.9%ಕ್ಕೆ ಇಳಿದಿದೆ.
* 2016ರಲ್ಲಿ ಮಹಿಳೆಯರ ವಿರುದ್ಧ ಅತಿ ಹೆಚ್ಚು ಅಪರಾಧಗಳು ದಾಖಲಾಗಿರುವುದು ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ, ಇವು ಮೂರು ಬಿಜೆಪಿ ಆಳ್ವಿಕೆಯ ರಾಜ್ಯಗಳು ಎಂಬುದು ಕಾಕತಾಳಿಯವೇನಲ್ಲ.

ನಂತರದ ಅಂಕಿ–ಅಂಶಗಳನ್ನು ಇನ್ನೂ ಪ್ರಕಟಿಸಿಲ್ಲ ಎಂಬುದನ್ನೂ ಗಮನಿಸಬೇಕು.

ಭಾರತ ಈಗ ಜಗತ್ತಿನಲ್ಲೇ ಮಹಿಳೆಯರಿಗೆ ಅತ್ಯಂತ ಅಪಾಯಕಾರಿ ದೇಶ ಎಂಬ ಸುದ್ದಿ ಈವಾರ ಪ್ರಕಟವಾಗಿದೆ. 2011ರಲ್ಲಿ ಈ ವಿಷಯದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ಭಾರತ ಈ ಬಾರಿ ಪಾಕಿಸ್ತಾನ, ಕಾಂಗೋ ಮತ್ತು ಗಲಭೆ ಪೀಡಿತ ಅಫಘಾನಿಸ್ತಾನವನ್ನೂ ಕೆಳಕ್ಕೆ ನೂಕಿ ಮೊದಲನೇ ಸ್ಥಾನಕ್ಕೆ ಬಂದಿದೆ!

ಈ 'ಶ್ರೇಯಾಂಕ'ಗಳನ್ನು ಸಾಂಸ್ಕೃತಿಕ ನಡೆಗಳು, ಲೈಂಗಿಕ ಹಿಂಸಾಚಾರ, ಆರ್ಥಿಕ ಅವಕಾಶಗಳು ಮತ್ತು ಶಿಕ್ಷಣವನ್ನು ಪರಿಗಣಿಸಿ ನಿರ್ಧರಿಸಲಾಗುತ್ತದೆ. ಭಾರತ ಈ ನಾಲ್ಕರಲ್ಲೂ ಅತ್ಯಂತ ಕೆಟ್ಟ ಪ್ರದರ್ಶನ ನೀಡಿದೆ ಎನ್ನಲಾಗಿದೆ.

2011ರಿಂದೀಚೆಗೆ ಮಹಿಳೆಯರ ಮೇಲೆ ಹಿಂಸಾಚಾರದಲ್ಲಿ 83% ಹೆಚ್ಚಳವಾಗಿದೆಯಂತೆ.

ಸಹಜವಾಗಿ ಭಾರತದ ರಾಷ್ಟ್ರೀಯ ಮಹಿಳಾ ಆಯೋಗ ಈ ವರದಿಯನ್ನು ನಿರಾಕರಿಸಿದೆ. ಅದರ ಸಲಹೆಗಾರರು ಭಾರತದ ಪರಿಸ್ಥಿತಿ ಇಷ್ಟೊಂದು ಆಘಾತಕಾರಿಯಾಗಿದೆ ಎಂಬುದು ನಿಜವಿರಲಿಕ್ಕಿಲ್ಲ ಎಂದಿದ್ದಾರೆ. ಮಹಿಳೆಯರ ಮೇಲೆ ಹಿಂಸಾಚಾರ ನಡೆಯುತ್ತಿದೆ ಎಂದು ಒಪ್ಪಿಕೊಳ್ಳುತ್ತಲೇ, ಆದರೆ ಅದು ಸಿರಿಯಾ, ಅಪಘಾನಿಸ್ತಾನಕ್ಕಿಂತಲೂ ಕೆಟ್ಟದಾಗಿದೆ ಎಂದರೆ ನಂಬಲು ಸಾಧ್ಯವಿಲ್ಲವಂತೆ.. ನಿಜ, ನಾವು ಪಿತೃಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ನರಳುತ್ತಿದ್ದೇವೆ, 2010ರ ನಿರ್ಭಯ ಘಟನೆಯ ನಂತರ ಈ ಹಿಂಸಾಚಾರ ಕಡಿಮೆಯಾಗಬೇಕಿತ್ತು, ಆದರೆ ಹಾಗಾಗಿಲ್ಲ, ಹಿಂಸಾಚಾರಗಳು ಹೆಚ್ಚಿವೆ, ಅವುಗಳ ವೀಡಿಯೋಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕುತ್ತಿದ್ದಾರೆ ಕೂಡ ಎಂದೂ ಅವರು ಒಪ್ಪಿಕೊಂಡಿದ್ದಾರೆ.

ಕೌಟುಂಬಿಕ ಹಿಂಸಾಚಾರದ ವಿಷಯದಲ್ಲಿ ಗಂಡ ಮತ್ತು ಆತನ ಸಂಬಂಧಿಕರಿಗೆ ಶಿಕ್ಷೆ ವಿಧಿಸುವ ಸೆಕ್ಷನ್ 498ಎಯನ್ನು ಕೋರ್ಟ್ ತೀರ್ಪಿನ ಮೂಲಕ ದುರ್ಬಲಗೊಳಿಸಲಾಗಿದೆ. ಆಳುವ ಪಕ್ಷದ ಮುಖಂಡರ ಪಿತೃಪ್ರಧಾನ ಹಿಂದುತ್ವ ಮನೋಭಾವ ಪ್ರತಿದಿನ ಪ್ರಕಟವಾಗುತ್ತಿರುವಾಗ ಇದರಲ್ಲಿ ಆಶ್ಚರ್ಯವೇನಿಲ್ಲ.

ಆದಿವಾಸಿಗಳಿಗೆ ಕೈಕೊಟ್ಟು ಕಾರ್ಪೊರೇಟ್‌ಗಳ 'ವಿಕಾಸ'

ಪುಟ 9 ರಿಂದ

ಮಾರಣಾಂತಿಕ ಏಟು ಕೊಟ್ಟಿದೆ.

* ಕೇಂದ್ರದಲ್ಲಿ ರೈತರ ದೇಶವ್ಯಾಪಿ ಪ್ರತಿರೋಧದಿಂದಾಗಿ ಭೂಸ್ವಾಧೀನ ಕಾಯ್ದೆಯನು ಕಾರ್ಪೊರೇಟ್–ಪರವಾಗಿ ದುರ್ಬಲ ಗೊಳಿಸಲಾಗದ್ದರಿಂದ, ಅದನ್ನು ತನ್ನ ರಾಜ್ಯಸರಕಾರಗಳ ಮೂಲಕ ಮಾಡುತ್ತಿದೆ. ಉದಾ: ಝಾರ್ಖಂಡ್ ಬಿಜೆಪಿ ಸರಕಾರ ಬುಡಕಟ್ಟು ಭೂಮಿಯನ್ನು ಕಾರ್ಪೊರೇಟ್‌ಗಳಿಗೆ ಕೊಡದಂತೆ ಇದ್ದ ರಕ್ಷಣಾತ್ಮಕ ಅಂಶಗಳನ್ನೆಲ್ಲ ತೆಗೆಯುವ ತಿದ್ದುಪಡಿಗಳನ್ನು ಸಂತಾಲ್ ಪರಗಣ ಗೇಣಿ ಕಾಯ್ದೆ ಮತ್ತು ಛೋಟಾನಾಗ್ಪುರ ಗೇಣಿ ಕಯ್ದೆಗೆ ತಂದಿದೆ.
* ಇನ್ನು ಹಲವು ಸಣ್ಣ, ಆದರೆ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ. ಇವೆಲ್ಲ ಆದಿವಾಸಿ ಜನಗಳ ವಿರೋಧಿಯಾದ ಕಾರ್ಪೊರೇಟ್ ಪರವಾದ ಬದಲಾವಣೆಗಳು ಎಂದು ಬೇರೆ ಹೇಳಬೇಕಾಗಿಲ್ಲ.
* ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ನ್ಯಾಶನಲ್ ಗ್ರೀನ್ ಟ್ರಿಬ್ಯುನಲ್–ಎನ್‌ಜಿಟಿ)ಯನ್ನು ಕೇವಲ ಒಂದು ಆಡಳಿತ ಸಂಸ್ಥೆಯ ಮಟ್ಟಕ್ಕೆ ಇಳಿಸುವ ಪ್ರಯತ್ನ ಮಾಡಲಾಗುತ್ತಿದೆ.

ಬುಡಕಟ್ಟು ಉಪಯೋಜನೆಗಳಿಗೆ ಭಾರೀ ಕಡಿತ

ಮೇಲೆ ಹೇಳಿದಂತೆ ಬಜೆಟಿನಲ್ಲಿ ಯೋಜನಾ ಮತ್ತು ಯೋಜನೇತರ ಖರ್ಚುಗಳು ಎಂಬ ಭಿನ್ನತೆಯನ್ನು ತೆಗೆದು ಹಾಕಿದ ಮೇಲೆ, ಇದನ್ನೇ ಬಳಸಿಕೊಂಡು ಬುಡಕಟ್ಟು ಉಪಯೋಜನೆ ಎಂಬ ಪರಿಕಲ್ಪನೆಯನ್ನು ಮೂಲೆಗುಂಪು ಮಾಡಿದೆ. ಇದರ ಪ್ರಕಾರ ಬಜೆಟಿನಲ್ಲಿ ಕಡ್ಡಾಯವಾಗಿ ಬುಡಕಟ್ಟು ಜನಸಂಖ್ಯೆಯ ಅನುಪಾತದಲ್ಲಿ ಅಂದರೆ 8.6% ಈ ಬಾಬ್ತಿನಲ್ಲಿ ಕೊಡಲೇ ಬೇಕಾಗಿತ್ತು. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಈ ಬಾಬ್ತಿನಲ್ಲಿ ಖರ್ಚುಗಳಲ್ಲಿ ಭಾರೀ ಕಡಿತ ತಂದಿದೆ. ಈಗ ಕೇಂದ್ರೀಯ ಯೋಜನೆಗಳು (ಸಿಎಸ್) ಮತ್ತು ಕೇಂದ್ರ ಬೆಂಬಲಿತ ಯೋಜನೆಗಳಿ (ಸಿಎಸ್‌ಎಸ್)ಗೆಂದು ಹಣ ನೀಡಲಾಗುತ್ತಿದೆ. ಈ ಕೆಳಗಿನ ಅಂಕಿ–ಅಂಶಗಳನ್ನು ನೋಡಿ

ವರ್ಷ	ಸಿಎಸ್+ಸಿಎಸ್‌ಎಸ್ ಪ್ರಮಾಣ
2014–15	5.63%
2015–16	4.3%
2016–17	4.36%
2017–18	5.43%
2018–19	4.53%
5 ವರ್ಷಗಳ ಸರಾಸರಿ	6.77%

ಇದರ ಪ್ರಕಾರ ಸರಾಸರಿ 1.14 ಲಕ್ಷ ಕೋಟಿ ರೂ.ಗಳಷ್ಟು ಹಣವನ್ನು ಆದಿವಾಸಿ ಸಮುದಾಯಗಳಿಗೆ ವಂಚಿಸಲಾಗಿದೆ.

ಗಾಮೀಣ ಪ್ರದೇಶಗಳ 45% ಹಾಗೂ ನಗರಗಳಲ್ಲಿನ 24% ಆದಿವಾಸಿ ಜನಗಳು ಬಡತನ ರೇಖೆಯ ಕೆಳಗಿದ್ದಾರೆ. ಆಧ್ದರಿಂದ ಅವರಿಗೆ ಸರಕಾರದ ಹಣಕಾಸು ಬೆಂಬಲದ ಅಗತ್ಯ ಬಹಳವಾಗಿದೆ.


ಆದರೆ ಈ ಸರಕಾರ ಅವರಿಗೇ 1.14 ಲಕ್ಷ ಕೋಟಿ ರೂ.ಗಳನ್ನು ವಂಚಿಸಿದ್ದರೆ, ಕಾರ್ಪೊರೇಟ್‌ಗಳಿಗೆ 15ಲಕ್ಷ ಕೋಟಿ ರೂ.ಗಳಷ್ಟು ವಿನಾಯ್ತಿ. ➔

"ಓಪನ್ ಬುಕ್ ಎಕ್ಸಾಮ್" ಚರ್ಚೆ

ಮಕ್ಕಳು ಪಠ್ಯಪುಸ್ತಕ ನೋಡಿಯೇ ಪರೀಕ್ಷೆ ಬರೆಯುವ ವ್ಯವಸ್ಥೆಯನ್ನು ಜಾರಿಗೆ ತರುವ ಯೋಚನೆ ರೂಪಿಸಲಾಗುತ್ತಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎನ್.ಮಹೇಶ್ ಶಿಕ್ಷಕರಿಗೆ ಹೇಳಿದ್ದಾರೆ. ಚಾಮರಾಜನಗರದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಸದ್ಯದ ಪ್ರಾಥಮಿಕ ಶಿಕ್ಷಣದ ಪರೀಕ್ಷಾ ಪದ್ಧತಿ (ಕ್ಲೋಸ್ಡ್ ಬುಕ್ ಎಕ್ಸಾಮ್) ಅವೈಜ್ಞಾನಿಕವಾಗಿದೆ. ಹೀಗಾಗಿ ಮಕ್ಕಳು ನೇರವಾಗಿ ಪುಸ್ತಕ ತೆರೆದು ಪರೀಕ್ಷೆ ಬರೆಯುವ ಪದ್ಧತಿ (ಓಪನ್ ಬುಕ್ ಎಕ್ಸಾಮ್) ಜಾರಿಗೆ ತರಬೇಕಾಗಿದೆ ಎಂದರು.

ನನ್ನ ಹೊಸ ಯೋಜನೆಗಳಿಗೆ ಶಿಕ್ಷಕರು ಬದಲಾಗಬೇಕೇ ಹೊರತು ವಿದ್ಯಾರ್ಥಿಗಳಲ್ಲ. ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳೇ ಕೇಂದ್ರ ಬಿಂದು, ಆದರೆ ಇತ್ತೀಚಿನ ಬೆಳವಣಿಗೆಯಲ್ಲಿ ಶಿಕ್ಷಕರಿಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಹೀಗಾಗಿ ಈ ವ್ಯವಸ್ಥೆಯನ್ನು ಬದಲಾಯಿಸುತ್ತೇನೆ ಎಂದು ಭರವಸೆ ನೀಡಿದರು. ಪರೀಕ್ಷೆಯಲ್ಲಿ ಪುಸ್ತಕ ನೋಡದೆ ಬರೆದವರು ಬುದ್ಧಿವಂತರು, ಉಳಿದವರು ದಡ್ಡರು ಎನ್ನುವ ಧೋರಣೆ ಸರಿಯಲ್ಲ. ಈ ವಿಧಾನದಿಂದ ಮಕ್ಕಳಲ್ಲಿರುವ ಪರೀಕ್ಷಾ ಭಯ ದೂರವಾಗುವುದರ ಜೊತೆಗೆ ಸೃಜನಶೀಲತೆ ಹೆಚ್ಚಾಗುತ್ತದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಸಚಿವರ ಈ ಘೋಷಣೆ ರಾಜ್ಯದಾದ್ಯಂತ ಪತ್ರಿಕೆಗಳಲ್ಲಿ ಶಿಕ್ಷಣ ವಲಯದಲ್ಲಿ ಚರ್ಚೆ ಹುಟ್ಟು ಹಾಕಿದೆ. ಚರ್ಚೆ ಒಂದು ಕಡೆ ಸಚಿವರು ಸೂಚಿಸಿದ "ಓಪನ್ ಬುಕ್ ಎಕ್ಸಾಮ್"ನ ಸಾಧಕ-ಬಾಧಕಗಳು, ನಮ್ಮ ಶಿಕ್ಷಣ ಪದ್ಧತಿಯ ಇಂದಿನ ಸ್ಥಿತಿ ಮತ್ತು ಅದರಲ್ಲಿ ತರಬೇಕಾದ ಸುಧಾರಣೆಗಳ ಬಗ್ಗೆ ಗಂಭೀರ ಚರ್ಚೆಯನ್ನು ಹುಟ್ಟು ಹಾಕಿದೆ. ಇನ್ನೊಂದು ಕಡೆ "ಓಪನ್ ಬುಕ್ ಎಕ್ಸಾಮ್" ಪದ್ಧತಿಯ ಬಗ್ಗೆ ತಪ್ಪು ತಿಳುವಳಿಕೆಯಿಂದಲೋ ಅಥವಾ ಈ ಸಚಿವರನ್ನು ವೈಯಕ್ತಿಕವಾಗಿ, ಅವರ ಪಕ್ಷವನ್ನು ಮತ್ತು ಮೈತ್ರಿ ಸರಕಾರವನ್ನು ಗೇಲಿ ಮಾಡುವುದಕ್ಕೆ ಬಳಸಿಕೊಳ್ಳಲಾಗಿದೆ. ಇದರ ಅತ್ಯಂತ ಕೀಳು ಮಟ್ಟದ ಉದಾಹರಣೆ ಅಂದರೆ ಪರೀಕ್ಷೆಯಲ್ಲಿ ಎಷ್ಟು ಪುಸ್ತಕಗಳನ್ನು ತೆರೆಯಬಹುದು ಎಂಬುದು ಜಾತಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದು ಪ್ರಜಾವಾಣಿಯ ಅಂಕಣಕಾರನೊಬ್ಬ ಫೇಸ್ ಬುಕ್ ನಲ್ಲಿ ಗೇಲಿ ಮಾಡಿದ್ದು



ಇಂದು ನಮ್ಮ ಶಿಕ್ಷಣ ಮಾಹಿತಿಯನ್ನು ಮಕ್ಕಳ ತಲೆಗೆ ಹೇಗೋ ತುರುಕಿ, ಅವರು ಎಷ್ಟು ಮಾಹಿತಿಯನ್ನು ಮೂರು ಗಂಟೆಯ ಮಟ್ಟಿಗೆ ಇಟ್ಟುಕೊಳ್ಳಬಲ್ಲರು ಎಂದು ಪರೀಕ್ಷೆಯಲ್ಲಿ ನಿರ್ಧರಿಸುವುದಕ್ಕೆ ಸೀಮಿತವಾಗಿದೆ. ಅನೇಕ ಶಿಕ್ಷಕರು ಮಕ್ಕಳಿಗೆ ಕಂಠಪಾಟ ಮಾಡಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಇದರಿಂದ ಮಕ್ಕಳಿಗೆ ಅರಿತುಕೊಂಡು ವಿಶ್ಲೇಷಿಸುವ ಶಕ್ತಿ ಬೆಳೆಯುತ್ತಿಲ್ಲ. ಮುಕ್ತ ಪುಸ್ತಕ ಪರೀಕ್ಷೆ ತಂದರೆ ಮಕ್ಕಳಲ್ಲಿ ಓದಿ ಅರ್ಥ ಮಾಡಿಕೊಂಡು ವಿಶ್ಲೇಷಿಸುವ ಸಾಮರ್ಥ್ಯ ಬೆಳೆಯುತ್ತದೆ. ಆದರೆ ಅದಕ್ಕೆ ಸರಿಯಾಗಿ ಕಲಿಸುವ ಮತ್ತು ಪರೀಕ್ಷಾ ಪ್ರಶ್ನೆಗಳೂ ಬದಲಾಗಬೇಕು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ.

ಯಾವ ದೇಶದಲ್ಲಿಯೂ ಕೂಡ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಪುಸ್ತಕ ನೋಡಿಕೊಂಡು ಪರೀಕ್ಷೆ ಬರೆಯುತ್ತಿಲ್ಲ. ಕೆಲವು ದೇಶಗಳ ಉನ್ನತ ಶಿಕ್ಷಣದಲ್ಲಷ್ಟೇ ಈ ಪದ್ಧತಿ ಜಾರಿಯಲ್ಲಿದೆ. ಈ ವಿಧಾನ ವಿಶೇಷವಾಗಿ 1ರಿಂದ 5ನೇ ತರಗತಿಯ ಮಕ್ಕಳಿಗೆ ಸರಿಹೊಂದುವುದಿಲ್ಲ. ಆ ವಯಸ್ಸಿನಲ್ಲಿ ಮಕ್ಕಳಿಗೆ ವಿಶ್ಲೇಷಣೆ ನಡೆಸುವಂತಹ, ವ್ಯಾಖ್ಯಾನ ಮಾಡುವಂತಹ ಶಕ್ತಿ ಇರುವುದಿಲ್ಲ. ಇದರಿಂದ ಹೆಚ್ಚಿನ ಪ್ರಯೋಜನವೇನೂ ದೊರೆಯುವುದಿಲ್ಲ. ಈ ಪದ್ಧತಿಯನ್ನು ತರಾತುರಿಯಲ್ಲಿ ಜಾರಿಗೆ ತಂದರೆ ಮಕ್ಕಳ ಕಲಿಕೆಗೆ ಪೆಟ್ಟು ಬೀಳಬಹುದು ಎಂಬ ವಿರುದ್ಧವಾದ ಅಭಿಪ್ರಾಯಗಳೂ ವ್ಯಕ್ತವಾಗಿವೆ.

ನಮ್ಮ ಶಿಕ್ಷಣ ವ್ಯವಸ್ಥೆ ಹಲವು ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಶಿಕ್ಷಣ ದೊಡ್ಡ ಜನವಿಭಾಗಕ್ಕೆ ನಿಲುಕದೆ ಇರುವುದು, ಅತ್ಯಂತ ಅಸಮಾನ ವ್ಯವಸ್ಥೆ, ಮಾತೃಭಾಷೆಯಲ್ಲಿ ಸಮಾನ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಜಾರಿಯ ಬಗ್ಗೆ ತೀವ್ರ ರಾಜಕೀಯ ಬದ್ಧತೆಯ ಕೊರತೆ, ಅದರಿಂದಾಗಿ ಅದಕ್ಕೆ ಬೇಕಾದ ಎಲ್ಲಾ (ಮೂಲ ಸೌಕರ್ಯ, ತರಬೇತಿ ಪಡೆದ ಶಿಕ್ಷಕರು, ಶಿಕ್ಷಣ ಪರಿಕರಗಳು ಮುಂತಾದ) ಸಂಪನ್ಮೂಲಗಳ ಕೊರತೆ, ಕಲಿಕೆಯ ಪರಿಣಾಮಕಾರಿತನದ ಅತೃಪ್ತಿಕರ ಮಟ್ಟ –ಇವು ಕೆಲವು ಅಂತಹ ಸಮಸ್ಯೆಗಳು. ಇವನ್ನು ಪರಿಹರಿಸುವುದು, ಈ ಮತ್ತು ಯಾವುದೇ ಸರಕಾರದ ಆದ್ಯತೆ ಆಗಬೇಕು. ಈ ಹಿನ್ನೆಲೆಯಲ್ಲಿ ಪರೀಕ್ಷಾ ಪದ್ಧತಿಯ ಬದಲಾವಣೆ ಬಹುಶಃ ಆದ್ಯತೆಯದ್ದಲ್ಲ. ಅದನ್ನು ಮಾತ್ರ ಮಾಡುವುದರಿಂದ ಬಹುಶಃ ಹೆಚ್ಚಿನ ಪ್ರಯೋಜನವೂ ಆಗಲಿಕ್ಕಿಲ್ಲ.

ಶಿಕ್ಷಣ ವ್ಯವಸ್ಥೆಯ ಗುಣಮಟ್ಟದಲ್ಲಿ ಸುಧಾರಣೆಗಳೂ ಜತೆಜತೆಗೆ ಆಗಬೇಕು, ನಿಜ. ಮಾಹಿತಿ ಸುಲಭವಾಗಿ ಹಲವು ಆಕರಗಳಲ್ಲಿ ಸಿಗುವ ಇಂದಿನ ಸಂದರ್ಭಧಲ್ಲಿ,



ವಸಂತರಾಜ ಎನ್.ಕೆ.

ಶಿಕ್ಷಣವು ವಿದ್ಯಾರ್ಥಿಯ ಮಾಹಿತಿ ಕಲೆಹಾಕುವ ಶಕ್ತಿಯನ್ನು ಅಭಿವೃದ್ಧಿಪಡಿಸಬೇಕು, ವಿದ್ಯಾರ್ಥಿಗಳು ಹೊಸ ಅನ್ವೇಷಣೆಗಳಿಗೆ ಮುಂದಾಗುವಂತೆ ಪ್ರೇರೇಪಿಸಬೇಕು, ವಿದ್ಯಾರ್ಥಿಯು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹೊಸ ದಾರಿಗಳನ್ನು ತಾನೇ ಅನ್ವೇಷಿಸಿಕೊಳ್ಳುವಂತೆ ಮಾಡಬೇಕು. ಇವೆಲ್ಲದರ ಆಧಾರದ ಮೇಲೆ ಆಲೋಚನಾ ಶಕ್ತಿಯನ್ನು ಬೆಳೆಸಬೇಕು. ಇಂತಹ ಸಮಗ್ರ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಮತ್ತು ಮಕ್ಕಳ ಕಲಿಕೆಯ ಪರಿಣಾಮಕಾರಿತನವನ್ನು ಅಳೆಯುವ ಭಾಗವಾಗಿಯಷ್ಟೇ ಪರೀಕ್ಷಾ ಪದ್ಧತಿಯ ಬದಲಾವಣೆ/ಸುಧಾರಣೆಗೆ ಅರ್ಥ ಇರುತ್ತದೆ.

ಕಗ್ಗಂಟಾದ ಕಾವೇರಿ ಪ್ರಾಧಿಕಾರ

ಕಾವೇರಿ ಪ್ರಾಧಿಕಾರದ ರಚನೆಯ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಭಿನ್ನಾಭಿಪ್ರಾಯದ ಸಮಸ್ಯೆ ಇನ್ನಷ್ಟು ಕಗ್ಗಂಟಾಗುವ ಹಾಗೆ ಕಾಣುತ್ತಿದೆ. ರಾಜ್ಯದ ವಿರೋಧದ ನಡುವೆಯೂ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನೀರು ನಿಯಂತ್ರಣ ಸಮಿತಿ ರಚಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಸರ್ಕಾರ ಮುಂದೇನು ಮಾಡಬೇಕು ಎಂಬ ಬಗ್ಗೆ ತೀರ್ಮಾನಿಸಲು ಸರ್ವಪಕ್ಷ ಸಭೆ ಮತ್ತು ರಾಜ್ಯದ ಸಂಸದರ ಸಭೆ ಕರೆಯಲು ತೀರ್ಮಾನಿಸಲಾಗಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸುವ ಕುರಿತು ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯಲ್ಲಿ ಗೊಂದಲ ಮತ್ತು ರಾಜ್ಯಕ್ಕೆ ಅನ್ಯಾಯವಾಗುವ ಹಲವು ವಿಚಾರಗಳ ಬಗ್ಗೆ ಜೂನ್ 18ರಂದು ಮುಖ್ಯಮಂತ್ರಿ ಅವರು ಪ್ರಧಾನಿ ಮತ್ತು ಕೇಂದ್ರ ಜಲ ಸಂಪನ್ಮೂಲ ಸಚಿವರನ್ನು ಭೇಟಿಯಾಗಿ ವಿವರಿಸಿದ್ದರೂ ರಾಜ್ಯದ ಅಭಿಪ್ರಾಯ ಲೆಕ್ಕಿಸದೆ ಪ್ರಾಧಿಕಾರ ಮತ್ತು ಸಮಿತಿ ರಚಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಈಗಾಗಲೇ ರಾಜ್ಯ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದು, ಮುಂದೇನು ಮಾಡಬಹುದು ಎಂಬ ಬಗ್ಗೆ ಕಾನೂನು ತಜ್ಞರು, ಅಡ್ವೋಕೇಟ್ ಜನರಲ್ ಮತ್ತು ತಾಂತ್ರಿಕ ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಅವರು ಹಲವು ಸಲಹೆಗಳನ್ನು ಕೊಟ್ಟಿದ್ದು, ಈ ಎಲ್ಲಾ ವಿಚಾರಗಳ ಕುರಿತು ಚರ್ಚಿಸಲು ಸರ್ವಪಕ್ಷ ಸಭೆ ಮತ್ತು ಸಂಸದರ ಸಭೆ ಕರೆಯಲಾಗಿದೆ.

ಅಂತರ್‌ರಾಜ್ಯ ನದಿ ವಿವಾದಗಳಿಗೆ ಸಂಬಂಧಿಸಿದಂತೆ ಅಂತರರಾಜ್ಯ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರ ಕೈಗೊಳ್ಳುವುದಿದ್ದರೂ ಅದು ಸಂಸತ್ತಿನಲ್ಲಿ ಚರ್ಚೆಯಾಗಿ ತೀರ್ಮಾನವಾಗಬೇಕು. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಅದರಂತೆ ಪ್ರಾಧಿಕಾರ ಮತ್ತು ಸಮಿತಿಗಳನ್ನು ಕೇಂದ್ರ ಸರ್ಕಾರ ರಚಿಸಿದೆ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗಿದ್ದು, ಪ್ರತಿಭಟನೆ ಅನಿವಾರ್ಯ. ಇದು ಹೇಗಿರಬೇಕು ಎಂಬ ಬಗ್ಗೆ ಸರ್ವಪಕ್ಷ ಸಭೆಯಲ್ಲಿ ತೀರ್ಮಾನಿಸಲಾಗುವುದು. ಜತೆಗೆ ಸಂಸತ್ತಿನಲ್ಲಿ ಈ ವಿಚಾರವನ್ನು ಹೇಗೆ ಕೈಗೆತ್ತಿಕೊಳ್ಳಬೇಕು ಎಂಬ ಬಗ್ಗೆ ಸಂಸದರ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ವರದಿಯಾಗಿದೆ.

ಕೇಂದ್ರ ಸರ್ಕಾರ ರಚಿಸಿರುವ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯವನ್ನು ಪ್ರತಿನಿಧಿಸುವ ಸದಸ್ಯರಾಗಿ ಜಲ ಸಂಪನ್ಮೂಲ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರ ಹೆಸರನ್ನು ಸರ್ಕಾರ ಶಿಫಾರಸು ಮಾಡಿದೆ. ಅದೇ ರೀತಿ ಕಾವೇರಿ ನೀರು ನಿಯಂತ್ರಣ ಸಮಿತಿಗೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಎಲ್.ಪ್ರಸನ್ನ ಅವರ ಹೆಸರು ಶಿಫಾರಸು ಮಾಡಲಾಗಿದೆ.

ರಾಜ್ಯ ತನ್ನ ಪ್ರತಿನಿಧಿಗಳ ಹೆಸರು ಸೂಚಿಸದೇ ಇದ್ದರೂ ಜೂ. 22ರಂದು ಕೇಂದ್ರ ಸರ್ಕಾರ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನೀರು ನಿಯಂತ್ರಣ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಿದ ಮಾರನೇ ದಿನವೇ ಅಂದರೆ ಜೂ. 23ರಂದು ರಾಜ್ಯ ಸರ್ಕಾರ ಈ ಇಬ್ಬರ ಹೆಸರುಗಳನ್ನು ಶಿಫಾರಸು ಮಾಡಿ ಕೇಂದ್ರಕ್ಕೆ ಪತ್ರ ಬರೆದಿದೆ.

ಕೇಂದ್ರ ಸರ್ಕಾರ ರಾಜ್ಯದ ವಿರೋಧದ ನಡುವೆಯೂ ಪ್ರಾಧಿಕಾರ ಮತ್ತು ಸಮಿತಿಗಳನ್ನು ರಚಿಸಿದೆ. ಆದರೆ, ರಾಜ್ಯದ ಹಿತಕ್ಕೆ ಧಕ್ಕೆಯಾಗಬಾರದು ಎಂಬ ಕಾರಣಕ್ಕೆ ಸರ್ಕಾರ ಹೆಸರುಗಳನ್ನು ಶಿಫಾರಸು ಮಾಡಿದೆ. ಇದರೊಂದಿಗೆ ಪ್ರಾಧಿಕಾರ ಮತ್ತು ಸಮಿತಿಗಳ ಬಗ್ಗೆ ರಾಜ್ಯದ ಪ್ರತಿಭಟನೆಯನ್ನೂ ಮುಖ್ಯಮಂತ್ರಿಗಳು ಪತ್ರದ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ ಎಂದೂ ವರದಿಯಾಗಿದೆ.

ಜುಲೈ 2ರಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಯಲಿದೆ ಎಂಬ ಸೂಚನೆ ಸಿಕ್ಕಿತ್ತು. ಸಭೆಗೆ ಒಟ್ಟು 9 ಸದಸ್ಯರ ಪೈಕಿ 6 ಸದಸ್ಯರು ಹಾಜರಾಗಿದ್ದರೆ ತೀರ್ಮಾನ ಕೈಗೊಳ್ಳಲು ಅವಕಾಶವಿದೆ. ಹೀಗಾಗಿ ಜು. 2ರಂದು ಸಭೆ ಕರೆದಾಗ ರಾಜ್ಯದ ಪ್ರತಿನಿಧಿಗಳಿಲ್ಲದೆ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇತ್ತು. ಹೀಗಾಗಿ ಜೂ. 23ರಂದೇ ಹೆಸರುಗಳನ್ನು ಶಿಫಾರಸು ಮಾಡಲಾಯಿತು ಎಂದು ತಿಳಿದು ಬಂದಿದೆ.

ಇದಕ್ಕಿಂತ ಮೊದಲು ಜೂ. 22ರಂದು ಕೇಂದ್ರ ಸರ್ಕಾರ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನೀರು ನಿಯಂತ್ರಣ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಿದ ಬಗ್ಗೆ ಜೂ. 23ರಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದ ಮುಖ್ಯಮಂತ್ರಿ ಕಾನೂನು ಹೋರಾಟ ನಡೆಸುವುದುದಾಗಿ ಹೇಳಿದ್ದರು. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು, ಕೇಂದ್ರದ ಜತೆ ಸಂಘರ್ಷಕ್ಕಿಳಿಯದಂತೆ ಹಾಗೂ ಕೂಡಲೇ ಹೆಸರು ಶಿಫಾರಸು ಮಾಡುವಂತೆ ಸಲಹೆ ಮಾಡಿದ್ದರು. ಅದರಂತೆ ಅಂದು ರಾತ್ರಿಯೇ ಇಬ್ಬರ ಹೆಸರುಗಳನ್ನು ಶಿಫಾರಸು ಮಾಡಿ ಪತ್ರ ಕಳುಹಿಸಲಾಗಿತ್ತು, ಎಂದು ತಿಳಿದು ಬಂದಿದೆ. ಅವರ ಸಲಹೆಯಂತೆ ಕಾವೇರಿ ಕಣಿವೆಯಲ್ಲಿನ ನೈಜ ಸ್ಥಿತಿ, ನಿರಂತರವಾಗಿ ಆಗುತ್ತಿರುವ ಅನ್ಯಾಯದ ಬಗ್ಗೆ 100 ವರ್ಷಗಳ ಅಂಕಿ ಅಂಶಗಳನ್ನು ಒಳಗೊಂಡ ಪುಸ್ತಕವನ್ನು ಸಿದ್ಧಪಡಿಸಲೂ ಸರಕಾರ ಕ್ರಮಕೈಗೊಂಡಿದೆ. ಇದನ್ನು ಕೇಂದ್ರ ಮಂತ್ರಿಗಳಿಗೂ, ತಮಿಳುನಾಡು (ಮತ್ತು ರಾಜ್ಯದ) ಸಂಸದರಿಗೂ ಮಂತ್ರಿಗಳಿಗೂ ಹಂಚಲು ಮುಂದಾಗಿದ್ದು ಸರಕಾರ ಸಂಘರ್ಷವಿಲ್ಲದೆ ಈ ಸಮಸ್ಯೆ ಪರಿಹರಿಸಲು ಪ್ರಯತಿಸುತ್ತಿದೆ ಎಂದು ಹೇಳಲಾಗಿದೆ. ಕೇಂದ್ರ ಸರಕಾರ ಮತ್ತು ಬಿಜೆಪಿ ಅದಕ್ಕೆ ಹೇಗೆ ಪ್ರತಿಕ್ರಿಯಿಸುವುದು ಎಂದು ಕಾದು ನೋಡಬೇಕಾಗಿದೆ. ●

↘ ....ಆದಿವಾಸಿಗಳಿಗೆ ಕೈಕೊಟ್ಟು ಕಾರ್ಪೋರೇಟ್‌ಗಳ 'ವಿಕಾಸ'

ರಿಯಾಯ್ತಿಗಳನ್ನು ಕೊಡಮಾಡಿದೆ.

ವೃತ್ತಿ ತರಬೇತಿ-ಕೌಶಲ ಅಭಿವೃದ್ಧಿಯಲ್ಲೂ ಕಡಿತ

ಬುಡಕಟ್ಟು ಜನಗಳ ಜೀವನಾಧಾರಗಳನ್ನು 'ಅಭಿವೃದ್ಧಿ'ಯ ಹೆಸರಲ್ಲಿ ಮೊಟಕು ಮಾಡಿರುವಾಗ ಅವರಿಗೆ ಪರ್ಯಾಯ ಜೀವನಾಧಾರಗಳನ್ನು ಕಲ್ಪಿಸಿ ಕೊಡಬೇಕಾದ್ದು ಸರಕಾರದ ಕರ್ತವ್ಯ. ಅದಕ್ಕಾಗಿಯೇ ಅವರ ಕೌಶಲ ಅಭಿವೃದ್ಧಿಗೆ ಮತ್ತು ವೃತ್ತಿ ತರಬೇತಿಗೆ ವ್ಯವಸ್ಥೆ ಮಾಡುವ ಅಗತ್ಯ. ಮೋದಿ ಸರಕಾರ ಈಗಾಗಲೇ ಕಲ್ಪಿಸಿರುವ ಈ ವ್ಯವಸ್ಥೆಗಳಲ್ಲಿಯೂ ಕಡಿತ ತಂದಿದೆ. ಈ ಬಾಬ್ತು ಅದು ಕಳೆದ ನಾಲ್ಕು ವರ್ಷಗಳಲ್ಲಿ ನೀಡಿರುವ ಹಣದಲ್ಲಿ ಸತತ ಇಳಿಕೆ ಕಂಡು ಬಂದಿದೆ, ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಈ ಅಂಕಿ-ಅಂಶಗಳನ್ನು ನೋಡಿ:

ವರ್ಷ	ಹಣ ನೀಡಿಕೆ-ಲಕ್ಷ ರೂ.ಗಳಲ್ಲಿ
2014–15	37,296
2015–16	27,946
2016–17	20,229
2017–18	16,458

ಹಿಂದುತ್ವದ ಹೆಸರಲ್ಲಿ ಆದಿವಾಸಿ ಐಕ್ಯತೆಗೆ ಭಂಗ


'ಹಿಂದು ಒಂದು' ಹೆಸರಿನಲ್ಲಿ ಆದಿವಾಸಿಗಳನ್ನೂ ತಮ್ಮ ಹಿಂದುತ್ವದ ಸುಳಿಗೆ ಸೆಳೆಯುವ ಪ್ರಯತ್ನಗಳನ್ನು ಸಂಘ ಪರಿವಾರ ಮಾಡುತ್ತಲೇ ಬಂದಿದೆ. ಈ ಸಮುದಾಯಗಳ ನಡುವೆ, ಮುಖ್ಯವಾಗಿ ಹಿಂದು ಮತ್ತು ಕ್ರೈಸ್ತ ಆದಿವಾಸಿಗಳ ನಡುವೆ ಘರ್ ವಾಪಸಿ, ಗೋರಕ್ಷಣೆ, ಗೋಮಾಂಸ-ವಿರೋಧ ಮುಂತಾದವುಗಳ ಮೂಲಕ ಒಡಕು-ದ್ವೇಷ ತರುವ ಪ್ರಯತ್ನ ಭರದಿಂದ ಸಾಗಿದೆ. ಆದಿವಾಸಿಗಳಲ್ಲಿ ಗೋಮಾಂಸ ಭಕ್ಷಣೆ ಸಾಮಾನ್ಯ ಸಂಗತಿಯಾಗಿದ್ದು, ಅದರ ವಿರುದ್ಧ ಪ್ರಚಾರ, ಈ ಜನವಿಭಾಗದ ಆಹಾರ ಪದ್ಧತಿಯ ಮೇಲೆ ಮತ್ತು ಒಂದು ಮುಖ್ಯ ಪೋಷಣಾಂಶದ ಮೇಲಿನ ದಾಳಿಯೂ ಆಗಿದೆ.

ಮಾವೋವಾದಿ-ವಿರೋಧಿ ಕಾಯಾಚರಣೆಗಳ ಹೆಸರಲ್ಲಿ ದಮನ

ಆದಿವಾಸಿಗಳು, ವಿಶೇಷವಾಗಿ ಛತ್ತೀಸ್‌ಗಡ, ಮಹಾರಾಷ್ಟ್ರ, ಝಾರ್ಖಂಡ್‌ನಲ್ಲಿ ಎದುರಿಸುತ್ತಿರುವ ಒಂದು ವಿಶಿಷ್ಟ ಸಮಸ್ಯೆಯೆಂದರೆ ಮಾವೋವಾದಿ-ವಿರೋಧಿ ಕಾರ್ಯಾಚರಣೆಯ ಹೆಸರಲ್ಲಿ ಪೋಲೀಸ್ ಮತ್ತು ಭದ್ರತಾ ಪಡೆಗಳ ಅತ್ಯಾಚಾರಗಳು. ಮಾವೋವಾದಿಗಳಿಂದ ಪೀಡಿತ ಪ್ರದೇಶಗಳು ಎಂದು ಗುರುತಿಸಿರುವ ಹಳ್ಳಿಗಳಲ್ಲಿ ವಾಸವಾಗಿರುವ ಆದಿವಾಸಿಗಳು ಭದ್ರತಾ ಪಡೆಗಳ ಕಾರ್ಯಾಚರಣೆಗಳ ಭಾಗವಾಗಿ ಸತತವಾಗಿ ಈ ದಮನ ಎದುರಿಸಬೇಕಾಗಿದೆ. ಮಾವೋವಾದಿಗಳ ಬೇಟೆಯ ಹೆಸರಲ್ಲಿ ಆದಿವಾಸಿಗಳ ಕೊಲೆ, ಅವರ ಮಹಿಳೆಯರ ಮೇಲಿನ ಅತ್ಯಾಚಾರಗಳು ಸಾಮಾನ್ಯ ಸಂಗತಿಗಳಾಗಿ ಬಿಟ್ಟಿವೆ.

ಒಟ್ಟಿನಲ್ಲಿ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಮೋದಿ ಸರಕಾರದ ಘೋಷಣೆ, ದೇಶದ ಆದಿವಾಸಿಗಳ ಪಾಲಿಗೆ ಈ ನಾಲ್ಕು ವರ್ಷಗಳಲ್ಲಿ 'ಆದಿವಾಸಿಗಳಿಗೆ ಕೈಕೊಟ್ಟು ಕಾರ್ಪೋರೇಟ್‌ಗಳ ವಿಕಾಸ' ಎಂದಾಗಿದೆ. ●

10 ಲಕ್ಷ ಕೋಟಿ ರೂ.ದಾಟಿರುವ ಬ್ಯಾಂಕ್ ಸುಸ್ತಿ ಸಾಲಗಳ ಪ್ರಶ್ನೆ ಮತ್ತು ಸಮಸ್ಯೆ ಪರಿಹಾರದತ್ತ ಎಲ್‌ಐಸಿ ಪಾಲಿಸಿದಾರರ ಉಳಿತಾಯಗಳಿಗೆ ಕೈಹಾಕುವ ಹುನ್ನಾರ?



ಬ್ಯಾಂಕುಗಳ ಸುಸ್ತಿ ಸಾಲಗಳ ಬಗ್ಗೆ ರಿಝರ್ವ್ ಬ್ಯಾಂಕಿ(ಆರ್‌ಬಿಐ) ಗೂ ಆತಂಕ ಉಂಟಾಗಿದೆ. ಜೂನ್ 26ರಂದು ಅದು ಪ್ರಕಟಿಸಿರುವ **ಹಣಕಾಸು ಸ್ಥಿರೀಕರಣ ವರದಿ** ಒಂದು ಆತಂಕಕಾರಿ ಚಿತ್ರವನ್ನು ಕೊಡುತ್ತಿದೆ ಎಂದು ಆರ್ಥಿಕ ವಿಶ್ಲೇಷಕರು ಹೇಳುತ್ತಿದ್ದಾರೆ. ಮಾರ್ಚ್ 2018ರ ಅಂತ್ಯದ ವೇಳೆಗೆ ಒಟ್ಟು ಸುಸ್ತಿ ಸಾಲಗಳ ಮೊತ್ತ 10 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಅದು ಈಗ ಬ್ಯಾಂಕ್‌ಗಳು ನೀಡಿರುವ ಸಾಲಗಳಲ್ಲಿ 11.6% ಆಗುತ್ತದೆಯಂತೆ. ಅಂದರೆ ಬ್ಯಾಣಕ್‌ಗಳು ನೀಡಿರುವ ಪ್ರತಿ 100ರೂ. ಸಾಲದಲ್ಲಿ 11.60 ರೂ. ಹಿಂದಕ್ಕೆ ಬರುವ ನಿರೀಕ್ಷೆ ಉಳಿದಿಲ್ಲ.

ಆರ್‌ಬಿಐ ವರದಿಯ ಪ್ರಕಾರ ಸುಸ್ತಿ ಸಾಲಗಳಲ್ಲಿ 85.6% ದೊಡ್ಡ ಸಾಲಗಾರರದ್ದು ,ಅಂದರೆ ಕಾರ್ಪೊರೇಟ್ ಸಾಲಗಾರರದ್ದು. ಈ ಕಾರ್ಪೊರೇಟ್ ಸಾಲಗಾರರರಿಗೆ ಕೊಟ್ಟಿರುವ ಬ್ಯಾಂಕ್ ಸಾಲಗಳು ಒಟ್ಟು ಸಾಲಗಳ 54.8% ಎಂಬುದರೊಂದಿಗೆ ಇದನ್ನು ಹೋಲಿಸಿ ನೋಡಬೇಕಾಗಿದೆ.

ವಲಯವಾರು ನೋಡಿದರೆ ಉದ್ದಿಮೆಗಳ ವಲಯದಲ್ಲಿ ಸುಸ್ತಿ ಸಾಲಗಳ ಪ್ರಮಾಣ ಅತಿ ಹೆಚ್ಚು, ಅಂದರೆ 22.8%. ಕೃಷಿ ವಲಯದಲ್ಲಿ 7%, ಸೇವಾ ವಲಯದಲ್ಲಿ 6% ಮತ್ತು ಚಿಲ್ಲರೆ ವ್ಯಾಪಾರ ವಲಯದವರು ಪಡೆದ ಸಾಲಗಳಲ್ಲಿ ವಾಪಾಸು ಬರದ್ದು 2% .

ಇಷ್ಟೇ ಅಲ್ಲ. ಆರ್‌ಬಿಐ ಮಾಡಿರುವ ವಿಶ್ಲೇಷಣೆಯ ಪ್ರಕಾರ ಮಾರ್ಚ್ 2019ರ ವೇಳೆಗೆ ಇದು 12.25ಕ್ಕೇ ಏರಲಿದೆ. 2015ರಲ್ಲಿ ಅದು 4.6% ಇತ್ತು.2016ರಲ್ಲಿ 7.6ಲಕ್ಷ ಕೋಟಿಗೆ ಮತ್ತು 2017ರಲ್ಲಿ 9.6ಲಕ್ಷ ಕೊಟಿಗೇರಿತು.

ಇದು ಮೋದಿಯವರ 'ಕನಿಷ್ಟ ಸರಕಾರ'ದ ಫಲ ಎನ್ನುತ್ತಾರೆ ಆರ್ಥಿಕ ತಜ್ಞರು. ವಾಸ್ತವವಾಗಿ ಈ ಕನಿಷ್ಟ ಸರಕಾರದ ಪರಿಕಲ್ಪನೆ ಅದು ಪಾಶ್ಚಿಮಾತ್ಯ ಬಂಡವಾಳಶಾಹಿ ಸಂಸ್ಥೆಗಳಿಂದ ಎರವಲು ತಂದ ಒಂದು ಮೂಢನಂಬಿಕೆ ಎನ್ನುತ್ತಾರೆ ಈ ಆರ್ಥಿಕ ತಜ್ಞರು. ಆದರೆ ಇದು ನಮ್ಮ ಈಗಿನ ಪ್ರಧಾನ ಮಂತ್ರಿಗಳಿಗೇ ಮೀಸಲಾದ ಮೂಢನಂಬಿಕೆಯಲ್ಲ. ಅಂದರೆ ಶುದ್ಧ ದೇಶೀ'ಯೇನಲ್ಲ.

ಸರಕಾರ ಶ್ರೀಮಂತರು, ಕಾರ್ಪೊರೇಟ್‌ಗಳ ಮೇಲೆ ತೆರಿಗೆ ವಿಧಿಸಿ ಸಂಪನ್ಮೂಲ ಎತ್ತಿ ಮೂಲರಚನೆಗಳು, ನೀರಾವರಿ ಇತ್ಯಾದಿಗಳಲ್ಲಿ ಹೂಡಬಹುದಾಗಿತ್ತು. ಆದರೆ ಬಂಡವಾಳಶಾಹಿ–ನವ ಉದಾರವಾದಿ ಮೂಢನಂಬಿಕೆಯಿಂದಾಗಿ ಅದಕ್ಕೆ ಅವಕಾಶವಿಲ್ಲ. ಆದ್ದರಿಂದ ಸರಕಾರ ಬ್ಯಾಂಕುಗಳ ಮೇಲೆ, ಮುಖ್ಯವಾಗಿ ಸರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ಕಾರ್ಪೊರೇಟ್‌ಗಳಿಗೆ ಸಾಲ ನೀಡುವಂತೆ ಒತ್ತಡ ಹಾಕಿದ್ದರ ದುಷ್ಫಲಗಳೇ ಈಗ ದಿನೇ–ದಿನೇ ಬೆಳೆಯುತ್ತಿರುವ ಈ ಸುಸ್ತಿ ಸಾಲಗಳು ಎಂಬುದು ತಜ್ಞರ ವಿಶ್ಲೇಷಣೆ.

ಇದಕ್ಕೆ ಮೊದಲು ಆರ್‌ಬಿಐ ಗವರ್ನರ್ ಸಂಸದೀಯ ಹಣಕಾಸು ಸ್ಥಾಯೀ ಸಮಿತಿಯ ಎದುರು ಸಲ್ಲಿಸಿದ ಅಂಕಿ–ಅಂಶಗಳ ಪ್ರಕಾರ ಎಪ್ರಿಲ್ 2017 ರಿಂದ ಡಿಸೆಂಬರ್ ಅಂತ್ಯದ ವರೆಗೆ ಬ್ಯಾಂಕುಗಳ ಸುಸ್ತಿ ಸಾಲಗಳಲ್ಲಿ 1.51 ಲಕ್ಷ ಕೋಟಿ ರೂ.ಗಳಷ್ಟು ಇಳಿಕೆಯಾಗಿದೆ ಎಂದಿದ್ದರು. **ಆದರೆ ಈ ಇಳಿಕೆ ಸುಸ್ತಿಸಾಲಗಳಲ್ಲಿ ಅಷ್ಟು ಮೊತ್ತ ವಸೂಲಾದ್ದರಿಂದ ಅಲ್ಲ, ಮುಖ್ಯವಾಗಿ ಕೆಲವು ಪಾರ್ಪೊರೇಟ್‌ಗಳ ಸಾಲಗಳನ್ನು ರೈಟ್ ಆಫ್ ಅಂದರೆ ಬ್ಯಾಂಕಿನ ಲೆಕ್ಕಪತ್ರದಿಂದಲೇ ವಜಾಮಾಡಿದ್ದರಿಂದಾಗಿ.** ಹೀಗೆ ಈ ಅವಧಿಯಲ್ಲಿ ರೈಟ್ ಆಫ್ ಆದ ಮೊತ್ತ 84, 272 ಕೋಟಿ ರೂ. ಅಂದರೆ ಸುಸ್ತಿಸಾಲಗಳ 55% ದಷ್ಟು. ನಿಜವಾಗಿ ವಸೂಲಾದ ಮೊತ್ತ ಕೇವಲ 41,391 ಕೋಟಿ ರೂ. ಅಂದರೆ 27% ಮಾತ್ರ.

ಇದೇ ಅವಧಿಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಇನ್ನೂ 2.37 ಲಕ್ಷ ಕೋಟಿ ರೂ.ಗಳು ಹೊಸದಾಗಿ ಸುಸ್ತಿ ಸಾಲಗಳ ಪಟ್ಟಿಯನ್ನು ಸೇರಿದವು. ಖಾಸಗಿ ಬ್ಯಾಂಕುಗಳಲ್ಲಿ ಇದು 61 ಸಾವಿರ ಕೋಟಿ ರೂ. ಅಂದರೆ ಒಟ್ಟು 3ಲಕ್ಷ ಕೊಟಿ ರೂ.

ಒಎನ್‌ಜಿಸಿ ನಂತರ ಹಿಂಡಲು ಎಲ್‌ಐಸಿಯತ್ತ ಸರಕಾರದ ಕಣ್ಣು!

ಈ ನಡುವೆ ಭಾರೀ ಸುಸ್ತಿ ಸಾಲಗಳ ಹೊರೆ ಹೊತ್ತಿರುವ ಐಡಿಬಿಐ ಯಲ್ಲಿನ ಸರಕಾರದ ಶೇರುಗಳನ್ನು ಎಲ್‌ಐಸಿ ಖರೀದಿಸುತ್ತಿರುವುದಾಗಿ ವರದಿಯಾಗಿದೆ. ಬಹುಶಃ ಕಾರ್ಪೊರೇಟ್ –ಸ್ನೇಹಿ ಸರಕಾರ ಎಲ್‌ಐಸಿ ಮೇಲೆ ಒತ್ತಡ ಹಾಕುತ್ತಿದೆ ಎಂಬುದು ಹೆಚ್ಚು ಸರಿಯಾಗುತ್ತದೇನೋ.

ಐಡಿಬಿಐ ಸುಸ್ತಿ ಸಾಲಗಳ ಪ್ರಮಾಣ 28%ದಷ್ಟು , ಅಂದರೆ ಉದ್ದಿಮೆ–ಕೈಗಾರಿಕೆಗಳ ಸರಾಸರಿ ಸುಸ್ತಿ ಸಾಲಗಳ ಪ್ರಮಾಣ(ಮೇಲೆ ಹೇಳಿದಂತೆ 22.8%)ಕ್ಕಿಂತ ಹೆಚ್ಚು. ಹೆಸರೇ ಹೇಳುವಂತೆ (ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್) ಇದು ಕಾರ್ಪೊರೇಟ್‌ಗಳಿಗೇ ಸಾಲ ನೀಡುತ್ತಿರುವ ಬ್ಯಾಂಕ್. **ಅವರುಗಳು ಬಾಕಿ ಮಾಡಿಕೊಂಡ ಲಕ್ಷ ಕೋಟಿಗಟ್ಟಲೆ ರೂ.ಗಳ ಸಾಲಗಳನ್ನು ವಸೂಲಿ ಮಾಡುವ ಬದಲು ಈ ಸರಕಾರ ಅದನ್ನು ಕೋಟ್ಯಂತರ ಪಾಲಿಸಿದಾರರ ಉಳಿತಾಯಗಳ ಮೂಲಕ ತುಂಬಲು ಪ್ರಯತ್ನಿಸುತ್ತಿದೆಯೇ?** ಇದು ಸಾಮಾನ್ಯರಿಂದ ಹಿಡಿದು ತಜ್ಞರ ವರೆಗೆ ಎಲ್ಲರೂ ಕೇಳುತ್ತಿರುವ ಪ್ರಶ್ನೆ.

ಎಲ್‌ಐಸಿ ಈಗ ಈ ಬ್ಯಾಂಕಿನಲ್ಲಿ 11% ದಷ್ಟು ಶೇರುಗಳನ್ನು ಹೊಂದಿದೆ. ಅದನ್ನು 40%ಕ್ಕೆ ಅಥವ 51%ಕ್ಕೇ ಏರಿಸಬೇಕೆಂಬುದು ಸರಕಾರದ ಹುನ್ನಾರವಂತೆ. ಅಂದರೆ ಎಲ್‌ಐಸಿ 8ರಿಂದ 10 ಸಾವಿರ ಕೋಟಿ ರೂ.ಗಳನ್ನು ಹಾಕಬೇಕು. ಇದು ಐಡಿಬಿಐಗೆ ಹೋಗುವುದಿಲ್ಲ, ಬದಲಾಗಿ ಸರಕಾರಕ್ಕೆ ಹೋಗುತ್ತದೆ, ಅದರ ಶೇರು ಹಿಂಪಡಿಕೆಯ ಗುರಿ ತಲುಪಲು. ಅಲ್ಲದೆ ಇನ್ನೂ 10ರಿಂದ 12 ಸಾವಿರ ಕೋಟಿ ರೂ.ಗಳನ್ನು ಈ ಬ್ಯಾಂಕಿನ ಆರೋಗ್ಯ ಸರಿಪಡಿಸಲು ಖರ್ಚು ಮಾಡಬೇಕು, ಅಂದರೆ ಸುಮಾರು 20ಸಾವಿರ ಕೊಟಿ. ಅಲ್ಲದೆ ಮುಂದಿನ 2–3 ವರ್ಷಗಳಲ್ಲಿಪ್ರತಿ ವರ್ಷ 10 ಸಾವಿರ ಕೊಟಿ ರೂ.ಗಳಷ್ಟು ಖರ್ಚು ಮಾಡಬೇಕು, ಅಂದರೆ ಒಟ್ಟು 50 ಸಾವಿರ ಕೋಟಿ ರೂ.ಗಳಷ್ಟು.

ಪಾಲಿಸಿದಾರರು ಎಲ್‌ಐಸಿ ಮೇಲೆ ವಿಶ್ವಾಸದಿಂದ ಕೊಟ್ಟಿರುವ ತಮ್ಮ ಇಷ್ಟೊಂದು ಉಳಿತಾಯದ ಹಣವನ್ನು ಈ ರೀತಿ 'ಹೂಡಿಕೆ' ಮಾಡುವುದು ಸರಿಯೇ ಎಂಬುದು ಸಾಮಾನ್ಯವಾಗಿ ಕೇಳುವ ಪ್ರಶ್ನೆ.

ಅಖಿಲ ಭಾರತ ವಿಮಾ ನೌಕರರ ಸಂಘ(ಎಐಐಇಎ) ಕೂಡ ಎಲ್‌ಐಸಿ ಅಧ್ಯಕ್ಷರಿಗೆ ಪತ್ರ ಬರೆದು ಈ ಎಲ್ಲ ಪ್ರಶ್ನೆಗಳನ್ನು ಗಂಭೀರವಾಗಿ ಪರಿಶೀಲಿಸಬೇಕು ಎಂದು ಅವರನ್ನು ಕೋರಿದೆ.

ಎಲ್‌ಐಸಿ ಇಂದು ಅತ್ಯಂತ ವಿಶ್ವಾಸಾರ್ಹ ಬ್ರಾಂಡ್. ಈ ವಿಶ್ವಾಸವನ್ನು ಗಳಿಸಿರುವುದು ರಾಷ್ಟ್ರನಿರ್ಮಾಣದ ಕೆಲಸಗಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡುತ್ತಲೇ ಪಾಲಿಸಿದಾರರ ಹಿತಗಳನ್ನು ಸುರಕ್ಷಿತವಾಗಿ ಇಟ್ಟಿರುವುದಕ್ಕೆ. ಐಡಿಬಿಐ ಶೇರುಗಳನ್ನು ಖರೀದಿಸುವುದು ತನ್ನ ಶೇರು ಹಣದಿಂದಲ್ಲ, ಬದಲಿಗೆ ಪಾಲಿಸಿದಾರರ ಹಣದಿಂದ. ಆದ್ದರಿಂದ ಈ ಬಗ್ಗೆ ಜಾಗರೂಕತೆಯಿಂದ ವರ್ತಿಸಬೇಕು. ಈ ಬ್ಯಾಂಕಿನಲ್ಲಿ ಹತೋಟಿಯನ್ನು ಪಡೆಯುವ ಹೂಡಿಕೆ ಮಾಡುವುದಾದರೆ, ಎಲ್‌ಐಸಿ ತನಗೆ ಅನುಭವವಿಲ್ಲದ ಒಂದು ಕ್ಷೇತ್ರಕ್ಕೆ ಕಾಲಿಟ್ಟಂತೆ. ಈ ಹಿಂದೆ ಎಲ್‌ಐಸಿ ಈ ಕ್ಷೇತ್ರವನ್ನು ಪ್ರವೇಶಿಸುವ ಬಗ್ಗೆ ಯೋಚಿಸಿತ್ತು, ನಿಜ. ಆದರೆ ಬ್ಯಾಂಕಿಂಗ್ ವಲಯದ ಈಗಿನ ಸನ್ನಿವೇಶದಲ್ಲಿ ಇದು ಜಾಣತನದ ಪ್ರಯತ್ನವಾಗುತ್ತದೆಯೇ ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕು ಎಂದಿರುವ ನೌಕರರ ಸಂಘ ಈ ನಿಟ್ಟಿನಲ್ಲಿ ಸಂಘದ ಆತಂಕಗಳನ್ನು ಗಮನಕ್ಕೆ ತಗೊಳ್ಳಬೇಕು ಮತ್ತು ಈ ವ್ಯವಹಾರದಲ್ಲಿ ಆಶಾಭಾವನೆಯೇನಾದರೂ ಇದ್ದರೆ ಅದನ್ನು ಹಂಚಿಕೊಳ್ಳಬೇಕು ಎಂದು ಕೋರಿದೆ.

ಎಲ್‌ಐಸಿಯ ಮೇಲೆ ಈ ವ್ಯವಹಾರಕ್ಕೆ ಕೈಹಾಕುವಂತೆ ಒತ್ತಡ ಹೇರುವಾಗ ಈ ಒಳ್ಳೆಯ ದಿನಗಳ ಮಂತ್ರ ಜಪಿಸಿದ ಸರಕಾರ ಪಾಲಿಸಿದಾರರ ಒಳಿನ ಬಗ್ಗೆ ಯೋಚಿಸುತ್ತಿಲ್ಲ, ಬದಲಾಗಿ ಐಡಿಬಿಐಯಂತಹ ನಷ್ಟದ ಬಾಬತ್ತಿನಿಂದ ಕೈ ತೊಳೆದುಕೊಳ್ಳುವುದು, ಮತ್ತು ಏರ್ ಇಂಡಿಯಾದ ಶೇರುಗಳ ಮಾರಾಟವಾಗದೆ ಆಗಿರುವ ಸನ್ನಿವೇಶದಲ್ಲಿ ತನ್ನ ಶೇರು ಮಾರಾಟದ ಬಜೆಟ್ ಗುರಿಯನ್ನು ಸಾಧಿಸುವುದರ ಬಗ್ಗೆ ಮಾತ್ರ ಯೋಚಿಸುತ್ತಿರುವಂತೆ ಕಾಣುತ್ತದೆ.

1000 ಕೋಟಿ ರೂ. ಆದಾಯದ ಆಳುವ ಪಕ್ಷದ ಕೋಶಾಧಿಕಾರಿ ಯಾರು?

ಇದು ಕೇವಲ ಕುತೂಹಲ ತಣಿಸಿಕೊಳ್ಳುವ ಚಾಳಿಯ ಪ್ರಶ್ನೆಯಲ್ಲ, ಪಾರದರ್ಶಕತೆಯ ಪ್ರಶ್ನೆ. ಕೇಂದ್ರದಲ್ಲಿ ಈಗ ಅಧಿಕಾರ ನಡೆಸುತ್ತಿರುವ ಆಳುವ ಪಕ್ಷದ 'ಕೋಶ'ದ ಗಾತ್ರ ಮಾರ್ಚ್ 2017ರಲ್ಲಿ 1034 ಕೋಟಿ ರೂ.,. ಅದು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಲೆಕ್ಕಪತ್ರದ ಪ್ರಕಾರ. 2015–16ಕ್ಕೆ ಹೋಲಿಸಿದರೆ 81% ಏರಿಕೆ. ಆಳುವ ಪಕ್ಷವಾದ್ದಕ್ಕೆ ಸಾರ್ಥಕವಾಯಿತು ಎಂದು ಕೆಲವರು ಕುಹಕವಾಡಬಹುದು. 2017–18ರ ಲೆಕ್ಕಪತ್ರವನ್ನು ಇನ್ನೂ ಸಲ್ಲಿಸಿದಂತಿಲ್ಲ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಈ ಲೆಕ್ಕಪತ್ರಕ್ಕೆ ಪಕ್ಷದ ಕೋಶಾಧಿಕಾರಿ ಸಹಿ ಇಲ್ಲ, ಬದಲಾಗಿ, 'ಕೋಶಾದಿಕಾರಿಗಾಗಿ' ಸಹಿಯಿದೆ. ವಾಸ್ತವವಾಗಿ ಚುನಾವಣಾ ಆಯೋಗ ಇಂತಹ ಲೆಕ್ಕಪತ್ರವನ್ನು ಮಾನ್ಯ ಮಾಡಬಾರದಾಗಿತ್ತು, ಕೋಶಾಧಿಕಾರಿಯ ಹೆಸರು ಮತ್ತು ಸಹಿಗೆ ಒತ್ತಾಯಿಸಬೇಕಿತ್ತು ಎಂದು ಹಿಂದಿನ ಕೆಲವು ಮುಖ್ಯ ಚುನಾವಣಾ ಆಯುಕ್ತರು ಸೇರಿದಂತೆ ಹಲವರ ಅಭಿಪ್ರಾಯ. ಅಂದರೆ ಈ ಭಾರೀ ಮೊತ್ತದ ವ್ಯವಹಾರ ನಡೆಸುವವರು ಯಾರು?

2014 ರ ಮೊದಲು ಈಗ ರೈಲ್ವೆ ಮಂತ್ರಿ ಮತ್ತು ಸದ್ಯಕ್ಕೆ ಹಣಕಾಸು ಮಂತ್ರಿಗಳೂ ಆಗಿರುವವರು ಕೋಶಾಧಿಕಾರಿಯಾಗಿದ್ದರು. ಪಕ್ಷದ ಅಧ್ಯಕ್ಷರು ಆಗಸ್ಟ್ 2014ರಲ್ಲಿ ಹೊಸ ಪಧಾಧಿಕಾರಿಗಳ ಹೆಸರುಗಳನ್ನು ಘೋಷಿಸಿದಾಗ ಅದರಲ್ಲಿ ಕೋಶಾಧಿಕಾರಿ ಹೆಸರಿರಲಿಲ್ಲವಂತೆ(ಸ್ವಾತಿ ಚತುರ್ವೇದಿ, ದಿ ವೈರ್, ಜೂನ್ 14). ಈಗ ಅವರು ಮಂತ್ರಿಗಳಾಗಿರುವುದರಿಂದ ನಿಯಮಗಳ ಪ್ರಕಾರ ಆ ಹುದ್ದೆಯಲ್ಲಿರುವಂತಲ್ಲ, ಅಥವ ಮಂತ್ರಿಯಾಗಿರುವಂತಿಲ್ಲ.

ತುರ್ತು ಪರಿಸ್ಥಿತಿಯನ್ನು ಪಠ್ಯದಲ್ಲಿ ಸೇರಿಸಲಾಗುವುದಂತೆ

ಈ ವರ್ಷ ಜೂನ್ 26 ತುರ್ತು ಪರಿಸ್ಥಿತಿ ಹೇರಿಕೆಯ 43ನೇ ವಾರ್ಷಿಕ. ಇದನ್ನು ಅದೇಕೋ ಆಳುವ ಪಕ್ಷ ಬಹಳ ಸದ್ದು–ಗದ್ದಲಗಳೊಂದಿಗೆ ಆಚರಿಸಿದೆ. ಪ್ರಧಾನ ಮಂತ್ರಿಗಳಿಂದ ಹಿಡಿದು ಹಲವಾರು ಮಂತ್ರಿಗಳು ಮಾತಾಡಿದ್ದಾರೆ. ಮುಂದಿನ ವಾರ್ಷಿಕದ ಮೊದಲು ಈ ಸರಕಾರ ಚುನಾವಣೆ ಎದುರಿಸಬೇಕಾಗಿರುವುಉದ, ಮತ್ತು ಇತ್ತೀಚಿನ ಚುನಾವಣೆಗಳಲ್ಲಿ ಮತದಾರರು ಮುಖ ತಿರುಗಿಸಿರುವಂತೆ ಕಾಣುತ್ತಿರುವುದು ಇದಕ್ಕೆ ಕಾರಣ ಎಂಬುದು ವಿಶ್ಲೇಷಕರ ಅಭಿಪ್ರಾಯ.

ಮಾನವ ಸಂಪನ್ಮೂಲಗಳ ಮಂತ್ರಿಗಳು "ನಾವು ತುರ್ತು ಪರಿಸ್ಥಿತಿಯ ಸಮಸ್ತ ಕತೆಯನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸುತ್ತೇವೆ. ಮಕ್ಕಳು ಆ ಕಾಲದ ವಾಸ್ತವತೆಯ ಬಗ್ಗೆ ತಿಳಿಯಬೇಕು" ಎಂದು ಪತ್ರಿಕಾಸಮ್ಮೇಳನವೊಂದರಲ್ಲಿ ಹೇಳಿದ್ದಾರೆ.

ನಿಜಕ್ಕೂ ಒಳ್ಳೆಯದು. ಅ ಸಮಸ್ತ ಕತೆಯಲ್ಲಿ ಆಗಿನ ಆರೆಸ್ಸೆಸ್ ಮುಖ್ಯಸ್ಥರು ಆಗಿನ ಪ್ರಧಾನ ಮಂತ್ರಿಗಳಿಗೆ ಎರೆಡೆರಡು ಬಾರಿ ಪತ್ರ ಬರೆದು ತುರ್ತು ಪರಿಸ್ಥಿತಿಯ 'ಕುಖ್ಯಾತ' ಇಪ್ಪತ್ತಂಶಗಳ 'ರಚನಾತ್ಮಕ' ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದ್ದು, ತಮ್ಮ ಸಂಘಟನೆಯ ಮೇಲಿನ ನಿಷೇಧವನ್ನು ತೆಗೆಯಬೇಕೆಂದು ಕೋರಿದ್ದು, ನಂತರ ಬಹಳಷ್ಟು ಆರೆಸ್ಸೆಸ್ ಮಂದಿ ಕ್ಷಮಾಪಣೆ ಬರೆದುಕೊಟ್ಟು ಬಿಡುಗಡೆಯಾದದ್ದು ಕೂಡ ಇರುತ್ತದಲ್ಲವೇ ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿದೆ.

ಬಿಜೆಪಿಯ ತುರ್ತು ಪರಿಸ್ಥಿತಿ ಕಥನ

ಪುಟ 7 ರಿಂದ


ಮತ್ತು ಕಾರ್ಯಕರ್ತರು ಆ ಸಮಯದಲ್ಲಿ ಜೈಲುಗಳಲ್ಲಿದ್ದರು.

ತುರ್ತುಪರಿಸ್ಥಿತಿಯ ಸಮಯದಲ್ಲಿ ಸಿಪಿಐ(ಎಂ) ಪ್ರಜಾಪ್ರಭುತ್ವದ ಮೇಲೆ ಹಲ್ಲೆಗಳ ವಿರುದ್ಧ ಅವಿರತವಾಗಿ ಜನಗಳನ್ನು ಸಂಘಟಿಸಿತು.

ಆ ಅವಧಿಯ ನಂತರ ಹುಟ್ಟಿದವರು, ಏಕಪಕ್ಷ ಸರ್ವಾಧಿಕಾರಶಾಹಿಯ ಅಪಾಯದ ವಿರುದ್ಧ ಮೊದಲಿಗೆ ಎಚ್ಚರಿಸಿದ್ದು ಸಿಪಿಐ(ಎಂ, 1972ರಲ್ಲಿ, ತನ್ನ 9ನೇ ಮಹಾಧಿವೇಶನದಲ್ಲಿ ಎಂದು ನೆನಪಿಸುವುದು ಪ್ರಯೋಜನಕಾರಿ. ಅಂದಿನಿಂದ ಪಕ್ಷ ಹೆಚ್ಚುತ್ತಿದ್ದ ಸರ್ವಾಧಿಕಾರಶಾಹಿಯ ವಿರುದ್ಧ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಲು ಎಡೆಬಿಡದೆ ದುಡಿಯಿತು. ಅದಾಗಲೇ ಪಶ್ಚಿಮ ಬಂಗಾಲದಲ್ಲಿ ಸರ್ವಾಧಿಕಾರಶಾಹಿಯ ಪೂರ್ವಸೂಚನೆ ಕಾರ್ಯರತವಾಗಿತ್ತು. ಅಲ್ಲಿ ಕಾಂಗ್ರೆಸ್ ಆಳರಸರು ಒಂದು ಅರೆ–ಫ್ಯಾಸಿಸ್ಟ್ ಭಯೋತ್ಪಾದನೆ ಆರಂಭಿಸಿದ್ದರು. ಹೀಗೆ ಸರ್ವಾಧಿಕಾರಶಾಹಿಯ ವಿರುದ್ಧ ಸಿಪಿಐ(ಎಂ)ನ ಹೋರಾಟ ಆಂತರಿಕ ತುರ್ತುಪರಿಸ್ಥಿತಿಗಷ್ಟೇ ಸೀಮಿತವಾಗಿರಲಿಲ್ಲ.

ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದ ಈ ಅನುಭವದಿಂದಾಗಿಯೇ ಇಂದು ಭಾರತದಲ್ಲಿ ಕೋಮುವಾದಿ ಸರ್ವಾಧಿಕಾರಶಾಹಿ ಆಳ್ವಿಕೆ ಬರುತ್ತಿರುವುದನ್ನು ಸ್ಪಷ್ಟವಾಗಿ ಕಾಣಲು ಸಿಪಿಐ(ಎಂ) ಗೆ ಸಾಧ್ಯವಾಗಿದೆ. ಮೋದಿ ಸರಕಾರದ ಕಳೆದ ನಾಲ್ಕು ವರ್ಷಗಳಲ್ಲಿ ಕಾಣ ಬಂದಿರುವುದು ಒಂದು 'ಅಘೋಷಿತ ತುರ್ತುಪರಿಸ್ಥಿತಿ'ಯೇ. ಅದು ಸರ್ವಾಧಿಕಾರಶಾಹಿಯ ಸಾಂಸ್ಥೀಕರಣವಲ್ಲದೆ ಬೇರೇನೂ ಅಲ್ಲ.

ಬಿಜೆಪಿ ನಾಲ್ಕು ದಶಕಗಳ ಹಿಂದಿನ ತುರ್ತುಪರಿಸ್ಥಿತಿಯ ಬಗ್ಗೆ ಮಾತಾಡುವಾಗ, ಅದೀಗ ಅದಕ್ಕಿಂತ ಎಷ್ಟೋ ಕೆಟ್ಟದಾದ ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಇಟ್ಟಿದೆ ಎಂಬ ಸಂಗತಿಯನ್ನು ಉಲ್ಲಾಸದಿಂದಲೇ ಬದಿಗೊತ್ತುತ್ತದೆ. ಇದು ನಾಗರಿಕ ಸ್ವಾತಂತ್ರ್ಯಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ವ್ಯವಸ್ಥಿತವಾಗಿ ತುಳಿಯುತ್ತಿರುವ, ಸಂವಿಧಾನಿಕ ಸಂಸ್ಥೆಗಳನ್ನು ಬುಡಮೇಲು ಮಾಡುವ, ಪ್ರಭುತ್ವದ ನೆರವಿನ ಕಾವಲುಕೋರತನ ಮತ್ತು ಸಾಯಬಡಿಯುವ ಜನಜಂಗುಳಿಯ, ಮಾಧ್ಯಮಗಳನ್ನು ಬೆದರಿಸುವ ಮತ್ತು ಭಿನ್ನಮತವನ್ನು ದಲನಮಾಡುವ ಒಂದು ಆಳ್ವಿಕೆ.



ವ್ಯಂಗ್ಯಚಿತ್ರ: ಗೋಕುಲ್, ಮಂಜುಲ್

ಆ ಕಾಲದ ತುರ್ತುಪರಿಸ್ಥಿತಿಯಿಂದ ಏನಾದರೂ ಪಾಠ ಕಲಿಯುವುದಿದ್ದರೆ, ಅದು, ಈಗಿರುವ ಸರ್ವಾಧಿಕಾರಶಾಹಿ ಕೋಮುವಾದಿ ಆಳ್ವಿಕೆಯನ್ನು ಸೋಲಿಸಲು ಅವಿರತವಾದ ಮತ್ತು ದ್ವಿಗುಣ ಪ್ರಮಾಣದ ಪ್ರಯತ್ನಗಳು ಬೇಕಾಗಿದೆ ಎಂಬುದೇ ಆಗಿದೆ.

‘ಮಾನವೀಯ’ ಪರಿಗಣನೆ ಬಂಡವಾಳಶಾಹಿ ಜಾಯಮಾನದಲ್ಲೇ ಇಲ್ಲ



ಹಲವಾರು ಅಂಶಗಳು ಮೇಳೈಸಿ, ಅವು ಜಾಗತಿಕ ಬಂಡವಾಳಶಾಹಿಯನ್ನು ಒಂದು ಗುರುತರವಾದ ಬಿಕ್ಕಟ್ಟಿಗೆ ತಳ್ಳಿವೆ ಎಂಬ ಅಂಶವನ್ನು ಒಬ್ಬ ಘಾಟಿ ಹೂಡಿಕೆದಾರ ಜಾರ್ಜ್ ಸೋರೊಸ್ ಗುರುತಿಸಬಲ್ಲ. ಆದರೆ ಆಫ್ರಿಕಾ ಖಂಡದ ದೇಶಗಳಿಂದ ನಿರಾಶ್ರಿತರು ನುಗ್ಗುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗಿ, ಕೀನ್ಸ್ ಮಾದರಿಯ ಒಂದು ಯೋಜನೆಯನ್ನು ಯೂರೋಪಿಯನ್ ಒಕ್ಕೂಟ ಹಮ್ಮಿಕೊಳ್ಳಬೇಕು ಎಂಬ ಆತನ ಸಲಹೆಯನ್ನು ಯುರೋಪಿಯನ್ ಬಂಡವಾಳಶಾಹಿಯು ಪ್ರಸಕ್ತ ಕಾಲಘಟ್ಟದಲ್ಲಿ ಜಾರಿಗೊಳಿಸಲು ಇಚ್ಚಿಸುವುದಿಲ್ಲ. ಬದಲಿಗೆ, ಮೆಡಿಟರೇನಿಯನ್ ಸಮುದ್ರ ಹಾದು ಬರುವ ನಿರಾಶ್ರಿತರು ಅದರಲ್ಲಿಯೇ ಮುಳುಗಿ ಸಾಯಲಿ ಎಂದು ಬಯಸುತ್ತದೆ. ‘ಮಾನವೀಯ’ ಪರಿಗಣನೆಯಿಂದ ಹೊಮ್ಮುವ ಯಾವುದೇ ಕ್ರಿಯೆಯನ್ನು ಬಂಡವಾಳಶಾಹಿ ಅಂಗೀಕರಿಸುವುದಿಲ್ಲ, ಅದು ಅದರ ಜ್ಞಾನದ ಜಾಯಮಾನಕ್ಕೆ ಹೊರತಾದದ್ದು.

ಪ್ರೊ. ಪ್ರಭಾತ್ ಪಟ್ನಾಯಕ್ ರವರ ಲೇಖನ George Soros on the Current Conjuncture ನ ಭಾವಾನುವಾದ:ಕೆ.ಎಂ.ನಾಗರಾಜ್

ಜಾರ್ಜ್ ಸೋರೊಸ್ ಎಂಬ ವ್ಯಕ್ತಿಯ ಪರಿಚಯ, ಜಾಗತಿಕ ಮಟ್ಟದಲ್ಲಿ, ಷೇರು ಮಾರುಕಟ್ಟೆ ಮತ್ತು ಹಣಕಾಸು ವಲಯಗಳಲ್ಲಿ ಎಲ್ಲರಿಗೂ ಇದೆ. ಜಾಗತಿಕ ಹಣಕಾಸು ಬಿಕ್ಕಟ್ಟು ಕಾಣಿಸಿಕೊಳ್ಳಲಿದೆ ಎನ್ನುವ ಸೋರೊಸ್ ಅಭಿಪ್ರಾಯವು ಹಣಕಾಸು ಮಾರುಕಟ್ಟೆಗಳು ಚಡಪಡಿಸುವಂತೆ ಮಾಡಿದೆ. ಇತ್ತೀಚೆಗೆ, ಒಂದು ಚಿಂತಕರ ಚಾವಡಿಯಲ್ಲಿ ಅವರು ಮಾಡಿದ ಭಾಷಣದ ಸಾರಾಂಶ ಹೀಗಿದೆ:

> ಮೂರನೆ ಜಗತ್ತಿನ ದೇಶಗಳಿಂದ ಹಣಕಾಸು ಬಂಡವಾಳವು ಹೊರ ಹರಿಯುವ ಸಾಧ್ಯತೆ ಇದೆ. ಆಗ, ಆ ದೇಶಗಳಲ್ಲಿ ಕರೆನ್ಸಿಯ ಅಪಮೌಲ್ಯ ಮತ್ತು ಮಿತವ್ಯಯ ನೀತಿ ಪಾಲನೆಯ ಪರಿಸ್ಥಿತಿ ಅನಿವಾರ್ಯ. ಯೂರೋಪಿಯನ್ ಒಕ್ಕೂಟವು ಎದುರಿಸುತ್ತಿರುವ ಮೂರು ಪ್ರಮುಖ ಸಮಸ್ಯೆಗಳು ಅದರ ನೆತ್ತಿಯ ಮೇಲೆ ತೂಗು ಕತ್ತಿಯಂತೆ ನೇತಾಡುತ್ತಿವೆ. ಬ್ರಿಟನ್ ಒಕ್ಕೂಟದಿಂದ ಹೊರ ಬಂದ (ಬ್ರೆಕ್ಸಿಟ್) ಕ್ರಮವು ಒಕ್ಕೂಟದ ವ್ಯಾಪಾರ ಗಡಿ–ವ್ಯಾಪ್ತಿಯನ್ನು ಚೂರು ಚೂರು ಮಾಡಿದೆ. ಮಿತವ್ಯಯದ ಕಟ್ಟುಪಾಡಿಗೆ ಬದ್ಧವಾಗಿರುವ ಅದರ ಸದಸ್ಯ ದೇಶಗಳು ಸೊರಗಿವೆ. ಆಫ್ರಿಕಾ ಖಂಡದ ದೇಶಗಳಿಂದ ನಿರಾಶ್ರಿತರು ಈ ದೇಶಗಳಿಗೆ ನುಗ್ಗುತ್ತಿರುವುದು ನುಂಗಲಾರದ ತುತ್ತಾಗಿದೆ. ಈ ಸಮಸ್ಯೆಗಳಿಗೆ ಪರಿಹಾರವಾಗಿ, ಕೀನ್ಸ್ ಮಾದರಿಯ ಒಂದು ಯೋಜನೆಯನ್ನು ಯೂರೋಪಿಯನ್ ಒಕ್ಕೂಟ ಹಮ್ಮಿಕೊಳ್ಳಬೇಕು.

ಸೋರೊಸ್‌ನ ವೈಯುಕ್ತಿಕ ಅಭಿಪ್ರಾಯಗಳು ನಮಗೆ ಮುಖ್ಯವಲ್ಲ. ಆದರೂ, ಸೋರೊಸ್ ಉಲ್ಲೇಖಿಸಿರುವ ಅಂಶಗಳು ಗಮನ ಸೆಳೆಯುತ್ತವೆ: ಜಗತ್ತಿನ ಎಲ್ಲ ದೇಶಗಳಿಂದ, ಮುಖ್ಯವಾಗಿ, ಮೂರನೆ ಜಗತ್ತಿನ ದೇಶಗಳಿಂದ ಹೊರಗೆಳೆದ ಹಣಕಾಸು ಬಂಡವಾಳವನ್ನು ಹೀರಿಕೊಳ್ಳುವ ಅಮೆರಿಕಾದ ಹವಣಿಕೆ; ಡಾಲರ್ ಮೌಲ್ಯ ವೃದ್ಧಿ; ಅದರಿಂದಾಗಿ, ಮೂರನೆ ಜಗತ್ತಿನಲ್ಲಿ ಭಯ ಹುಟ್ಟಿಸುವಂತಹ ಆರ್ಥಿಕ ಬಿಕ್ಕಟ್ಟಿನ ಹಾವಳಿ; ಯೂರೋಪ್ ಎದುರಿಸುತ್ತಿರುವ ನಿರಾಶ್ರಿತರ ಸಮಸ್ಯೆ (ಸ್ವ–ಸ್ಥಾನದಲ್ಲಿದ್ದ ಹಕ್ಕಿಗಳನ್ನು ಸಾಮ್ರಾಜ್ಯವಾದವು ಬೆದರಿಸಿದ್ದರಿಂದ, ಅವು ಹಾರಿ ಹೋಗಿ ಸಿಕ್ಕಿದ ಮರ ಗಿಡಗಳನ್ನು ಆಶ್ರಯಿಸಿವೆ ಎಂಬಂತಿದೆ ಈ ಸಮಸ್ಯೆ – ಸೋರೊಸ್ ಹೀಗೆ ಹೇಳದಿದ್ದರೂ ಸಹ) ಮತ್ತು ಇರಾನ್ ನ್ಯೂಕ್ಲಿಯರ್ ಒಪ್ಪಂದದ ಬಗ್ಗೆ ಅಮೆರಿಕಾ–ಯೂರೋಪಿಯನ್ ಒಕ್ಕೂಟದ ನಡುವಿನ ತಿಕ್ಕಾಟದಿಂದಾಗುವ ಆರ್ಥಿಕ ಹಾನಿ; ಈ ಎಲ್ಲ ಅಂಶಗಳೂ ಮೇಳೈಸಿ, ಅವು ಜಾಗತಿಕ ಬಂಡವಾಳಶಾಹಿಯನ್ನು ಒಂದು ಗುರುತರವಾದ ಬಿಕ್ಕಟ್ಟಿಗೆ ತಳ್ಳಿವೆ ಎಂಬ ಅಂಶವನ್ನು ಒಬ್ಬ ಘಾಟಿ ಹೂಡಿಕೆದಾರ–ಸೋರೊಸ್–ಗುರುತಿಸಬಲ್ಲ. ಅದೇ, ಉದಾರಿ ಎಂದುಕೊಳ್ಳುವ ಬೂರ್ಜ್ವಾ ವರ್ಗ ಗುರುತಿಸುವುದಿಲ್ಲ.

ಬಂಡವಾಳಶಾಹಿಯನ್ನು ಕಾಡುತ್ತಿರುವ ಅಂಶಗಳ ಬಗ್ಗೆ ಸೋರೊಸ್ ಉಲ್ಲೇಖಿಸಿದ್ದಾನೆ. ಮುಂಬರುವ ಬಿಕ್ಕಟ್ಟಿನ ಬಗ್ಗೆ ಎಚ್ಚರಿಸಿದ್ದಾನೆ. ಆದರೆ, ಈ ಅಂಶಗಳು ಬಿಕ್ಕಟ್ಟನ್ನು ಸೃಷ್ಟಿಸಲು ಹೇಗೆ ಸೇರಿಕೊಳ್ಳುತ್ತವೆ ಎಂಬುದನ್ನು ಸೋರೊಸ್ ವಿವರಿಸಿಲ್ಲ. ಸೋರೊಸ್ ಒಬ್ಬ ಅರ್ಥಶಾಸ್ತ್ರಜ್ಞನಲ್ಲ. ಸೋರೊಸ್, ಬಂಡವಾಳಶಾಹಿಯು ನಶ್ವರ ಎಂಬ ಬೌದ್ಧಿಕತೆಯುಳ್ಳ ಒಬ್ಬ ಕ್ರಾಂತಿಕಾರಿಯೂ ಅಲ್ಲ. ಸೋರೊಸ್ ಒಬ್ಬ ಅಪ್ಪಟ ಬಂಡವಳಿಗ. ಬಿಕ್ಕಟ್ಟಿನ ಬಗ್ಗೆ ಸೋರೊಸ್‌ನ ಅಂತ:ಪ್ರಜ್ಞೆ ಹೇಳುವ ಮಾತುಗಳು ಮುಖ್ಯವಾಗುತ್ತವೆ.

ಯೂರೋಪಿಯನ್ ಒಕ್ಕೂಟವು ನಿರಾಶ್ರಿತರ ಮೂಲ ದೇಶಗಳಿಗೆ ನೆರವು ನೀಡುವಂತಹ ಒಂದು ಮಾರ್ಷಲ್ ಯೋಜನೆ ಹಮ್ಮಿಕೊಳ್ಳಬೇಕು ಎಂಬ ಸೋರೊಸ್‌ನ ವಿಚಾರ ಹೊಸದೇನಲ್ಲ. ಕೀನ್ಸ್ ಪರಂಪರೆಯ ಕೆಲವರು ಅದನ್ನು ಹೇಳಿದ್ದಾರೆ. ಈ ಮಾರ್ಷಲ್ ಯೋಜನೆಯನ್ನು ಹುಟ್ಟುಹಾಕಿದ್ದು ಅಮೇರಿಕಾ. ಅಂದಿನ ಅಮೇರಿಕಾದ ಅಧ್ಯಕ್ಷ ಹ್ಯಾರಿ ಟ್ರೂಮನ್‌ರ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಮಾರ್ಷಲ್ ಹೆಸರಿನ ಈ ಯೋಜನೆಯು ಎರಡನೇ ಮಹಾಯುದ್ಧದಲ್ಲಿ ಅಪಾರ ಜೀವ ಹಾನಿ ಮತ್ತು ಆಸ್ತಿ ಪಾಸ್ತಿಗಳ ನಾಶದಿಂದ ಜರ್ಝರಿತವಾಗಿದ್ದ ಯೂರೋಪ್ ದೇಶಗಳು ಚೇತರಿಸಿಕೊಳ್ಳಲು ಅನುವಾಗುವಂತೆ ನೆರವು ಒದಗಿಸಿತ್ತು. ಇಂದಿನ ಬೆಲೆಗಳಲ್ಲಿ ಈ ನೆರವಿನ ಮೌಲ್ಯ ಸುಮಾರು 110 ಬಿಲಿಯನ್ ಡಾಲರ್‌ಗಳು.

ದಿಕ್ಕು ದೆಸೆ ಇಲ್ಲದ ನಿರಾಶ್ರಿತರ ಮೂಲ ದೇಶಗಳಿಗೆ(ಆಫ್ರಿಕಾದ ದೇಶಗಳು) ನೆರವು ನೀಡಬಲ್ಲ ಇಂತಹ ಒಂದು ಯೋಜನೆಯನ್ನು ಯೂರೋಪಿಯನ್ ಒಕ್ಕೂಟ ಕಾರ್ಯರೂಪಕ್ಕೆ ತಂದರೆ ಅದಕ್ಕೆ ಸುಮಾರು 35 ಬಿಲಿಯನ್ ಡಾಲರ್ ವೆಚ್ಚ ತಗಲಬಹುದು. ಈ ಕ್ರಮದಿಂದಾಗಿ, ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ವೃದ್ಧಿಸುತ್ತದೆ. ಒಂದು ವೇಳೆ ಯೂರೋಪಿಯನ್ ಸರಕುಗಳನ್ನೇ ಕೊಳ್ಳಬೇಕೆಂಬ ಶರತ್ತು ವಿಧಿಸಿದರೂ ಅದರಿಂದ ಯೂರೋಪಿನ ದೇಶಗಳಿಗೂ ಲಾಭವಿದೆ. ಜಗತ್ತಿನ ಈ ಭಾಗದ ಹಿಂದುಳಿದ ದೇಶಗಳಲ್ಲಿ ಹೆಚ್ಚಿನ ಹೂಡಿಕೆ ಮತ್ತು ಜನೋಪಯೋಗಿ ಕಾರ್ಯಗಳಿಗೆ ವೆಚ್ಚ ಮಾಡುವ ಮೂಲಕ ಅವರ ಅಭಿವೃದ್ಧಿಯಾಗುತ್ತದೆ.

1980ರ ಆಸುಪಾಸಿನಲ್ಲಿ, ಬಡ ದೇಶಗಳ ಸಂಪನ್ಮೂಲಗಳ ಮೂಲಕ ತಮ್ಮ ಸಂಪತ್ತು ಹೆಚ್ಚಿಸಿಕೊಳ್ಳುತ್ತಿದ್ದ ಶ್ರೀಮಂತ ದೇಶಗಳು, ಪ್ರತಿಯಾಗಿ, ಈ ಬಡ ದೇಶಗಳ ಅಭಿವೃದ್ಧಿಗೆ ನೆರವು ನೀಡುವ ಉದ್ದೇಶದಿಂದ, ಜರ್ಮನಿಯ ಆಗಿನ ಚಾನ್ಸಲರ್ ವಿಲ್ಲಿ ಬ್ರಾಂಡ್ಟ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚನೆಯಾಗಿತ್ತು. ಮುಂದುವರಿದ ಎಲ್ಲ ಬಂಡವಾಳಶಾಹಿ ದೇಶಗಳೂ ತಮ್ಮ ಜಿಡಿಪಿಯ ಒಂದು ಸಣ್ಣ ಭಾಗವನ್ನು ಅನುದಾನ ರೂಪದಲ್ಲಿ ಈ ದೇಶಗಳಿಗೆ ನೆರವು ನೀಡಬೇಕೆಂದು ಈ ಬ್ರಾಂಡ್ಟ್ ಆಯೋಗವು ಸಲಹೆ ಮಾಡಿತ್ತು. ಇದು ಈ ಎರಡೂ ಗುಂಪಿನ ದೇಶಗಳಿಗೆ ಅನುಕೂಲ ಮಾಡಿಕೊಡುತ್ತದೆ ಎಂದು ಭಾವಿಸಲಾಗಿತ್ತು. ಹೇಗೆಂದರೆ, ಶ್ರೀಮಂತ ದೇಶಗಳಲ್ಲಿ ಒಟ್ಟಾರೆ ಬೇಡಿಕೆ ಕೊರತೆಯ ಸಮಸ್ಯೆ ಇತ್ತು. ಬಡ ದೇಶಗಳಲ್ಲಿ ಹೂಡಿಕೆ ಮತ್ತು ಜನೋಪಯೋಗಿ ಕಾರ್ಯಗಳಿಗೆ ಸಂಪನ್ಮೂಲಗಳ ಕೊರತೆ ಇತ್ತು. ಈ ಎರಡೂ ಕೊರತೆಗಳನ್ನು ನಿವಾರಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.

ಈ ಯೋಜನೆಯಿಂದಾಗಿ ಮುಂದುವರಿದ ಬಂಡವಾಳಶಾಹಿ ದೇಶಗಳಿಗೆ ಒಂದು ರೀತಿಯ ಲಾಭವಿತ್ತು. ಅನುದಾನ ಕೊಡುವುದರಿಂದ ಈ ದೇಶಗಳಲ್ಲಿ ಸರಕು–ಸೇವೆಗಳ ಲಭ್ಯತೆ ಕಡಿಮೆಯಾಗುತ್ತಿರಲಿಲ್ಲ. ಬದಲಿಗೆ, ಹೆಚ್ಚುತ್ತಿದ್ದವು. ಹೇಗೆಂದರೆ, ಬೇಡಿಕೆ ಇಲ್ಲದ ಸರಕು–ಸಾಮಗ್ರಿಗಳನ್ನು ಈ ದೇಶಗಳು ಉತ್ಪಾದಿಸುತ್ತಿರಲಿಲ್ಲ. ಪರಿಣಾಮವಾಗಿ, ಸ್ಥಾಪಿತ ಉತ್ಪಾದನಾ ಸಾಮರ್ಥ್ಯವು ಸಂಪೂರ್ಣವಾಗಿ ಬಳಕೆಯಾಗುತ್ತಿರಲಿಲ್ಲ. ನಿರುದ್ಯೋಗ ಹೆಚ್ಚುತ್ತಿತ್ತು. ಒಂದು ಉದಾಹರಣೆಯ ಮೂಲಕ ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬಹುದು. 100ರೂ ಮೌಲ್ಯದ ವಸ್ತುಗಳನ್ನು ಒಂದು ಬಡ ದೇಶಕ್ಕೆ ವರ್ಗಾಯಿಸಬೇಕಾಗುತ್ತದೆ ಎಂದು ಊಹಿಸಿಕೊಳ್ಳೋಣ. ಈ ವಸ್ತುಗಳನ್ನು ತಯಾರಿಸಲು ಕೆಲಸಗಾರರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಈ ವಸ್ತುಗಳ ತಯಾರಿಕೆಗೆ ಬಳಸುವ ಕೆಲವು ಮೂಲ ಸಾಮಗ್ರಿಗಳನ್ನು ಉತ್ಪಾದಿಸಲು ಮತ್ತು ಹೊಸದಾಗಿ ನೇಮಕಗೊಂಡ ಕೆಲಸಗಾರರು ಬಳಸುವ ಪದಾರ್ಥಗಳ ಬೇಡಿಕೆಯನ್ನು ಪೂರೈಸಲು ಇನ್ನೂ ಹೆಚ್ಚಿನ ಸಂಖ್ಯೆಯ ಕೆಲಸಗಾರರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ, ಸುಮಾರು 400ರೂ ಮೌಲ್ಯದ ವಸ್ತುಗಳು ಹೊಸದಾಗಿ ಉತ್ಪಾದನೆಯಾಗುತ್ತವೆ. ಅದರಲ್ಲಿ. 300ರೂ ಮೌಲ್ಯದ ವಸ್ತುಗಳು ದೇಶದಲ್ಲಿ ಬಳಕೆಯಾಗುತ್ತವೆ ಮತ್ತು 100ರೂ ಮೌಲ್ಯದ ವಸ್ತುಗಳು ಬಡ ದೇಶಕ್ಕೆ ವರ್ಗಾವಣೆಯಾಗುತ್ತವೆ.

ಇಂತಹ ವರ್ಗಾವಣೆಗಳಿಂದ, ಅದರ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ಉದ್ಯೋಗ, ಉತ್ಪಾದನೆ ಮತ್ತು ಬಳಕೆ ಈ ಎಲ್ಲವೂ ಹೆಚ್ಚಾಗಿವೆ. ಬೇಡಿಕೆ ಹೆಚ್ಚಿದ ಒಂದೇ ಕಾರಣದಿಂದಾಗಿ, ಸ್ಥಾಪಿತ ಉತ್ಪಾದನಾ ಸಾಮರ್ಥ್ಯವು ಬಳಕೆಯಾಯಿತು ಮತ್ತು ಉದ್ಯೋಗಗಳು ಹೆಚ್ಚಿದವು. ದಶಕಗಳ ಹಿಂದೆ ವಿಲ್ಲಿ ಬ್ರಾಂಡ್ಟ್ ಸೂಚಿಸಿದ್ದು ಇದನ್ನೇ. ಯೂರೋಪಿಯನ್ ಒಕ್ಕೂಟವು ಆಫ್ರಿಕಾದ ನಿರಾಶ್ರಿತರ ಮೂಲ ದೇಶಗಳಿಗೆ ನೆರವು ನೀಡುವಂತೆ ಸೋರೊಸ್ ಸೂಚಿಸಿದ್ದು ಇದನ್ನೇ.

ಬ್ರಾಂಡ್ಟ್ ಆಯೋಗದ ಸಲಹೆಗಳನ್ನು ಶ್ರೀಮಂತ ಬಂಡವಾಳಶಾಹಿ ದೇಶಗಳು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಸೋರೊಸ್ ಸಲಹೆಗಳಿಗೂ ಅದೇ ಗತಿ ಕಾದಿದೆ. ಏಕೆಂದರೆ, ಇದು ಬಂಡವಾಳಶಾಹಿಯ ಕಾರ್ಯವೈಖರಿಯಲ್ಲ. ಯಾವ ಆಕಾರಕ್ಕೆ ಬೇಕಾದರೂ ತಿರುಗುವ ಮಡಕೆ ಮಾಡುವ ಮಣ್ಣಿನಂತೆ ಸಾಮಾಜಿಕ ವಿಚಾರಶೀಲತೆಗೆ ಸ್ಪಂದಿಸುವ ಗುಣವುಳ್ಳದ್ದಲ್ಲ ಬಂಡವಾಳಶಾಹಿ ವ್ಯವಸ್ಥೆ. ಹಾಗೇನಾದರೂ ಇದ್ದಿದ್ದರೆ, ಇಂದಿನ ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲೂ, ಬೇಡಿಕೆ ಇಳಿಸುವ “ಮಿತವ್ಯಯ” ಪಾಲಿಸುವಂತಹ ಅಸಂಬದ್ಧತೆಯನ್ನು ನಾವು ಕಣ್ಣಾರೆ ಕಾಣುತ್ತಿರಲಿಲ್ಲ. ಸಮಾಜವಾದಿ ರಾಜಕೀಯ ದಾಳಿಯಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ರಕ್ಷಿಸಲು ದುಡಿದ ಕೀನ್ಸ್ ಕೂಡ ಅದರ ಮೂಲ ಸ್ವಭಾವವನ್ನು ಸರಿಯಾಗಿ ಗ್ರಹಿಸಿರಲಿಲ್ಲ. ವರ್ಗಾವಣೆ(ಅನುದಾನ) ನಿಲ್ಲಬೇಕು, ಏಕೆಂದರೆ, ಅವು ಫಲಾನುಭವಿಗಳನ್ನು “ಹಾಳುಗೆಡವು”ತ್ತದೆ ಎಂಬ ತಪ್ಪು ಅಭಿಪ್ರಾಯವನ್ನು ಕೀನ್ಸ್ ಹೊಂದಿದ್ದರು. ಬಂಡವಾಳಶಾಹಿ ವ್ಯವಸ್ಥೆಯ ತರ್ಕ ಎಂತದ್ದು ಎಂಬುದನ್ನು ಕೀನ್ಸ್ ಸಮಕಾಲೀನ, ವಯಸ್ಸಿನಲ್ಲಿ ಕಿರಿಯ ಮತ್ತು ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ, ಮೈಕೇಲ್ ಕಲೇಕಿ ಬಹಳ ತೀಕ್ಷ್ಣವಾಗಿ ಟೀಕಿಸಿದ್ದರು: “ಹುಟ್ಟಿನಿಂದಲೇ ನೀನು ಆಸ್ತಿವಂತನಾಗಿಲ್ಲದಿದ್ದರೆ, ಹಣೆಯಲ್ಲಿ ಬೆವರಿಳಿಸಿ ದುಡಿದಾಗಲೇ ನಿನ್ನ ಅನ್ನ ಸಂಪಾದನೆ”. ಸಾಲಗ್ರಸ್ತ ಗ್ರೀಸ್ ದೇಶಕ್ಕೆ ನೆರವು ನಿರಾಕರಿಸುವಾಗ ಬಳಸಿದ್ದು ಇದೇ ತರ್ಕವನ್ನು. ತನ್ನ ಕುಟುಂಬದ ಒಬ್ಬ ಸದಸ್ಯನನ್ನೇ (ಗ್ರೀಸ್) ಕೈ ಹಿಡಿದು ಎತ್ತದಿದ್ದ ಯೂರೋಪಿಯನ್ ಒಕ್ಕೂಟವು ಆಫ್ರಿಕಾದ ದೇಶಗಳಿಗೆ ಅನುದಾನ ಕೊಡುವುದೆಂದು ನಿರೀಕ್ಷಿಸಲಾಗದು, ನೆರವು ಕೊಟ್ಟವರು ಮತ್ತು ಪಡೆದವರು ಈ ಎರಡೂ ಕಡೆಯವರಿಗೂ ಅದು ಪ್ರಯೋಜನಕಾರಿಯಾಗಿದ್ದರೂ ಸಹ.

ಮಾರ್ಷಲ್ ಯೋಜನೆಯನ್ನು ಮೊದಲು ಪ್ರತಿಪಾದಿಸಿದಾಗ ಇದ್ದ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿತ್ತು. ಆಗ, ಬಂಡವಾಳಶಾಹಿಯು ದಾರಿ ಕಾಣದಂತಾಗಿತ್ತು. ಹಠಮಾರಿ ಸ್ವಭಾವದ ಅದು ಕೆಲವು ಹೊಂದಾಣಿಕೆ ಮಾಡಿಕೊಳ್ಳುವ ಬಲವಂತಕ್ಕೆ ಒಳಗಾಗಿತ್ತು. ಯುದ್ಧದಲ್ಲಿ ನಾಜಿ ಜರ್ಮನಿಯನ್ನು ಸೋಲಿಸಿ, ಜನಪ್ರಿಯತೆ, ಪ್ರತಿಷ್ಠೆ, ಪ್ರಭಾವಗಳ ಉತ್ತುಂಗ ತಲುಪಿದ್ದ ಸೋವಿಯತ್ ಒಕ್ಕೂಟದ ಸಮಾಜವಾದಿ ವಿಚಾರಧಾರೆಯ ದಾಳಿಗೆ ಬಂಡವಾಳಶಾಹಿಯು ತತ್ತರಿಸಿತ್ತು. ಕಾರ್ಮಿಕ ವರ್ಗ ಬದಲಾವಣೆಗಾಗಿ ಹಾತೊರೆಯುತ್ತಿತ್ತು ಎಂಬುದನ್ನು ಬ್ರಿಟನ್‌ನಲ್ಲಿ ಯುದ್ಧಾನಂತರದ ಚುನಾವಣೆಯಲ್ಲಿ ಚರ್ಚಿಲ್ ಮತ್ತು ಅವರ ಟೋರಿ ಪಕ್ಷ ಸೋತದ್ದು ಸ್ಪಷ್ಟಪಡಿಸಿತ್ತು.. ಅದೇ ಹೊತ್ತಿನಲ್ಲಿ, ಯುದ್ಧದಿಂದಾಗಿಯೇ ಬಂಡವಾಳಶಾಹಿಯು ಬಲಹೀನವಾಗಿತ್ತು. ಸಮಾಜವಾದದ ಎದುರು ಮತ್ತೊಂದು ಯುದ್ಧಕ್ಕೆ ಇಳಿಯುವ ಪರಿಸ್ಥಿತಿಯಲ್ಲಿ ಅದು ಇರಲಿಲ್ಲ. ಈ ಹಿನ್ನೆಲೆಯಲ್ಲಿ, ಅದು ತನ್ನ ಕಾರ್ಯವಿಧಾನದಲ್ಲಿ ಕೆಲವು ಹೊಂದಾಣಿಕೆ ಮಾಡಿಕೊಂಡಿತು. ಅಂತಹ ಒಂದು ಹೊಂದಾಣಿಕೆಯ ಭಾಗವಾಗಿಯೇ, ಸಮಾಜವಾದಿ ವಿಚಾರಧಾರೆಯ ದಾಳಿಯಿಂದ ಇಡೀ ಜಗತ್ತನ್ನು ಉಳಿಸುವ ಸಲುವಾಗಿ, ಮಾರ್ಷಲ್ ಯೋಜನೆಯ ಹೆಸರಿನಲ್ಲಿ, ಯೂರೋಪಿನ ಪುನರ್ನಿರ್ಮಾಣಕ್ಕಾಗಿ ಅಮೆರಿಕಾ ನೆರವು ನೀಡಿತ್ತು.

ವಾಸ್ತವವಾಗಿ, ಬಂಡವಾಳಶಾಹಿಯನ್ನು ಉಳಿಸಲು ಮಾಡಿಕೊಂಡ ಅನೇಕ ಹೊಂದಾಣಿಕೆಗಳಲ್ಲಿ, ಮಾರ್ಷಲ್ ಯೋಜನೆಯೂ ಒಂದು. ಯುದ್ಧ ಪೂರ್ವದಲ್ಲಿ ಅಸಡ್ಡೆಗೆ ಗುರಿಯಾಗಿದ್ದ ಕಾರ್ಮಿಕ ವರ್ಗದ ಸಿಟ್ಟು ಕ್ರಾಂತಿಕಾರಿ ಹಾದಿ ಹಿಡಿಯುವುದನ್ನು ತಪ್ಪಿಸುವ ಸಲುವಾಗಿ ಮತ್ತು ಪೂರ್ಣ ಉದ್ಯೋಗದ ಈಡೇರಿಕೆಗಾಗಿ, ವಿತ್ತೀಯ ವಿಧಾನಗಳ ಮೂಲಕ “ಬೇಡಿಕೆ ನಿರ್ವಹಣೆ” ಮಾಡುವ ಪ್ರಭುತ್ವದ ಮಧ್ಯಪ್ರವೇಶವನ್ನು ಬಂಡವಾಳಶಾಹಿ ಒಪ್ಪಿಕೊಂಡಿತ್ತು. ವಸಾಹತು ದೇಶಗಳಿಂದ ರಾಜಕೀಯ ನಿರ್ಗಮನವನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದ ಚರ್ಚಿಲ್ ಮತ್ತು ಅವರ ಕುಲಬಾಂಧವರು ವಸಾಹತುಗಳಿಂದ ಕಾಲ್ತೆಗೆಯಬೇಕಾಯ್ತು. (ತಮಗೆ ಸೇರಿದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿದ್ದ ವಸಾಹತುಶಾಹಿಗಳ ಹಿಡಿತದಿಂದ ಬಿಡಿಸಿಕೊಂಡು ಅದನ್ನು ತಾವು ವಶಪಡಿಸಿಕೊಳ್ಳಲು ಮೂರನೆ ಜಗತ್ತಿನ ದೇಶಗಳು ಉಗ್ರ ಹೋರಾಟ ನಡೆಸದಿದ್ದರೂ ಅಲ್ಲಿಂದ ವಸಾಹತುಶಾಹಿ ದೇಶಗಳು ನಿರ್ಗಮಿಸಿದ್ದವು) ಅದೇರೀತಿಯಲ್ಲಿ, ಅಲ್ಲಿಯತನಕ ಪ್ರತಿರೋಧಿಸುತ್ತಿದ್ದ ಸಾರ್ವತ್ರಿಕ ವಯಸ್ಕ ಮತದಾನವನ್ನೂ ಈ ಬಂಡವಾಳಶಾಹಿ ದೇಶಗಳು ಒಪ್ಪಿಕೊಂಡವು. ಈ ಎಲ್ಲ ಮಹತ್ವದ ಅಂಶಗಳ ಹಿಂದೆ ಸೋವಿತ್ ಯೂನಿಯನ್ ಒಂದು ಪ್ರೇರಕ ಶಕ್ತಿಯಾಗಿ ಕೆಲಸಮಾಡಿತ್ತು. ಅಂದರೆ, ಅರ್ಥವ್ಯವಸ್ಥೆಯಲ್ಲಿ ಪ್ರಭುತ್ವದ ಮಧ್ಯಪ್ರವೇಶ, ವಸಾಹತು ನಿರ್ಗಮನ ಮತ್ತು ಸಾರ್ವತ್ರಿಕ ವಯಸ್ಕ ಮತದಾನ, ಇವೆಲ್ಲವೂ ಜಗತ್ತಿನ ಜನತೆಗೆ ಸೋವಿತ್ ಯೂನಿಯನ್ ಕೊಟ್ಟ ಪರೋಕ್ಷ ಕೊಡುಗೆಗಳು. ಅಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅವು ಕಾಣಿಸಿಕೊಂಡವು. ಈ ಕೊಡುಗೆಯನ್ನು ಉಳಿದವರು ಗುರುತಿಸಿಯೂ ಇಲ್ಲ, ಪ್ರಶಂಸಿಯೂ ಇಲ್ಲ.

ಅಂತಹ ಒಂದು ಸಂದಿಗ್ಧ ಪರಿಸ್ಥಿತಿ ಇಂದಿಲ್ಲ. ಆದರೂ, ಬಂಡವಾಳಶಾಹಿಯು ಒಂದು ಆಳವಾದ ಮತ್ತು ಗಾಢವಾದ ಬಿಕ್ಕಟ್ಟಿಗೆ ಸಿಕ್ಕಿಕೊಂಡಿದೆ. ಈ ಬಗ್ಗೆ ಸೋರೊಸ್ ಅಭಿಪ್ರಾಯ ಸರಿ ಇದೆ. ಸಧ್ಯದ ಪರಿಸ್ಥಿತಿಯಲ್ಲಿ, ಸಮಾಜವಾದಿ ಶಕ್ತಿಗಳು ಅದನ್ನು ಕಿತ್ತೊಗೆಯುವ ಸಾಧ್ಯತೆ ಇಲ್ಲ. ಒಂದು ವೇಳೆ ಅಂತಹ ಪರಿಸ್ಥಿತಿ ಉದ್ಭವಿಸಿದರೂ, ಅದು ಹೊಂದಾಣಿಕೆಗೆ ಇಳಿಯದೆ ಆಕ್ರಮಣಕಾರಿ ನಿಲುವು ತಳೆಯಬಲ್ಲದು. ಹಾಗಾಗಿ, ಈ ಸನ್ನಿವೇಶದಲ್ಲಿ, ಆಫ್ರಿಕಾದ ದೇಶಗಳಿಗೆ ಮಾರ್ಷಲ್ ಯೋಜನೆ ಎಂಬುದು ಒಂದು ಕಲ್ಪನೆಯ ಕೂಸಾಗುತ್ತದೆ. ವಾಸ್ತವವಾಗಿ ಹೇಳುವುದಾದರೆ, ಯೂರೋಪಿಯನ್ ಬಂಡವಾಳಶಾಹಿಯು ಮಾರ್ಷಲ್ ಯೋಜನೆ ಜಾರಿಗೊಳಿಸಲು ಇಚ್ಚಿಸುವುದಿಲ್ಲ. ಬದಲಿಗೆ, ಮೆಡಿಟರೇನಿಯನ್ ಸಮುದ್ರ ಹಾದು ಬರುವ ನಿರಾಶ್ರಿತರು ಅದರಲ್ಲಿಯೇ ಮುಳುಗಿ ಸಾಯಲಿ ಎಂದು ಬಯಸುತ್ತದೆ. ಇಲ್ಲವೇ, ನಿರಾಶ್ರಿತರು ಆ ದೇಶಗಳಿಂದ ಕದಲದಂತೆ ನೋಡಿಕೊಳ್ಳಲು ಅಲ್ಲಿನ ಸರ್ವಾಧಿಕಾರಿಗಳಿಗೆ ಬೆಂಬಲಕೊಡುತ್ತದೆ. ಅಥವಾ, ನಿರಾಶ್ರಿತರು ಆ ದೇಶಗಳಿಂದ ಕದಲದಂತೆ ನೋಡಿಕೊಳ್ಳಲು ತಾನೇ ಸ್ವತ: ಅಲ್ಲಿಯೇ ತನ್ನ ಮಿಲಿಟರಿ ಹೊರ ಠಾಣೆಗಳನ್ನು ನಿಯೋಜಿಸಬಲ್ಲದು.

‘ಮಾನವೀಯ’ ಪರಿಗಣನೆಯಿಂದ ಹೊಮ್ಮುವ ಯಾವುದೇ ಕ್ರಿಯೆಯನ್ನು ಬಂಡವಾಳಶಾಹಿ ಅಂಗೀಕರಿಸುವುದಿಲ್ಲ, ಅದು ಅದರ ಜ್ಞಾನದ ಜಾಯಮಾನಕ್ಕೆ ಹೊರತಾದದ್ದು. ●

ತ್ರಿಪುರಾ ಮತ್ತು ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆ ಜುಲೈ ತಿಂಗಳಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರತಿಭಟನೆ

ಜೂನ್ 22 ರಿಂದ 24 ರವರೆಗೆ ದಿಲ್ಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ತ್ರಿಪುರಾ ಮತ್ತು ಪಶ್ಚಿಮ ಬಂಗಾಲದಲ್ಲಿ ಎಡಪಕ್ಷಗಳ ವಿರುದ್ಧ ಹಿಂಸಾಚಾರವನ್ನು ಬಲವಾಗಿ ಖಂಡಿಸಿದೆ.

ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಗಳ ನಂತರ ನಾಲ್ವರು ಸಂಗಾತಿಗಳ ಕೊಲೆಯಾಗಿದೆ, ಸುಮಾರು 100 ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ, ಬಲವಂತದಿಂದ ಖಾಲಿ ಮಾಡಿಸಲಾಗಿದೆ, ಇಲ್ಲವೇ ಆಕ್ರಮಿಸಿಕೊಳ್ಳಲಾಗಿದೆ. ಇಂತಹ ಅವ್ಯಾಹತ ದಾಳಿಗಳಿಂದಾಗಿ ಸುಮಾರು 500 ಸಂಗಾತಿಗಳಿಗೆ ಪಕ್ಷದ ಕಚೆರಿಗಳಲ್ಲಿ ತಾತ್ಕಾಲಿಕ ಕ್ಯಾಂಪುಗಳನ್ನು ಏರ್ಪಡಿಸಬೇಕಾಗಿ ಬಂದಿದೆ. ಎಡಪಕ್ಷಗಳ ಕಾರ್ಯಕರ್ತರ ಮೇಲೆ ದೈಹಿಕವಾಗಿ ಗುರಿಯಿಡುವುದಲ್ಲದೆ, ಎಡಪಕ್ಷಗಳು ನಡೆಸುವ ಕಾರ್ಯಕ್ರಮಗಳು ಮತ್ತು ಸಮಾರಂಭಗಳ ಮೇಲೂ ದಾಳಿಗಳು ನಡೆಯುತ್ತಿವೆ.

ಮಾಜಿ ಮುಖ್ಯಮಂತ್ರಿಗಳು ಮತ್ತು ವಿಧಾನಸಭೆಯಲ್ಲಿ ಪ್ರತಿಪಕ್ಷದ ಮುಖಂಡರೂ ಆಗಿರುವ ಮಾಣಿಕ್ ಸರ್ಕಾರ್ ಅವರನ್ನೂ ಸಂಕಟಗ್ರಸ್ತ ಬುಡಕಟ್ಟು ಪ್ರದೇಶಗಳಿಗೆ ಚುನಾಯಿತ ಶಾಸಕರೊಂದಿಗೆ ಭೇಟಿ ನೀಡದಂತೆ ಅಡ್ಡಿಪಡಿಸಲಾಯಿತು. ಪ್ರತಿಪಕ್ಷದ ಮುಖಂಡರಿಗೆ ಸಂಪುಟ ದರ್ಜೆಯ ಮಂತ್ರಿಗೆ ಸಮನಾದ ಜವಾಬ್ದಾರಿಗಳಿರುತ್ತವೆ. ಅವರ ನ್ಯಾಯಬದ್ಧ ಕಾರ್ಯಕ್ರಮಗಳಿಗೆ ಅಡ್ಡಿ ಉಂಟು ಮಾಡುವುದು ಹಿಂದೆಂದೂ ದೇಶದ ಸಂಸದೀಯ ಇತಿಹಾಸದಲ್ಲಿ ನಡೆದಿಲ್ಲ. ಇದು ಶಾಸಕರ ಸಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಎಚ್ಚರಿಸಿದೆ.

ಪಶ್ಚಿಮ ಬಂಗಾಲದಲ್ಲಿ ರಾಜ್ಯಾದ್ಯಂತ ಪ್ರತಿಪಕ್ಷಗಳ ಮೇಲೆ, ಅದರಲ್ಲೂ ನಿರ್ದಿಷ್ಟವಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ಸರ್ವವ್ಯಾಪಿ ಹಿಂಸಾತ್ಮಕ ಹಲ್ಲೆಗಳು ನಡೆಯುತ್ತಿವೆ. ಸಾವಿರಾರು ಕಾರ್ಯಕರ್ತರನ್ನು ಸುಳ್ಳು ಕೇಸುಗಳಲ್ಲಿ ಸಿಗಿಸಲಾಗಿದೆ, ನಮ್ಮ ಸಂಗಾತಿಗಳ ಜೀವನಾಧಾರಗಳು ಮತ್ತು ಆಸ್ತಿಗಳ ಮೇಲೆ ಮತ್ತು ಅವರ ಕುಟುಂಬದ ಸದಸ್ಯರುಗಳ ಮೇಲೆ ದಾಳಿಗಳು ನಡೆಯುತ್ತಿವೆ.

ಇತ್ತೀಚಿನ ಪಂಚಾಯತು ಚುನಾವಣೆಗಳನ್ನು ಆಳುವ ಟಿಎಂಸಿ ಸಂಪೂರ್ಣ ಪ್ರಹಸನವಾಗಿ ಮಾಡಿದೆ. ಇಡೀ ಚುನಾವಣಾ ಅವಧಿಯಲ್ಲಿ ಪ್ರತಿಪಕ್ಷಗಳು ಮತ್ತು ಅವುಗಳ ಅಭ್ಯರ್ಥಿಗಳ ಮೇಲೆ ಹಲ್ಲೆಗಳನ್ನು ನಡೆಸಲಾಯಿತು. ಇದರಲ್ಲಿ ಪೋಲೀಸ್, ರಾಜ್ಯ ಆಡಳಿತ, ರಾಜ್ಯ ಚುನಾವಣಾ ಆಯೋಗ ಮತ್ತು ಟಿಎಂಸಿ ಭಯೋತ್ಪಾದಕ ತಂಡಗಳು ನೆರವಾದವು. ಅಭ್ಯರ್ಥಿಗಳ ಕುಟುಂಬದ ಸದಸ್ಯರ ಮೇಲೆ ಗುರಿಯಿಟ್ಟ ಹಲ್ಲೆಗಳೂ ನಡೆದವು. ಈ ಚುನಾವಣೆಗಳ ವೇಳೆಯಲ್ಲಿ ಹತ್ತು ಸಂಗಾತಿಗಳು ಹುತಾತ್ಮರಾಗಿದ್ದಾರೆ.

ಈ ಎರಡು ರಾಜ್ಯಗಳಲ್ಲಿನ ಪರಿಸ್ಥಿತಿಗಳನ್ನು ಗಮನಿಸಿ ಕೇಂದ್ರ ಸಮಿತಿ ಇಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿರುವುದರ ಬಗ್ಗೆ ಜುಲೈ ತಿಂಗಳಲ್ಲಿ ಒಂದು ರಾಷ್ಟ್ರೀಯ ಮಟ್ಟದ ಪ್ರತಿಭಟನೆಯನ್ನು ನಡೆಸಲು ನಿರ್ಧರಿಸಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ... ಪುಟ 2 ರಿಂದ

ಸಾರ್ವಜನಿಕ ಹಣದ ಬೃಹತ್ ಲೂಟಿ–ಸರಕಾರ ಮೂಕಪ್ರೇಕ್ಷಕ

ಉಸ್ತುವಾರಿ ನಡೆಸುವುದಕ್ಕೆ ಸಜ್ಜಾಗಿಲ್ಲ ಎಂದು ಅದರ ಗವರ್ನರ್ ಈಗ ಹೇಳುತ್ತಿದ್ದಾರೆ. ಆರ್ ಬಿ ಐ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ನಿಯಂತ್ರಕ, ಅದು ದೇಶದ ಹಣ ಕುರಿತ ಧೋರಣೆಯನ್ನು ರೂಪಿಸುವಂತದ್ದು. ಅದು ತನ್ನ ಸಂವಿಧಾನಿಕ ಹೊಣೆಗಾರಿಕೆಯನ್ನು ನಿಭಾಯಿಸಲು ಸಾಧ್ಯವಾಗುವಂತೆ ಅದನ್ನು ಬಲಪಡಿಸಬೇಕಾಗಿದೆ.

ಈ ಮೋದಿ ಸರಕಾರದ ನಾಲ್ಕು ವರ್ಷಗಳಲ್ಲಿ ಜನತೆಯ ಹಣದ ಲೂಟಿ ನಡೆಯುತ್ತಿದೆ ಮತ್ತು ಈ ಕೃತ್ಯಗಳನ್ನು ಎಸಗುವವರಿಗೆ ದೇಶ ಬಿಟ್ಟೋಡಲು ಅವಕಾಶ ನೀಡಲಾಗುತ್ತಿದೆ, ಸರಕಾರ ಮೂಕಪ್ರೇಕ್ಷಕನಾಗಿಯೇ ಉಳಿದಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ದಲಿತರ ಮೇಲೆ ಯೋಜಿತ ದೌರ್ಜನ್ಯಗಳು ಆತಂಕಕಾರಿ

ದಲಿತರ ಹಕ್ಕುಗಳನ್ನು ಪ್ರತಿಪಾದಿಸುವ ಸಂಘಟನೆಗಳು ಮತ್ತು ವ್ಯಕ್ತಿಗಳ ಮೇಲೆ ಮತ್ತು ವಿವಿಧ ದಲಿತ ಸಂಘಟನೆಗಳು ಕರೆ ನೀಡಿದ್ದ ಎಪ್ರಿಲ್ 2 ರ ಅಖಿಲ ಭಾರತ ಬಂದ್‌ನಲ್ಲಿ ಭಾಗವಹಿಸಿದವರ ಮೇಲೆ, ವಿಶೇಷವಾಗಿ ಬಿಜೆಪಿ ಆಳ್ವಿಕೆಯ ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಒಂದು ಯೋಜಿತ ಹಲ್ಲೆ ನಡೆಸಿರುವುದು ಅತ್ಯಂತ ಗಂಭೀರ ಸಂಗತಿ ಎಂದು ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಎಲ್ಲ ಮಟ್ಟಗಳಲ್ಲೂ ಈ ಪ್ರತಿಭಟನೆಗಳಲ್ಲಿ ಪಕ್ಷ ಸಕ್ರಿಯವಾಗಿ ಜತೆಗೂಡಿ ಈ ಚಳುವಳಿಗಳನ್ನು ಮುಂದೊಯ್ಯಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಸಂಸತ್ತಿನ ಮುಂಬರುವ ಅಧಿವೇಶನದಲ್ಲಿ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಬುಡಕಟ್ಟುಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆಯ ಅಂಶಗಳನ್ನು ನಿಷ್ಫಲಗೊಳಿಸಿರುವ ಸುಪ್ರಿಂ ಕೋರ್ಟಿನ ತೀರ್ಪಿನ ಪರಿಣಾಮವನ್ನು ಪ್ರಭಾವಶೂನ್ಯಗೊಳಿಸಲು ಒಂದು ಮಸೂದೆಯನ್ನು ಮಂಡಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ. ಅದರ ಮಧ್ಯಂತರದ ಅವಧಿಯಲ್ಲಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈ ಸುಪ್ರಿಂಕೋರ್ಟ್ ತೀರ್ಪಿನ ಮೊದಲಿದ್ದ ಸ್ಥಿತಿಯನ್ನು ತರುವಂತೆ ಮತ್ತು ಆ ಮೂಲಕ ಈ ಸಮುದಾಯಗಳಲ್ಲಿ ಅವರ ಸಂವಿಧಾನಿಕ ಹಕ್ಕುಗಳ ಬಗ್ಗೆ ಉಂಟಾಗಿರುವ ಅಭದ್ರತೆಯ ಭಾವನೆಯನ್ನು ಗಣನೆಗೆ ತಗೊಳ್ಳುವಂತೆ ಆಗಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

ಆರೆಸ್ಸೆಸ್–ಬಿಜೆಪಿ 'ನಗರ ಪ್ರದೇಶದ ಮಾವೋವಾದಿಗಳು' ಎಂಬ ಹೊಸದೊಂದು ಪದವನ್ನು ಸೃಷ್ಟಿಸಿವೆ. ಈ ವೇಷ ತೊಡಿಸಿ ಐವರು ಕಾರ್ಯಕರ್ತರನ್ನು ದಲಿತ ಚಳುವಳಿಯನ್ನು ಬೆಂಬಲಿಸಿದ್ದಕ್ಕಾಗಿ ಇದುವರೆಗೆ ಬಂಧಿಸಲಾಗಿದೆ. ಮಹಾರಾಷ್ಟ್ರದ ಬಿಜೆಪಿ ರಾಜ್ಯ ಸರಕಾರ ಭಯಾನಕ ಯುಎಪಿ ಕಾಯ್ದೆಯನ್ನು ಅನ್ವಯಿಸುತ್ತಿದೆ. ಇಂತಹ ಕ್ರಿಯೆಗಳು ದಲಿತರಲ್ಲಿನ ಪರಕೀಯ ಭಾವವನ್ನು ಇನ್ನಷ್ಟು ಹೆಚ್ಚಿಸುತ್ತವಷ್ಟೇ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಿ ಹೇಳಿದೆ.

ನಾಗರಿಕತ್ವ ಕಾಯ್ದೆ ತಿದ್ದುಪಡಿ – ಚುನಾವಣಾ ಪ್ರಯೋಜನಕ್ಕಾಗಿ

ಧಾರ್ಮಿಕ ನಂಟಿನ ಆಧಾರದಲ್ಲಿ ನಾಗರಿಕತ್ವ ಕಾಯ್ದೆಗೆ ತಿದ್ದುಪಡಿಯ ಪ್ರಸ್ತಾವ ಅಸ್ಸಾಂ ರಾಜ್ಯದ ಜನಗಳ ಈಗಾಗಲೇ ನಾಜೂಕಾಗಿರುವ ಐಕ್ಯತೆಯನ್ನು ಕುಗ್ಗಿಸುತ್ತದೆ.ರಾಷ್ಟ್ರೀಯ ನಾಗರಿಕರ ದಾಖಲೆ(ನ್ಯಾಶನಲ್ ರಿಜಿಸ್ಟರ್ ಆಫ್ ಸಿಟಿಝನ್ಸ್–ಎನ್‌ಆರ್‌ಸಿ)ಯನ್ನು ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಅಪೂರ್ಣತೆ ಮತ್ತು ಉದ್ದೇಶಪೂರ್ವಕವಾದ ತಾರತಮ್ಯದಿಂದಾಗಿ ಮತ್ತು 'ಸಂದೇಹಾಸ್ಪದ ಮತದಾರರು' ಎಂಬ ವಿಧದಿಂದಾಗಿ ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು ತೀವ್ರ ಒತ್ತಡಕ್ಕೊಳಗಾಗಿದ್ದಾರೆ.

ವಿವಿಧ ಪ್ರದೇಶಗಳು, ಭಾಷೆಗಳು ಮತ್ತು ಜನಾಂಗಗಳಿಗೆ ಸೇರಿದ ಜನಗಳ ಐಕ್ಯತೆ ಸರ್ವಪ್ರಥಮ ಗುರಿಯಾಗಿರಬೇಕು. ಬಿಜೆಪಿ/ಆರೆಸ್ಸೆಸ್ ಚುನಾವಣಾ ಪ್ರಯೋಜನಗಳಿಗಾಗಿ ಜನಗಳ ಭಾವನೆಗಳ ಜೊತೆಗೆ ಆಟವಾಡುತ್ತಿರುವುದು ಪರಿಸ್ಥಿತಿಯನ್ನು ಹದಗೆಡಿಸುತ್ತಿದೆ ಎಂದಿರುವ ಕೇಂದ್ರ ಸಮಿತಿ ಜನಗಳ ನಾಗರಿಕತ್ವವನ್ನು ನಿರ್ಧರಿಸಲು ಅವರು ಯಾವ ಧರ್ಮಕ್ಕೆ ಸೇರಿದವರು ಎಂಬ ಆಧಾರದಲ್ಲಿ ಯಾವುದೇ ತಿದ್ದುಪಡಿಯನ್ನು ಸಿಪಿಐ(ಎಂ) ವಿರೋಧಿಸುವುದಾಗಿ ಹೇಳಿದೆ.

ಜಮ್ಮು ಮತ್ತು ಕಾಶ್ಮೀರ:ಬಿಜೆಪಿಯ ರಾಜಕೀಯ ನಿಲುವಿನ ಸಂಪೂರ್ಣ ವಿಫಲತೆ

ಕೇಂದ್ರ ಸಮಿತಿ ಜಮ್ಮು ಮತ್ತು ಕಾಶ್ಮೀರದಲ್ಲಿ ಮೂಡಿ ಬರುತ್ತಿರುವ ಸನ್ನಿವೇಶವನ್ನು ಪರಿಶೀಲಿಸುತ್ತ, ಪಿಡಿಪಿಯೊಂದಿಗಿನ ಮೈತ್ರಿ ಸರಕಾರದಿಂದ ಸದ್ಯದ ನಿರ್ದಿಷ್ಟ ಕ್ಷಣದಲ್ಲಿ ಬಿಜೆಪಿ ಹೊರ ಬಂದಿರುವುದು ರಾಜ್ಯದಲ್ಲಿ ಹೆಚ್ಚಿನ ರಾಜಕೀಯ ಅಸ್ಥಿರತೆಯನ್ನು ಉಂಟು ಮಾಡುತ್ತದೆ ಎಂದು ಅಭಿಪ್ರಾಯ ಪಟ್ಟಿದೆ. ಇದು ಈ ವಿಷಯದಲ್ಲಿ ಬಿಜೆಪಿಯ ನಿಲುವಿನ ಸಂಪೂರ್ಣ ವಿಫಲತೆಯನ್ನು ಎತ್ತಿ ತೋರುತ್ತದೆ ಎಂದು ಅದು ಹೇಳಿದೆ.

ಈ ಮೈತ್ರಿ ಆರಂಭದಿಂದಲೇ ಅಸಮರ್ಥನೀಯವಾಗಿತ್ತು. ಅದು ಯಾವುದೇ ಪ್ರಶ್ನೆಯಲ್ಲಿ ಎಂದೂ ಸಹಮತವಿಲ್ಲದ ಶಕ್ತಿಗಳ ಮೈತ್ರಿಯಾಗಿದ್ದು ಅಧಿಕಾರದ ಫಲಗಳನ್ನು ಹಂಚಿಕೊಳ್ಳಲಿಕ್ಕೆಂದೇ ಜತೆಗೂಡಿದ ಸಮಯಸಾಧಕ ಕೃತ್ಯವಾಗಿತ್ತು.

ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ರಾಜ್ಯ ಸರಕಾರದ ಎಲ್ಲ ನಿರ್ಧಾರಗಳಲ್ಲಿ ಶಾಮೀಲಾಗಿತ್ತು. ಆದ್ದರಿಂದ ರಾಜ್ಯದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡುವಲ್ಲಿ ಮತ್ತು ಜನಗಳಲ್ಲಿ ಪರಕೀಯ ಭಾವವನ್ನು ಹೆಚ್ಚಿಸುವಲ್ಲಿ ತನ್ನ ಕೊಡುಗೆಗಳ ಜವಾಬ್ದಾರಿಯಿಂದ ಅದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಕೇಂದ್ರ ಸರಕಾರ ವಿಶ್ವಾಸ ಕುದುರಿಸುವ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲಾಗುವುದು ಮತ್ತು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಸಂವಾದದ ಮೂಲಕ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂಬ ತನ್ನ ಆಶ್ವಾಸನೆಗಳನ್ನು ಜಾರಿಗೆ ತರಬೇಕು. ಹತೋಟಿ ರೇಖೆಯ ಉದ್ದಕ್ಕೂ ಒಂದು ಪರಸ್ಪರ ಒಪ್ಪಿತ ಕದನವಿರಾಮದ ಮೂಲಕ ಗಡಿಯಾಚೆಯಿಂದ ಭಯೋತ್ಪಾದನೆಯನ್ನು ನಿಲ್ಲಿಸುವಂತಾಗಲು ಪಾಕಿಸ್ತಾನದೊಡನೆ ಮಾತುಕತೆಗಳನ್ನು ಕೇಂದ್ರ ಸರಕಾರ ಆರಂಭಿಸಬೇಕು. ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ ಇನ್ನಷ್ಟು ಹದಗೆಡಲು ಬಿಡಲಾಗದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಈಗ ರಾಜ್ಯಪಾಲರ ಆಳ್ವಿಕೆಯನ್ನು ಹೇರುವುದರೊಂದಿಗೆ ಆರೆಸ್ಸೆಸ್–ಬಿಜೆಪಿ ಭಯೋತ್ಪಾದನೆಯನ್ನು ಎದುರಿಸುವ ನೆವದಲ್ಲಿ ಒಂದು ಹೆಚ್ಚು ಕಠಿಣವಾದ ನಿಲುವನ್ನು ತಳೆಯಬಹುದು ಎಂಬ ಭೀತಿ ವ್ಯಾಪಕವಾಗಿದೆ. ಮಾನವ ಹಕ್ಕುಗಳ ದುರುಪಯೋಗ ಮತ್ತು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಉಲ್ಲಂಘನೆಗಳ ಅಪಾಯಗಳು ಹೆಚ್ಚಬಹುದು ಎಂಬ ಭೀತಿಯೂ ಉಂಟಾಗಿದೆ. ಇದು ಜಮ್ಮು ಮತ್ತು ಕಾಶ್ಮೀರದಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನವಷ್ಟೇ ಅಲ್ಲ, ಸಾರ್ವತ್ರಿಕ ಚುನಾವಣೆಗಳಿಗೆ ಪೂರ್ವಭಾವಿಯಾಗಿ ಹಿಂದುತ್ವ ಕೋಮುವಾದಿ ವೋಟ್ ಬ್ಯಾಂಕನ್ನು ಕ್ರೋಡೀಕರಿಸುವ ಪ್ರಕ್ರಿಯೆಗೂ ಇದರಿಂದ ನೆರವು ಪಡೆಯುವ ಪ್ರಯತ್ನವೂ ಆಗಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ವಿಧಾನಸಭಾ ಮತ್ತು ಉಪಚುನಾವಣೆಗಳ ಫಲಿತಾಂಶಗಳಲ್ಲಿ ಬಿಜೆಪಿಗೆ ಹಿನ್ನಡೆ

ಕರ್ನಾಟಕದ ವಿಧಾನಸಭೆಗೆ ಮತ್ತು ಲೋಕಸಭೆ ಮತ್ತು ವಿಧಾನಸಭೆಗೆ ನಡೆದ ಇತರ ಉಪಚುನಾವಣೆಗಳಲ್ಲಿ ಒಂದು ಹಿನ್ನಡೆಯನ್ನು ಅನುಭವಿಸಿದೆ. ಒಟ್ಟು 14 ಉಪಚುನಾವಣೆಗಳಲ್ಲಿ ಎರಡನ್ನು ಮಾತ್ರ ಗೆಲ್ಲಲು ಅದಕ್ಕೆ ಸಾಧ್ಯವಾಗಿದೆ. ಕಳೆದ ತಿಂಗಳು ನಾಲ್ಕು ಲೋಕಸಭಾ ಕ್ಷೇತ್ರಗಳ ಉಪಚುನಾವಣೆಗಳಲ್ಲಿ ಮಹಾರಾಷ್ಟ್ರದಲ್ಲಿನ ಐದು ಪಕ್ಷಗಳು ಸ್ಪರ್ಧಿಸಿದ್ದ ಪಾಲ್ಘರ್ ನಲ್ಲಿ ಮಾತ್ರ ಗೆಲ್ಲಲು ಅದಕ್ಕೆ ಸಾಧ್ಯವಾಗಿದೆ. ಹತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಒಂದನ್ನು ಮಾತ್ರ ಅದು ಗೆದ್ದಿದೆ. ಉತ್ತರಪ್ರದೇಶದ ಕೈರಾನದಲ್ಲಿ ಅದರ ಸೋಲು ಮಹತ್ವದ್ದು, ಏಕೆಂದರೆ ಇದು ಈ ಮೊದಲು 2014ರಲ್ಲಿ ಅದು ಗೆದ್ದಿದ್ದ ಫೂಲ್ಪುರ್ ಮತ್ತು ಗೋರಖ್‌ಪುರ್ ಲೋಕಸಭಾ ಕ್ಷೇತ್ರಗಳಲ್ಲಿ ಉಂಡಿರುವ ಸೋಲುಗಳನ್ನು ಅನುಸರಿಸಿ ಬಂದಿದೆ. ಕೈರಾನದಲ್ಲಿ ಆರೆಲ್‌ಡಿ ಅಭ್ಯರ್ಥಿಯನ್ನು ಕಾಂಗ್ರೆಸ್, ಎಸ್ ಪಿ ಮತ್ತು ಬಿ ಎಸ್ ಪಿ ಬೆಂಬಲಿಸಿದ್ದವು.

ಕೇರಳ: ಚೆಂಗನ್ನೂರ್ ವಿಧಾನಸಭಾ ಕ್ಷೇತ್ರವನ್ನು ಇನ್ನಷ್ಟು ಹೆಚ್ಚಿನ ಬಹುಮತದಿಮದ ಉಳಿಸಿಕೊಂಡಿರುವ ಸಿಪಿಐ(ಎಂ) ಮತ್ತು ಎಲ್‌ಡಿಎಫ್ ನ್ನು ಕೇಂದ್ರಸಮಿತಿ ಅಭಿನಂದಿಸಿದೆ. ಸಿಪಿಐ(ಎಂ) ಶಾಸಕರ ನಿಧನದಿಂದಾಗಿ ನಡೆದ ಈ ಉಪಚುನಾವಣೆಯಲ್ಲಿ 20,956 ಮತಗಳ ಬಾರೀ ಅಂತರದ ಗೆಲುವು ಸಿಕ್ಕಿದೆ. ಎಲ್‌ಡಿಎಫ್‌ಗೆ 2016ರಲ್ಲಿ 36.37% ಮತಗಳು ಸಿಕ್ಕಿದ್ದವು, ಈ ಬಾರಿ ಅದು 44.2%ಕ್ಕೇ ಏರಿದೆ. ಯುಡಿಎಫ್ ಮತಪಾಲು ಸುಮಾರಾಗಿ ಹಿಂದಿನಷ್ಟೇ ಇದ್ದರೆ, ಬಿಜೆಪಿಯ ಗಳಿಕೆ 29.26%ದಿಂದ 23.19%ಕ್ಕೆ ಇಳಿದಿದೆ.

ಕರ್ನಾಟಕ ಚುನಾವಣೆಗಳು:

ಕರ್ನಾಟಕ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ತನ್ನ ಸರಕಾರವನ್ನು ಕಳಕೊಂಡಿದೆ. ಜನತೆಯ ತೀರ್ಪಿನಿಂದಾಗಿ ಒಂದು ಅತಂತ್ರ ವಿಧಾನಸಭೆ ಏರ್ಪಟ್ಟಿತು. ಬಿಜೆಪಿ 36.2% ಮತ ಗಳಿಸಿ ಅತಿ ದೊಡ್ಡ ಪಕ್ಷವಾಗಿ ಬಂದರೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಕಾಂಗ್ರೆಸ್–ಜೆಡಿ(ಎಸ್) ಕೂಟ ಒಟ್ಟಾಗಿ 56.6% ಮತಗಳಿಸಿತು.

ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಜಿ.ವಿ.ಶ್ರೀರಾಮ ರೆಡ್ಡಿ 2013ರಲ್ಲಿ ಪಡೆದ 35,472 ಮತಗಳಿಗೆ ಹೋಲಿಸಿದರೆ, ಈ ಬಾರಿ 51,697 ಮತಗಳೊಂದಿಗೆ ಎರಡನೇ ಸ್ಥಾನ ಪಡೆದರು.

ಕುದುರೆ ವ್ಯಾಪಾರದಿಂದ ಒಂದು ಬಹುಮತವನ್ನು ಕಲೆಹಾಕುವ ಬಿಜೆಪಿ/ಆರೆಸ್ಸೆಸ್ ಪ್ರಯತ್ನಗಳನ್ನು ವಿಫಲಗೊಳಿಸಿ ಒಂದು ಜೆಡಿ(ಎಸ್)– ಕಾಂಗ್ರೆಸ್ ಸರಕಾರ ಅಧಿಕಾರ ವಹಿಸಿಕೊಂಡಿದೆ. ಇಲ್ಲಿ ಮತ್ತು ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯಪಾಲರು ವಹಿಸಿರುವ ಅಸಹ್ಯಕರ ಪಾತ್ರದ ಬೆಳಕಿನಲ್ಲಿ ಈ ಹುದ್ದೆಯನ್ನು ರದ್ದು ಮಾಡುವ ಬೇಡಿಕೆಯನ್ನು ಪುನರುಚ್ಚರಿಸಬೇಕಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಅಮೆರಿಕಾದೊಂದಿಗೆ ಮತ್ತಷ್ಟು ಗಟ್ಟಿ ಮಿಲಿಟರಿ ಸಂಬಂಧಗಳು

ಮುಂದಿನ ತಿಂಗಳು ವಾಶಿಂಗ್ಟನ್ ನಲ್ಲಿ 2+2 ಭಾರತ–ಅಮೆರಿಕ ಸಂವಾದ(ಎರಡೂ ದೇಶಗಳ ವಿದೇಶಾಂಗ ಮತ್ತು ರಕ್ಷಣಾ ಮಂತ್ರಿಗಳ ಸಭೆ) ಗೆ ಸಿದ್ಧತೆಯಾಗಿ 'ಸಂಪರ್ಕಗಳು, ಸಾಂಗತ್ಯ ಮತ್ತು ಭದ್ರತೆ ಒಪ್ಪಂದ'(ಸಿ ಒ ಎಮ್ ಸಿ ಎ ಎಸ್ ಎ) ದ ಕರಡಿನ ಬಗ್ಗೆ ಭಾರತ ಮಾತುಕತೆ ನಡೆಸುತ್ತಿದೆ. ಭಾರತೀಯ ಮಿಲಿಟರಿ ಸಂಪರ್ಕ ವ್ಯವಸ್ಥೆಗಳೊಳಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ನುಸುಳುವ ಅವಕಾಶ ಕಲ್ಪಿಸುವಂತಾಗುತ್ತದೆ ಎಂಬ ರಕ್ಷಣಾ ಇಲಾಖೆ ವ್ಯಕ್ತಪಡಿಸಿರುವ ಭೀತಿಯನ್ನು ಬದಿಗೊತ್ತಿ ಮೋದಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನೆಂಬ ತನ್ನ ಸ್ಥಾನಮಾನವನ್ನು ಇನ್ನಷ್ಟು ಗಟ್ಟಿಗೊಳಿಸುವತ್ತ ಸಾಗಿದೆ. ಇದಕ್ಕೆ ಮೊದಲು ಅದರೊಂದಿಗೆ 'ಸಾಗಣೆ ವಿನಿಮಯ ಮನವಿ ಪತ್ರ ಒಪ್ಪಂದ' (ಎಲ್ ಇ ಎಂ ಒ ಎ) ಎಂಬ ಸಾಮರಿಕ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಇದು ಭಾರತದ ಸಾರ್ವಭೌಮತೆಯನ್ನು ಬಿಟ್ಟು ಕೊಡುವ ಕ್ರಮ ಎಂದು ಸಿಪಿಐ(ಎಂ) ಕೇಂದ್ರಸಮಿತಿ ಪ್ರತಿಭಟಿಸಿದೆ.

ಜವಾಬ್ದಾರಿಗಳ ಹಂಚಿಕೆ

ಕೇಂದ್ರ ಸಮಿತಿ ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ಸದಸ್ಯರ ನಡುವೆ ಜವಾಬ್ದಾರಿಗಳ ಹಂಚಿಕೆಯನ್ನು ನಿರ್ಧರಿಸಿತು. ಪಕ್ಷದ 22ನೇ ಮಹಾಧಿವೇಶನ ನಿರ್ಧರಿಸಿರುವ ಪಕ್ಷದ ಮುಂದಿನ ಕಾರ್ಯಭಾರಗಳ ಜಾರಿಯ ದಾರಿ–ನಕಾಶೆಯನ್ನು ಕೂಡ ಕೇಂದ್ರ ಸಮಿತಿಯ ಸಭೆ ಅಂತಿಮಗೊಳಿಸಿತು.

ಟ್ರಂಪ್ ರ ವಲಸೆ ನಿರ್ಬಂಧ ನೀತಿಗೆ ವ್ಯಾಪಕ ಪ್ರತಿಭಟನೆ
ಜೂನ್ 30 ರಂದು ರಾಷ್ಟ್ರ ವ್ಯಾಪಿ ಪ್ರತಿಭಟನೆಗೆ ತಯಾರಿ

ಜಗದ ಸುತ್ತ

ಅಕ್ರಮವಾಗಿ ಅಮೇರಿಕ ದೇಶದೊಳಕ್ಕೆ ವಲಸೆ ಬಂದವರ ಮಕ್ಕಳನ್ನು ಪೋಷಕರಿಂದ ಬೇರ್ಪಡಿಸುವ ಅಮೇರಿಕಾದ ವಲಸೆ ರದ್ದತಿ ನಿಯಮಗಳು,, ಟ್ರಂಪ್ ನ ಆಡಳಿತದ "ಶೂನ್ಯ ಸಹಿಷ್ಣುತೆ "(ಜೀರೋ ಟಾಲೆರೆನ್ಸ್ ಪಾಲಿಸಿ) ನೀತಿಯ ಭಾಗವಾಗಿದೆ. ಈ ನೀತಿಯನ್ನು ಮಾನವೀಯ ಸಂಘಟನೆಗಳು, ಚರ್ಚ್‌ಗಳು, ಅಮೇರಿಕದ ಮಕ್ಕಳ ಅಕಾಡೆಮಿಗಳು, ಮತ್ತು ಡೆಮಾಕ್ರಾಟಿಕ್ ಪಕ್ಷದವರು ಸೇರಿದಂತೆ ಸಮಾಜದ ಎಲ್ಲಾ ವಿಭಾಗಗಳು ಈ ನೀತಿಯನ್ನು ತೀವ್ರವಾಗಿ ಟೀಕಿಸಿವೆ. ಸ್ವತ ಟ್ರಂಪ್ ರವರ ರಿಪಬ್ಲಿಕನ್ ಪಕ್ಷದ ಸದಸ್ಯರು ಕೂಡಾ ಈ ನೀತಿಯು ಅಮಾನವೀಯವೆಂದು ಕಠಿಣವಾಗಿಯೇ ಖಂಡಿಸಿದ್ದಾರೆ. ಜೊತೆಗೆ ಪ್ರತಿಭಟನೆ ಅನೇಕ ನಗರಗಳಿಗೆ ಹಬ್ಬಿದೆ ಮಾತ್ರವಲ್ಲದೆ, " ವಲಸೆ ಮತ್ತು ಕಸ್ಟಮ್ಸ್ ಎನ್ಫೋರ್ಸ್‌ಮೆಂಟ್ (ಐ.ಸಿ.ಇ) ಕಟ್ಟಡವನ್ನು ಒರೆಗಾನ್ ನಗರದ ಕಾರ್ಯಕರ್ತರು ಹಿಡಿದಿಟ್ಟುಕೊಂಡಿದ್ದಾರೆ. ಆ ನಂತರವಷ್ಟೇ, ಟ್ರಂಪ್ ಪೋಷಕರಿಂದ ಮಕ್ಕಳನ್ನು ಒತ್ತಾಯ ಪೂರ್ವಕವಾಗಿ ಬೇರ್ಪಡಿಸುವಿಕೆಗೆ ಅಂತ್ಯ ಹಾಡುವ, ಕಾರ್ಯಕಾರಿ ಆದೇಶ ವನ್ನು ಹೊರಡಿಸಿದ್ದಾರೆ ಎಂದು ವ್ಯಾಖ್ಯಾನಿಸಲಾಗಿದೆ.

ಅಮೇರಿಕದ ಒಂದು ನ್ಯಾಯಾಲಯದ ಆದೇಶದಂತೆ, 20 ದಿನ ಗಳಿಗಿಂತ ಹೆಚ್ಚು ಕಾಲ ಬಂಧನದಲ್ಲಿ ಮಕ್ಕಳನ್ನು ಹಿಡಿದಿಟ್ಟುಕೊಳ್ಳಬಾರದು. ಈ ಹಿನ್ನೆಲೆಯಲ್ಲಿ, ಕಾನೂನಿಗೆ ಮಾರ್ಪಾಡುಗಳನ್ನು ಮಾಡಲು, ನ್ಯಾಯ ಇಲಾಖೆ ಗೆ ಟ್ರಂಪ್ ಹೊರಡಿಸಿದ ಕಾರ್ಯಕಾರಿ ಆದೇಶವು ಕರೆ ನೀಡಿದೆ. ಮಕ್ಕಳನ್ನು ಅನಿರ್ದಿಷ್ಟ ಕಾಲ ಬಂಧನದಲ್ಲಿ ಹಿಡಿದಿಟ್ಟುಕೊಳ್ಳುವುದೇ ಇದರ ಮೂಲ ಉದ್ದೇಶವಾಗಿದೆ. ಇದರಿಂದಾಗಿ, ಬೇರ್ಪಡಿಸಲಾದ ಪೋಷಕರು ಮತ್ತು ಮಕ್ಕಳನ್ನು ಬಂಧನ ಕೇಂದ್ರದಲ್ಲಿಯೇ ಒಟ್ಟುಗೂಡಿಸಬಹುದು ಎಂದು ಹಲವರ ಅಭಿಪ್ರಾಯ. ಆದರೆ, ಟ್ರಂಪ್ ಉದ್ದೇಶವೇ ಬೇರೆ ಎಂಬುದನ್ನು ಮಾತ್ರ ಮರೆಯಬಾರದು.

ದೀರ್ಘ ಕಾಲದ ಕಾರಾಗೃಹಕ್ಕೆ ಮಕ್ಕಳು

ಅಧ್ಯಕ್ಷ ಟ್ರಂಪ್‌ರ ಕಾರ್ಯಕಾರಿ ಆದೇಶವು ದುರುಪಯೋಗಿಸಲ್ಪಟ್ಟ ಮಕ್ಕಳನ್ನು ಒಂದು ರೀತಿಯಲ್ಲಿ ಸರಿಪಡಿಸುವ ನಿಟ್ಟಿನಲ್ಲಿ, ಮತ್ತೊಂದು ರೀತಿಯ ಕೆಟ್ಟ ಪ್ರವೃತ್ತಿಗೆ ಬದಲಾಯಿಸುವ ಬಯಕೆಯನ್ನು ಹೊಂದಿದೆ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂದರೆ ಅಕ್ರಮವಾಗಿ ಅಘಾತಕ್ಕೊಳಗಾದ ಮಕ್ಕಳನ್ನು ರಕ್ಷಿಸುವ ಬದಲು, ಜೈಲಿನಲ್ಲಿಯೇ ದೀರ್ಘಕಾಲ ಕಾರಾಗೃಹ ವಾಸ ಪರಿಸ್ಥಿತಿಯಲ್ಲೇ ಇಡಲು ದುರುದ್ದೇಶ ಪೂರ್ವಕವಾಗಿಯೇ ರೂಪಿಸಲಾಗಿರುವ ನಿಯಮವಿದಾಗಿದೆ ಎಂದು ಅಮೇರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಅಲ್ಪಸಂಖ್ಯಾತ ನಾಯಕ ನ್ಯಾನ್ಸಿ ಪೆಲೋಸಿ ಹೇಳಿಕೆ ನೀಡಿದ್ದಾರೆ. ಈಗಾಗಲೇ, ಮೇ 5 ರಿಂದ ಜೂನ್ 9 ರ ನಡುವೆ ಟ್ರಂಪ್‌ರ ಆಡಳಿತದ ಶೂನ್ಯ ಸಹಿಷ್ಣುತೆ (ಜೀರೋ ಟಾಲೆರೆನ್ಸ್ ಪಾಲಿಸಿ) ನೀತಿಯ ಭಾಗವಾಗಿ ಕಾನೂನು ಬಾಹಿರ/ಅಕ್ರಮ ವಲಸೆ ಗಾರರೆಂಬ ಕಾರಣದಿಂದ ಸುಮಾರು 2,342 ಕಿರಿಯ ಮಕ್ಕಳನ್ನು ತಮ್ಮ ಪೋಷಕರಿಂದ ಬೇರ್ಪಡಿಸಿ, ವಿಚಾರಣೆಗೆ ಒಳ ಪಡಿಸಲು ಆದೇಶಿಸಲಾಗಿತ್ತು.

ಹಾಗೆಯೇ, ಇದೇ ಜೂನ್ ತಿಂಗಳಲ್ಲಿ 60 ಮಕ್ಕಳನ್ನು ಬೇರ್ಪಡಿಸಲಾಗಿದೆ. ಟ್ರಂಪ್ ರ ಕಾರ್ಯಕಾರಿ ಆದೇಶದಿಂದ ಈ ಮಕ್ಕಳಿಗೆ ಯಾವುದೇ ಪ್ರಯೋಜನ ವಾಗುತ್ತಿಲ್ಲವೆಂದು ನ್ಯಾನ್ಸಿ ಪೆಲೋಸಿ ಆರೋಪಿಸಿದ್ದಾರೆ. ಹಾಗೂ, ದುಃಖಿತ ಪೋಷಕರು ತಮ್ಮ ಮಕ್ಕಳೊಂದಿಗೆ ಪುನಃ ಸೇರಿಕೊಳ್ಳುವ ಯಾವುದೇ ಗ್ಯಾರಂಟಿ ಹೊಂದಿಲ್ಲ. ಇದರ ಉದ್ದೇಶ ಮಕ್ಕಳನ್ನು ಹಾಗೆಯೇ, ಸರಕಾರದ ಬಂಧನದಲ್ಲಿ ಇಟ್ಟುಕೊಂಡು, ಆ ನಂತರ ಪೋಷಕರನ್ನು ವಾಪಸ್ಸು ಕಳುಹಿಸುವ ಇರಾದೆ ಇರಬಹುದು ಎಂಬ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ

ಈ ವ್ಯಾಪಕ 'ಚಕ್ರವ್ಯೂಹದ ವ್ಯವಸ್ಥೆ" ಯಲ್ಲಿ ಒಮ್ಮೆ ಪೋಷಕರಿಂದ ಬೇರ್ಪಟ್ಟ ಮಕ್ಕಳನ್ನು ಮತ್ತೆ ಪತ್ತೆ ಹಚ್ಚುವುದು ತುಂಬಾ ಕಷ್ಟಕರವಾದ ಕೆಲಸವಾಗಿರುತ್ತದೆ ಏಕೆಂದರೆ, ವಲಸೆಗಾರರ ಕುಟುಂಬದ ಸಂಸ್ಕರಣೆ ಮತ್ತು ಬಂಧನದಲ್ಲಿ ತೊಡಗಿಸಿಕೊಂಡಿರುವ ನ್ಯಾಯ ಮತ್ತು ಆರೋಗ್ಯ, ಮಾನವೀಯ ಸೇವಾ ಇಲಾಖೆ ಗಳು ಮತ್ತು ಮೂರು ಗೃಹ ರಕ್ಷಣಾ ಏಜೆನ್ಸಿಗಳ ನಡುವಿನ ಕಳಪೆ ಹೊಂದಾಣಿಕೆ ಇದಕ್ಕೆ ಕಾರಣಗಳಾಗಿವೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ

ಭಾರತದವರು ಗಣನೀಯ ಸಂಖ್ಯೆಯಲ್ಲಿ :

ಕಳೆದ ಮೂರು–ನಾಲ್ಕು ವರ್ಷಗಳಿಂದೀಚೆಗೆ ಭಾರತದಿಂದ ಅಮೇರಿಕಾಕ್ಕೆ ಅಕ್ರಮವಾಗಿ ವಲಸೆ ಬಂದವರ ಸಂಖ್ಯೆ ಸುಮಾರು 27,000 ಇದೆಯೆಂದು ಒಂದು ಸಮೀಕ್ಷೆಯ ಸಾದರಪಡಿಸಿದೆ. ಟ್ರಂಪ್ ರ ಕಟ್ಟು ನಿಟ್ಟಿನ ನಿಯಮಗಳಿಂದಾಗಿ ಭಾರತೀಯರು ಕೂಡ ಬಂಧನದ ಕೇಂದ್ರಗಳಲ್ಲಿ ಇದ್ದಾರೆಂದು ವರದಿಗಳು ಸಾಬೀತು ಪಡಿಸುತ್ತವೆ. ಹಲವರು ಅಮೇರಿಕಾ ದೇಶದಲ್ಲಿ ಸ್ವರ್ಗ ಸಿಗುತ್ತದೆ ಎಂಬ ಕನಸಿನಿಂದ ಹೋಗುತ್ತಾರೆ. ಅದರಲ್ಲಿ ಅಕ್ರಮ ಮತ್ತು ಸಕ್ರಮ ವಲಸೆಗಾರರು ಇರುತ್ತಾರೆ. ಇದರಲ್ಲಿ ಉದ್ಯೋಗ ಗಳನ್ನು ಅರೆಸಿ ವೃತ್ತಿ ನಿರತ ಐ.ಟಿ, ಬಿ.ಟಿ ಪರಿಣಿತರು, ವೈದ್ಯರು, ಕೂಡ ಇರಬಹುದು. ಇದರ ಬಗ್ಗೆ ಭಾರತ ಸರ್ಕಾರ ಯಾವ ರೀತಿಯ ಜವಾಬ್ದಾರಿಯುತ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಖಾತ್ರಿಪಡಿಸಬೇಕಾಗಿದೆ.





ಈ ನೀತಿಯು ಮಕ್ಕಳನ್ನು ಹಿಂಸಾಚಾರಿಗಳನ್ನಾಗಿ ಮಾಡುವುದಾಗಿದೆ ಎಂದು ಅಮೇರಿಕದ ಮಕ್ಕಳ ಕಾರ್ಯ ನಿರ್ವಾಹಕ ಅಕಾಡಮಿಗಳು ಟೀಕಿಸಿವೆ. ಡೆಮಾಕ್ರಾಟ್ಸ್ ಪಕ್ಷ ದವರಿಂದಾಗಿ ಇಂತಹ ಬಲಹೀನವಾದ ವಲಸೆ ನೀತಿಯು ಜಾರಿಯಲ್ಲಿತ್ತು. ಇದರಿಂದಾಗಿ,ಅಕ್ರಮ ವಾಗಿ ಅಮೇರಿಕಾಕ್ಕೆ ಬರುವ ವಲಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗಿತ್ತು. ಇದರಿಂದಾಗಿ ಸಮಸ್ಯೆಗಳು ತೀವ್ರತರದಲ್ಲಿ ಹೆಚ್ಚಾದ ಕಾರಣ , ಇಂತಹ ಬೇರ್ಪಡಿಸಬೇಕಾದ ಅನಿವಾರ್ಯವಾದ ಕಠಿಣ ನೀತಿಯನ್ನು ತರಲೇ ಬೇಕಾಯಿತು ಎಂದು ಟ್ರಂಪ್ ಆಡಳಿತವು ತನ್ನ ನಿರ್ಧಾರವನ್ನು ಸಮರ್ಥಿಸುಕೊಳ್ಳುತ್ತಿದೆ. ಆದರೆ ಇದು ಜಗತ್ತಿನಾದ್ಯಂತ ವ್ಯಾಪಕ ಖಂಡನೆಗೆ ಗುರಿಯಾಗಿದೆ ಕೂಡ

ವಲಸಿಗರ ಆಶ್ರಯ ದಲ್ಲಿ ಮಾದಕ ಡ್ರಗ್ಸ್ :–

ಅಮೇರಿಕಾದ ಹೋಮ್‌ಲ್ಯಾಂಡ್ ರಕ್ಷಣಾ ಇಲಾಖೆಯ ಪ್ರಕಾರ, (ಇದು ಎಷ್ಟು ನಿಜವೋ ಗೊತ್ತಿಲ್ಲ), ಆಶ್ರಯ ತಾಣಗಳಲ್ಲಿ ಮಕ್ಕಳಿಗೆ ಉತ್ತಮ ಹಾಗೂ ಗುಣ ಮಟ್ಟದ ಆರೈಕೆಯನ್ನು ಮಾಡಲಾಗುತ್ತಿದೆ. ಒಳ್ಳೆಯ ಊಟವನ್ನು ನೀಡಲಾಗುತ್ತಿದೆ, ಶಿಕ್ಷಣವನ್ನು ಸಹಾ, ನೀಡುತ್ತಿದ್ದಾರೆ. ವೈದ್ಯಕೀಯ ವ್ಯವಸ್ಥೆ ಚೆನ್ನಾಗಿದೆ. ಟಿ.ವಿ ಮತ್ತು ವಿಡಿಯೋ ಗಳಿವೆ. ಪೋಷಕರು ಆತಂಕ ಪಡಬೇಕಾಗಿಲ್ಲ ಎನ್ನುತ್ತಾರೆ. ಆದರೆ, ಕೆಲವು ಕೇಂದ್ರಗಳಲ್ಲಿ ಮಕ್ಕಳಿಗೆ ಶಕ್ತಿಯುತ ವಾದ ಮನೋ ವೈದ್ಯಕೀಯ ಮಾದಕ ಮದ್ದು– ಔಷಧಿಗಳನ್ನು ಚುಚ್ಚಿ, ಅವರನ್ನು ಅತಿರೇಕ ಮತ್ತು ಹಿಂಸಾತ್ಮಕವಾಗಿ ವರ್ತಿಸುವಂತೆ ಮಾಡಲಾಗಿದೆ. ಮತ್ತೊಂದು ಕಡೆ ಅವರಲ್ಲಿ ಒತ್ತಾಯಪೂರ್ವಕವಾಗಿ ಹಸ್ತಮೈಥುನ ಕ್ರಿಯೆಯನ್ನು ಪ್ರಚೋದಿಸಲಾಗುತ್ತಿರುವುದನ್ನು ವೆಬ್‌ಸೈಟ್ ಗಳ ಮೂಲಕ ತೋರಿಸಲಾಗಿದೆ ಎಂಬ ಆತಂಕಕಾರಿ ವಿಷಯಗಳನ್ನು ಪೋಷಕರು ತಮ್ಮ ಆರೋಪದಲ್ಲಿ ಕ್ಯಾಲಿಫೋರ್ನಿಯದ ಯು.ಎಸ್.ನ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅಫಿಡವಿಟ್ಟು ಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇದು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂಬುದರ ನೈಜ ಸತ್ಯವಾಗಿದೆ. ಈ ಮಕ್ಕಳಲ್ಲಿ ಬಹುತೇಕ ರು, 2017 ರ ನಂತರ ವಲಸೆ ಬಂದವರು, ಅವರಲ್ಲಿ ಹೆಚ್ಚಿನವರು ಮುಸ್ಲಿಂ ದೇಶಗಳಾದ, ಇರಾನ್, ಇರಾಕ್, ಲಿಬಿಯಾ,ದವರು; ಉತ್ತರ ಕೊರಿಯಾ, ಸಿರಿಯಾ, ವೆನೆಜುವೆಲಾ, ಚಾಡ್, ಮತ್ತು ಯೆಮೆನ್ ಹಾಗೂ ನಮ್ಮ ಭಾರತೀಯರ ಮಕ್ಕಳೂ ಇದ್ದಾರೆ ಎಂಬುದು ಗಾಬರಿಯ ಸಂಗತಿಯಲ್ಲವೇ ?


ಮತ್ತೊಂದು ಆಶ್ರಯ ಬಂಧನದಲ್ಲಿ ಹೆಣ್ಣು ಮಕ್ಕಳನ್ನು ಹೇಗೆ ನಿಯಂತ್ರಿಸಲಾಗುತ್ತಿದೆ ಎಂಬ ಕಠೋರ ಸತ್ಯ ವನ್ನು ಕೋರ್ಟಿನಲ್ಲಿ ತಿಳಿಸಿದ್ದಾರೆ. ಅಲ್ಲಿಯೂ ಹೆಣ್ಣುಮಕ್ಕಳಿಗೆ ಡ್ರಗ್ಸ್ ಚುಚ್ಚುಮದ್ದು ಗಳನ್ನು ಕೊಡಲಾಗಿದೆ. ಲೈಂಗಿಕತೆ ಸೇರಿದಂತೆ, ಹಲವು ರೀತಿಯಲ್ಲಿ ದುರುಪಯೋಗ ಪಡಿಸಿ ಕೊಳ್ಳುವ ಕೇಂದ್ರಗಳಿಗೆ ಹಣವನ್ನು ಕೊಟ್ಟು ಮಕ್ಕಳನ್ನು ಬಂಧನದಲ್ಲಿ ಇಡಲಾಗಿದೆ. ಇಂತಹ ಮಕ್ಕಳು ದೀರ್ಘ ಕಾಲಿಕ ಮತ್ತು ಸರಿಪಡಿಸಲಾಗದ ದೈಹಿಕ ಮತ್ತು ಮಾನಸಿಕ ಹಾನಿಗಳಿಗೆ ತುತ್ತಾಗುವ ಆಘಾತ ಕಾರಿ ಅನುಭವಗಳನ್ನು ಮುಂದೆ ಎದುರಿಸಬೇಕಾಗುತ್ತದೆ ಎಂದು ಸಂಶೋಧಕರು ಎಚ್ಚರಿಸಿದ್ದಾರೆ.

ಅಮೇರಿಕದ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮುಖ್ಯಸ್ಥರು ಈ ನೀತಿಯ ದುಷ್ಪರಿಣಾಮಗಳನ್ನು ಪ್ರಸ್ತಾಪಿಸುತ್ತಾ, 'ಮಕ್ಕಳನ್ನು ಬಲವಂತದಿಂದ ಪೋಷಕರಿಂದ ಬೇರ್ಪಡಿಸುವುದು ಮಕ್ಕಳನ್ನು ದುರ್ಬಳಕೆಯ ಪ್ರವೃತ್ತಿಗೆ ನೂಕಿದಂತೆ, ಇದು ಮಕ್ಕಳ ಕಾನೂನು ಉಲ್ಲಂಘನೆಯಾಗಿದೆ ಎಂದು ಉಗ್ರವಾದ ಮಾತುಗಳಿಂದ ಖಂಡಿಸಿದ್ದಾರೆ.

ಈ ರೀತಿಯ ಆರೋಪ ಎಲ್ಲಾ ಕಡೆಯಿಂದ ಬಂದಿರುವುದರಿಂದ ಅಧ್ಯಕ್ಷ ಟ್ರಂಪ್ ನಿರಾಶೆಗೊಂಡು, ಇಂತಹ ದುರ್ಬಲ ಕಾನೂನು ತರಲು ಡೆಮಾಕ್ರಾಟಿಕ್ ರನ್ನು ದೂಷಿಸಿದರು, ಇದೀಗ ಯು.ಎಸ್. ನ ಅನೇಕ ನಗರಗಳಲ್ಲಿ ಪ್ರತಿಭಟನೆಗಳು ಆರಂಭಗೊಂಡಿವೆ, ನ್ಯೂಯಾರ್ಕ್ ವಿಮಾನ ನಿಲ್ದಾಣದ ಹೊರಗೆ ನೂರಾರು ಜನರು ಒಟ್ಟುಗೂಡಿ ಪ್ರತಿಭಟಿಸುತ್ತಿದ್ದಾರೆ. " ನಾವು ನಿಮ್ಮನ್ನು ಪ್ರೀತಿಸುತ್ತೇವೆ ", ಮತ್ತು " ನಾವು ನಿಮ್ಮೊಂದಿಗೆ ಇದ್ದೇವೆ." ಎಂಬ ಫ್ಲೆಕಾರ್ಡುಗಳನ್ನು ಪ್ರದರ್ಶನ ಮಾಡಿ ತಮ್ಮ ಮಕ್ಕಳನ್ನು ಬೇರ್ಪಡಿಸುವ ಕಠೋರ ನಿಯಮಗಳನ್ನು ಉಗ್ರವಾಗಿ ವಿರೋಧಿಸಿದ್ದಾರೆ. ಇದಾದ ನಂತರ ವಷ್ಟೇ, ಟ್ರಂಪ್ ಕಾರ್ಯಕಾರಿ ಆದೇಶವನ್ನು ಹೊರಡಿಸಿ, ಬೇರ್ಪಡಿಸುವ ನಿಯಮವನ್ನು ರದ್ದುಗೊಳಿಸಿದರು.

ಆದಾಗ್ಯೂ, ಈ ಆದೇಶ ದಿಂದಾಗಿ "ಶೂನ್ಯ ಸಹಿಷ್ಣುತೆ" ನೀತಿಯನ್ನು ಹಿಂತೆಗೆದುಕೊಂಡಿಲ್ಲ, ಅಥವಾ ವಲಸಿಗರಿಗೆ ಯಾವುದೇ ಪರಿಹಾರ ಒದಗಿಸಿಲ್ಲ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಇವುಗಳ ವಿರುದ್ಧ ಇದೇ ಜೂನ್ 30 ರಂದು ರಾಷ್ಟ್ರ ವ್ಯಾಪಿ ಪ್ರತಿಭಟನೆಗೆ ಸಕ್ರಿಯ ಸಿದ್ಧತೆಯ ಕಾರ್ಯ ನಡೆದಿದೆ. ●

ಉಡುಪಿ – ಸರ್ಕಾರಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಮಾವೇಶ



ಉಡುಪಿಯಲ್ಲಿ ನಡೆದ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಮಾವೇಶದಲ್ಲಿ 27 ಜೂನ್ 2018 ರಿಂದ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಜರಗುವ ಅನಿರ್ಧಿಷ್ಠಾವಧಿ ಧರಣಿ ಮುಷ್ಕರ ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದ ಸ್ವಾಮಿ ಹಾಸ್ಟೆಲ್ ಹೊರಗುತ್ತಿಗೆ ನೌಕರರಿಗೆ ಕರೆ ಇತ್ತರು.

JANASHAKTHI KANNADA VARA PATRIKE JULY 2-8, 2018 Price: Rs. 10/- Date of Publication: 29 JUNE 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



FIFA WORLD CUP RUSSIA 2018

ವಿಶ್ವ ಕಪ್ 2018 ಮೊದಲ ಸುತ್ತು ಕೊನೆ



ರಶ್ಯದಲ್ಲಿ ನಡೆಯುತ್ತಿರುವ ಫುಟ್ ಬಾಲ್ ವಿಶ್ವ ಕಪ್ ಹೆಚ್ಚಿನ ವಿವಾದಗಳಿಲ್ಲದೆ ಸುಗಮವಾಗಿ ನಡೆದಿದೆ. ಮೊದಲ ಸುತ್ತಿನ 8 ಗುಂಪುಗಳೊಳಗಿನ 32 ದೇಶಗಳ ನಡುವಿನ ಎಲ್ಲಾ ಪಂದ್ಯಗಳು ಸಾಂಗವಾಗಿ ಮುಗಿದಿವೆ. ಈ ಸುತ್ತಿನಲ್ಲಿ ಯುರೋಪಿನ 14, ದ.ಅಮೆರಿಕ, ಆಫ್ರಿಕಾ, ಏಶ್ಯಾ ಗಳ ತಲಾ 5, ಉ. ಅಮೆರಿಕದ 3 ಟೀಮುಗಳು ಭಾಗವಹಿಸಿದ್ದವು. ಎಲ್ಲಾ 8 ಗುಂಪುಗಳ ಗುಂಪು-ಪಂದ್ಯಗಳಲ್ಲಿ ಗೆದ್ದವರು, ಅಂಕಗಳು ಇತ್ಯಾದಿ ವಿವರಗಳು ಜತೆಗಿರುವ ಕೋಷ್ಟಕದಲ್ಲಿದೆ. ಪ್ರತಿ ಗುಂಪಿನಲ್ಲಿ ಹೆಚ್ಚಿನ ಅಂಕ ಪಡೆದ ಎರಡು ಟೀಮುಗಳು (ಒಟ್ಟು 16 ದೇಶಗಳು) ಮುಂದಿನ ಸುತ್ತಿಗೆ ಹೋಗಿವೆ. ಹಲವು ಅಚ್ಚರಿ ಗೆಲುವು ಸೋಲುಗಳು ಕೆಲವು ವಿವಾದಗಳು ಇದ್ದ ಈ ಸುತ್ತಿನ ಪಂದ್ಯದ ಕೆಲವು ಹೈ ಲೈಟ್ಸ್ :

* ಕಳೆದ ಬಾರಿಯ ವಿಶ್ವಕಪ್ ವಿಜೇತ ಜರ್ಮನಿ ಗುಂಪಿನ 3 ಪಂದ್ಯಗಳಲ್ಲಿ 2 ರಲ್ಲಿ ಸೋತು ಹೊರ ಬಿದ್ದಿದೆ. ಅದರ ಗುಂಪಿನ ಅಂಕಗಳಲ್ಲಿ ಕೊನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. 2006 ರಿಂದ ವಿಶ್ವಕಪ್ ಗೆದ್ದ ತಂಡಗಳು ಗುಂಪು ಹಂತದಲ್ಲೇ ನಿರ್ಗಮಿಸುವುದು ಮುಂದುವರಿದಿದೆ.
* ಮೆಸ್ಸಿ ಸೇರಿದಂತೆ ವಿಶ್ವ ಪ್ರಸಿದ್ಧ ಆಟಗಾರರಿರುವ ಅರ್ಜೆಂಟಿನಾ ಸಹ 3 ಪಂದ್ಯಗಳಲ್ಲಿ 1 ರಲ್ಲಿ ಮಾತ್ರ ಗೆದ್ದು ಬಹಳ ಕೆಟ್ಟ ಪ್ರದರ್ಶನ ನೀಡಿದೆ. ಕೊನೆಯ ಗಳಿಗೆಯಲ್ಲಿ ಮುಂದಿನ ಸುತ್ತನ್ನು ಪ್ರಯಾಸದಿಂದ ಪ್ರವೇಶಿಸಿದೆ.
* ಅರ್ಜೆಂಟಿನಾವನ್ನು 3–0ರಿಂದ ಹೀನಾಯವಾಗಿ ಸೋಲಿಸಿದ ಕ್ರೊಯೇಶಿಯ ಗುಂಪಿನಲ್ಲೂ ಮೊದಲ ಸ್ಥಾನ ಪಡೆದು ಮುಂದಿನ ಸುತ್ತು ಪ್ರವೇಶಿಸಿದೆ.
* ಗುಂಪು ಎಚ್ ನಲ್ಲಿ ಜಪಾನ್ (4–ಹಳದಿ ಕಾರ್ಡ್) ಮತ್ತು ಸೆನೆಗಲ್ (6–ಹಳದಿ ಕಾರ್ಡ್) ತಲಾ 4 ಸಮನಾದ ಅಂಕ ಗಳಿಸಿದ್ದು, ಕಡಿಮೆ ಹಳದಿ ಕಾರ್ಡುಗಳ ಆಧಾರದ ಮೇಲೆ ಮುಂದಿನ ಸುತ್ತು ಪ್ರವೇಶಿಸಿದೆ. ಅದಕ್ಕಿಂತ ಬಲಶಾಲಿಯಾದ ಸೆನೆಗಲ್ ಹೊರ ಬಿದ್ದಿದೆ.
* ಫಾರ್ವರ್ಡ್ ವಿಭಾಗದಲ್ಲಿ ಬಲಶಾಲಿಯಾದ ಪೋಲೆಂಡ್ ಟೀಮ್ ಸಹ ಗುಂಪಿನಲ್ಲಿ ಕೇವಲ 1 ಪಂದ್ಯ ಗೆದ್ದು ಕೊನೆಯ ಸ್ಥಾನ ಪಡೆದು ಹೊರ ಬಿದ್ದಿದೆ.
* 2006 ರ ಚಾಂಪಿಯನ್ ಇಟಲಿ, ಅಮೆರಿಕ ಟೀಮುಗಳು ವಿಶ್ವಕಪ್‌ಗೆ ಅರ್ಹತೆಯನ್ನು ಪಡೆಯಲಿಲ್ಲ. ಅಮೆರಿಕ 1990ರ ನಂತರ ಮೊದಲ ಬಾರಿಗೆ ಫುಟಬಾಲ್ ವಿಶ್ವಕಪ್ ಆಯ್ಕೆಯಾಗಿರಲಿಲ್ಲ.
* ಈ ಪಂದ್ಯದಲ್ಲಿ ಮೊದಲ ಬಾರಿಗೆ ಸ್ವಲ್ಪ ಮಟ್ಟಿಗೆ ವಿವಾದಿತವಾಗಿದ್ದ ವಿ.ಎ.ಆರ್. (ವಿಡಿಯೊ ಅಸಿಸ್ಟಂಟ್ ರೇಫರಿ – ಕ್ರಿಕೆಟ್ ನಲ್ಲಿ ಮೂರನೇ ಅಂಪೈರ್ ನಂತಹ) ವ್ಯವಸ್ಥೆ ಅಳವಡಿಸಲಾಗಿತ್ತು.



ವಿಶ್ವಕಪ್ ಅಂಕಪಟ್ಟಿ

	ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಅಂಕ
'ಎ' ಗುಂಪು	ಉರುಗ್ವೆ	3	3	0	0	9
	ರಷ್ಯಾ	3	2	0	1	6
	ಸೌದಿ	3	1	0	2	3
	ಈಜಿಪ್ತ್	3	0	0	3	0
'ಬಿ' ಗುಂಪು	ಸ್ಪೇನ್	3	1	2	0	5
	ಪೋರ್ಚುಗಲ್	3	1	2	0	5
	ಇರಾನ್	3	1	1	1	4
	ಮೊರಾಕ್ಕೊ	3	0	1	2	1
'ಸಿ' ಗುಂಪು	ಫ್ರಾನ್ಸ್	3	2	1	0	7
	ಡೆನ್ಮಾರ್ಕ್	3	1	2	0	5
	ಪೆರು	3	1	0	2	3
	ಆಸ್ಟ್ರೇಲಿಯಾ	3	0	1	2	1
'ಡಿ' ಗುಂಪು	ಕ್ರೊಯೇಷ್ಯಾ	3	3	0	0	9
	ಅರ್ಜೆಂಟೀನಾ	3	1	1	1	4
	ನೈಜೀರಿಯಾ	3	1	0	2	3
	ಐಸ್‌ಲೆಂಡ್	3	0	1	2	1
'ಇ' ಗುಂಪು	ಬ್ರೆಜಿಲ್	3	2	1	0	7
	ಸ್ವಿಜರ್‌ಲೆಂಡ್	3	1	2	0	5
	ಸರ್ಬಿಯಾ	3	1	0	2	3
	ಕೋಸ್ಟರಿಕಾ	3	0	1	2	1
'ಎಫ್' ಗುಂಪು	ಸ್ವೀಡನ್	3	2	0	1	6
	ಮೆಕ್ಸಿಕೊ	3	2	0	1	6
	ದ. ಕೊರಿಯಾ	3	1	0	2	3
	ಜರ್ಮನಿ	3	1	0	2	3
'ಜಿ' ಗುಂಪು	ಬೆಲ್ಜಿಯಂ	3	3	0	0	9
	ಇಂಗ್ಲೆಂಡ	2	2	0	1	6
	ಟ್ಯುನೀಷಿಯಾ	2	1	0	2	3
	ಪನಾಮಾ	2	0	0	3	0
'ಎಚ್' ಗುಂಪು	ಕೊಲಂಬಿಯಾ	3	2	0	1	6
	ಜಪಾನ್	3	1	1	1	4
	ಸೆನೆಗಲ್	3	1	1	1	4
	ಪೋಲೆಂಡ್	3	1	0	2	3

ಫುಟ್‌ಬಾಲ್ ಎಂಬ ಹೊಸ ಧರ್ಮ..... ಪುಟ 8 ರಿಂದ

ಶ್ರೇಷ್ಠ ಫುಟ್ಬಾಲ್ ಆಟಗಾರರಾದ ಬ್ರೆಜಿಲ್‌ನ ದೀದಿ, ಗಾರಿಂಚಾ, ಲಿಯೋಸಿಡಾನೋ, ಬಾರ್ಬೊಸಾ, ಸಾಮ್ರಾಟ ಪೀಲೆ, ಕರೆಕಾ, ಜೂನಿಯರ್, ರೆವಿಲಿನೋ, ರೊನಾಲ್ಡೋ, ರೊನಾಲ್ಡಿನೋ ಹಾಲೀ ತಂಡದಲ್ಲಿರುವ ಜೀಸಸ್, ವಿಲಿಯನ್ ಎಲ್ಲರೂ ನೀಗ್ರೋ ಸಂಜಾತರೇ. ಇದೇ ರೀತಿ ಪೋರ್ಚುಗಲ್‌ನ ಸರ್ವಶ್ರೇಷ್ಟ ಆಟಗಾರ ಎಸೀಬಿಯೋ, ಇಂಗ್ಲೆಂಡಿನ ಜಾನ್ ಬಾರ್ನೆಸ್, ರಹೀಮ್ ಸ್ಟೆರ್ಲಿಂಗ್, ರಷ್ಫೋರ್ಡ್, ಡ್ಯಾನಿಮೆಬ್ಲಾಕ್, ಫ್ರಾನ್ಸ್‌ನ ತಿಯರೆ ಹೆನ್ರಿ, ಅನೆಲ್ಕಾ, ಜೈದಿನ್ ಜಿದೇನ್, ಬೆಲ್ಜಿಯಂನ ರೊಮೆಲು ಲುಕಾಕು, ಹಾಲೆಂಡ್‌ನ ರೂಡ್ ಗಿಲೀಟ್, ಫ್ರಾಂಕ್ ರಿಚ್ಕಾರ್ಡ್, ಕ್ಯಾಮರೂನ್ ನ ಸ್ಯಾಮುವೆಲ್ ಇಟೋ, ರೋಜರ್ ಮಿಲ್ಲಾ, ಐವರಿ ಕೋಸ್ಟಾದ ದೀದರ್ ದ್ರೋಗ್ಬಾ, ಯೊಯೊ ಟೋರೆ ಎಲ್ಲರೂ ನಿಗ್ರೋ ಸಂಜಾತರು. ಈ ಪಟ್ಟಿಗೆ ಕೊನೆ ಇಲ್ಲ. ಅವಹೇಳನಕ್ಕೆ ಗುರಿಯಾದ ಗುಲಾಮರು ಅವರ ವಂಶಸ್ಥರು ಮುಂದೆ ಫುಟ್ಬಾಲ್ ಮೂಲಕ ಜಗದ್ವಿಖ್ಯಾತರಾದರು, ವಿಶ್ವದ ಪ್ರಸಿದ್ಧ ಕ್ಲಬ್‌ಗಳ ಮೂಲಕ ವೃತ್ತಿಪರ ಆಟಗಾರರಾಗಿ ಕೋಟ್ಯಾಧೀಶರಾದರು. ಎಲ್ಲದಕ್ಕೂ ಅವರು ಪ್ರೀತಿಸಿದ ಫುಟ್ಬಾಲ್ ಆಟವೇ ಕಾರಣ.

ವಿಶ್ವಕಪ್ ಫುಟ್ಬಾಲ್ ಜಗತ್ತಿನ ಎಲ್ಲಾ ದೇಶದ ಫುಟ್ಬಾಲ್ ಆಟಗಾರರಿಗೆ ಮುಂಚೂಣಿಗೆ ಬರಲು ಒಂದು ವೇದಿಕೆಯಾಗಿದೆ. ವಿಶ್ವದ ಮುಖ್ಯವಾಗಿ ಇಂಗ್ಲೆಂಡ್, ಸ್ಪೇನ್, ಜರ್ಮನಿಯ ಪ್ರಸಿದ್ಧ ವೃತ್ತಿಪರ ಕ್ಲಬ್‌ಗಳ ಪ್ರತಿಭಾ ಶೋಧಕರು ವಿಶ್ವಕಪ್ ವೇಳೆಯಲ್ಲಿ ಖ್ಯಾತರಾಗುವ ಆಟಗಾರರನ್ನು ತಮ್ಮತ್ತ ಸೆಳೆಯುತ್ತವೆ. ಪ್ರಪಂಚದ ಎಲ್ಲಾ ದೇಶಗಳ ಫುಟ್ಬಾಲ್ ಆಟಗಾರರಿಗೆ ಮುಖ್ಯವಾಗಿ ಆಫ್ರಿಕಾ, ಲ್ಯಾಟಿನ್ ಅಮೆರಿಕಾ ದೇಶಗಳ ಆಟಗಾರರಿಗೆ ಇಂಗ್ಲೆಂಡ್ ಹಾಗೂ ಸ್ಪೆನ್‌ನ ಪ್ರಸಿದ್ಧ ಕ್ಲಬ್‌ಗಳಿಗೆ ಆಡುವುದು ಒಂದು ಕನಸು. ಈ ಕನಸನ್ನು ನನಸಾಗಿಸಿಕೊಳ್ಳಲು ಕ್ರೀಡೆಗೆ ತಮ್ಮೆಲ್ಲಾ ಶ್ರಮವನ್ನು ಮೀಸಲಿಡುತ್ತಾರೆ.

ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಲಕ್ಷಾಂತರ ಪ್ರೇಕ್ಷಕರನ್ನು ನೇರವಾಗಿ ಹಾಗೂ ಮಿಲಿಯಾಂತರ ಪ್ರೇಕ್ಷಕರನ್ನು ದೂರದರ್ಶನದ ಮೂಲಕ ತನ್ನತ್ತ ಸೆಳೆಯುತ್ತದೆ. ಈ ಅವಧಿಯಲ್ಲಿ ವಿಶ್ವದಲ್ಲಿ ಉತ್ಪಾದನೆ ಕುಂಠಿತವಾಗುತ್ತದೆ, ವಿಶ್ವವಿದ್ಯಾಲಯದ ಪರೀಕ್ಷೆಗಳು ಮುಂದೂಡಲ್ಪಡುತ್ತವೆ, ಜೈಲಿನಲ್ಲಿ ಕೈದಿಗಳು ಪಂದ್ಯ ವೀಕ್ಷಣೆಗಾಗಿ ಉಪವಾಸ ಕೈಗೊಳ್ಳುತ್ತಾರೆ, ಭಾರತದ ಕಲ್ಕತ್ತಾ, ಕೇರಳಗಳಲ್ಲಿ ಬ್ರೆಜಿಲ್ ಹಾಗೂ ಅರ್ಜೆಂಟೈನಾ ತಂಡಗಳ ಪರವಾಗಿ ಹೋಮ, ಹವನ, ಮೆರವಣಿಗೆಗಳು ನಡೆಯುತ್ತವೆ. ವಿದ್ಯುತ್ ಕಡಿತದ ವಿರುದ್ಧ ಜನ ಸಿಡಿದೇಳುತ್ತಾರೆ, ವೀಕ್ಷಕರ ಆರೋಗ್ಯದಲ್ಲಿ ಏರುಪೇರುಗಳಾಗುತ್ತವೆ, ಜನರು ನಿದ್ದೆಗೆಡುತ್ತಾರೆ, ಟಿವಿ ಸೆಟ್‌ಗಳ ಮಾರಾಟ ಹೆಚ್ಚುತ್ತದೆ, ಸೋತ ರಾಷ್ಟ್ರಗಳ ಜನತೆ ಶೋಕಾಚರಣೆ ಮಾಡುತ್ತಾರೆ. ವಿಜೇತ ರಾಷ್ಟ್ರಗಳಲ್ಲಿ ತಿಂಗಳುಗಳ ಕಾಲ ವಿಜಯೋತ್ಸವ ನಡೆಯುತ್ತದೆ. ಫುಟ್ಬಾಲ್ ಜನ ಸಾಮಾನ್ಯರ ಕ್ರೀಡೆಯಾಗಿರುವುದೇ ಈ ಎಲ್ಲಾ ಪ್ರಸಿದ್ಧತೆಗೆ ಕಾರಣ. •

ಚಿತ್ರ ನೋಟ

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed, Published by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027
Editor : G.V.SRIRAMA REDDY